ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 10 ಭಾನುವಾರ 2022

ಸಂಪುಟ: 43 | ಸಂಚಿಕೆ: 85 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

KRS ಭರ್ತಿಗೆ ಇನ್ನು ಕೇವಲ 2 ಅಡಿ ಬಾಕಿ

●ನದಿಗೆ ಅಧಿಕ ನೀರು ಬಿಡುಗಡೆ ●ನದಿ ಪಾತ್ರದ ಜನರಿಗೆ ಮುನ್ನೆಚ್ಚರಿಕೆ



ಶ್ರೀರಂಗಪಟ್ಟಣ, ಜು.9(ವಿನಯ್‌ಕಾರೇಕುರ)– ಕೊಡಗು ಮತ್ತು ಹಾಸನ ಜಿಲ್ಲೆಯಲ್ಲಿ ಇಂದೂ ಕೂಡ ಭಾರೀ ಮಳೆಯಾಗಿದ್ದು, ಇದರ ಪರಿಣಾಮವಾಗಿ ಕೆಆರ್‌ಎಸ್ ಜಲಾಶಯದ ನೀರಿನ ಒಳ ಹರಿವು ಹೆಚ್ಚಾಗಿದೆ. ಇಂದು 33,168 ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದ್ದು, ನೀರಿನ ಮಟ್ಟ 122.17 ಅಡಿಗೆ ಏರಿಕೆಯಾಗಿದೆ. ಗರಿಷ್ಠ ಮಟ್ಟ 124.80 ಅಡಿ ತುಂಬಲು ಕೇವಲ 2 ಅಡಿ ಮಾತ್ರ ಬಾಕಿ ಇದೆ.


ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಜಲಾಶಯದಿಂದ ನದಿಗೆ ಹೆಚ್ಚಿನ ನೀರನ್ನು ಹರಿಬಿಡಲಾಗುತ್ತಿದ್ದು, ಇಂದು ಬೆಳಗ್ಗೆಯಿಂದ 10 ಸಾವಿರ ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿತ್ತು. ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆಯೇ ಸಂಜೆ ವೇಳೆಗೆ ಹೊರ ಹರಿವಿನ ಪ್ರಮಾಣವನ್ನು 13,511 ಕ್ಯೂಸೆಕ್‌ಗೆ ಹೆಚ್ಚಳ ಮಾಡಲಾಗಿದೆ.


ಕಳೆದ ಗುರುವಾರ ಒಂದೇ ದಿನ ಕೆಆರ್‌ಎಸ್ ನೀರಿನ ಮಟ್ಟ 7 ಅಡಿ ಹೆಚ್ಚಳವಾಗಿದೆ. ನಂತರದ ಎರಡೇ ದಿನದಲ್ಲಿ 3 ಅಡಿ ನೀರಿನ ಮಟ್ಟ ಹೆಚ್ಚಳವಾಗಿದ್ದು, ಜಲಾಶಯದ ಭದ್ರತೆ ದೃಷ್ಟಿಯಿಂದ ನೀರನ್ನು ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ಹೊರ ಬಿಡಲೇಬೇಕಾದ ಅನಿವಾರ್ಯತೆ ಒದಗಿ ಬಂದಿದೆ. ಕೆಆರ್‌ಎಸ್‌ನಿಂದ ಯಾವುದೇ ಕ್ಷಣದಲ್ಲಿ ಹೆಚ್ಚು ಪ್ರಮಾಣದ ನೀರನ್ನು ನದಿಗೆ ಹರಿಬಿಡಲಾಗುತ್ತದೆ. ▶ 8ನೇ ಪುಟಕ್ಕೆ

ವಿದ್ಯುತ್ ಬಿಲ್ ಬಾಕಿ ಪಾವತಿಸಿ ಎಂದು ಕೇಳಿ

ನಿಮ್ಮ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಾರೆ ಹುಷಾರ್...

●ಮೈಸೂರಿನ ಇಬ್ಬರು ಹಿರಿಯ ನಾಗರಿಕರಿಗೆ ಕ್ರಮವಾಗಿ 4.40 ಹಾಗೂ 2.74 ಲಕ್ಷ ಸುಲಿಗೆ ●ಮೊಬೈಲ್ ಸಂದೇಶಗಳ ಮೂಲಕ ನಡೆದಿದೆ ವ್ಯವಸ್ಥಿತ ಸುಲಿಗೆ ●ಲೋನ್ ಮರುಪಾವತಿ ಕತೆ ಕಟ್ಟಿಯೂ 98 ಸಾವಿರ ವಂಚನೆ





ಮೈಸೂರು, ಜು.9–ವಿದ್ಯುತ್ ಬಿಲ್ ಪಾವತಿಸಬೇಕೆಂದು ಮೊಬೈಲ್‌ಗೆ ಸಂದೇಶ ಕಳುಹಿಸಿ ಲಕ್ಷಾಂತರ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ. ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಬ್ರಿಗೇಡ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್‌ನ ನಿವಾಸಿ ಕೆ.ಬಿ.ರಾಮಪ್ರಕಾಶ್ (80) ಅವರಿಗೆ ವಿದ್ಯುತ್ ಬಿಲ್ ಪಾವತಿ ಮಾಡುವಂತೆಯೂ ಇಲ್ಲದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿಯೂ 2 ಮೊಬೈಲ್ ನಂಬರ್‌ಗಳಿಂದ ಸಂದೇಶ ಬಂದಿತ್ತು. ನಂತರ ಮತ್ತೊಂದು ನಂಬರ್‌ನಿಂದ ಕರೆ ಮಾಡಿ ಕ್ವಿಕ್ ಸಪೋರ್ಟ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳುವಂತೆ ತಿಳಿಸಲಾಗಿತ್ತು. ವಿದ್ಯುತ್ ಸಂಪರ್ಕ ಕಡಿತಗೊಳ್ಳುವುದನ್ನು ತಪ್ಪಿಸುವ ಸಲುವಾಗಿ ಅಮರು ಆ್ಯಪ್ ಇನ್‌ಸ್ಟಾಲ್ ಮಾಡಿ ಅಲ್ಲಿ ಬಂದ ನಿರ್ದೇಶನಗಳನ್ನು ಪಾಲಿಸಿದಾಗ ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸುಲಿಗೆ

●ಕಾರು ತಡೆದು ಚಾಕು ತೋರಿಸಿ 23 ಸಾವಿರ ಕಿತ್ತ ದುಷ್ಕರ್ಮಿ ●ಮತ್ತೆ ಆರಂಭವಾಗಿದೆ ಖತರ್ನಾಕ್ 'ನಕಲಿ ಅಪಘಾತ'

ಮಂಡ್ಯ, ಜು.9–ಅಪಘಾತದ ನೆಪದಲ್ಲಿ ಕಾರನ್ನು ಅಡ್ಡ ಹಾಕಿ, ಚಾಕು ತೋರಿಸಿ ಪ್ರಾಣ ಬೆದರಿಕೆ ಹಾಕಿ 23 ಸಾವಿರ ರೂ. ಸುಲಿಗೆ ಮಾಡಿದ ಘಟನೆ ಮಂಡ್ಯದ ಫ್ಯಾಕ್ಟರಿ ಸರ್ಕಲ್ ಬಳಿ ನಡೆದಿದೆ.

ಬೆಂಗಳೂರು ನಿವಾಸಿ ಟಿ.ಎಸ್.ಚಂದ್ರಶೇಖರ್ (39) ಎಂಬುವರು ಹುಂಡೈ–ಐ10 ಗ್ರಾಂಡ್ ಕಾರಿನಲ್ಲಿ (ಕೆಎಲ್ 22 ಹೆಚ್ 9020) ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದಾಗ ಮಂಡ್ಯದ ಫ್ಯಾಕ್ಟರಿ ಸರ್ಕಲ್ ಬಳಿ ಸುಜುಕಿ ಆಕ್ಸೆಸ್ ಸ್ಕೂಟರ್‌ನಲ್ಲಿ (ಕೆಎ 11 ಇಕ್ಯೂ 2858) ಕಾರನ್ನು ಅಡ್ಡ ಹಾಕಿದ ವ್ಯಕ್ತಿ ಕಾರಿನೊಳಗೆ ಬಂದು ಕುಳಿತು 'ನಿಮ್ಮ ಕಾರು ನನ್ನ ಸ್ಕೂಟರ್‌ಗೆ ಗುದ್ದಿ, ಸ್ಕೂಟರ್‌ಗೂ ಡ್ಯಾಮೇಜ್ ಆಗಿದೆ, ನನಗೂ ಗಾಯವಾಗಿದೆ. ಹೀಗಾಗಿ 23 ಸಾವಿರ ರೂ. ಕೊಡಬೇಕು' ಎಂದು ▶ 8ನೇ ಪುಟಕ್ಕೆ

ವಿದ್ಯುತ್ ಅವಘಡ: ಇಬ್ಬರ ದಾರುಣ ಸಾವು



ಶ್ರೀರಂಗಪಟ್ಟಣ, ಜು.9–ಕ್ರಷರ್‌ಗೆ ವಿದ್ಯುತ್ ಸಂಪರ್ಕ ಹೊಂದಿದ್ದ ಕಂಬ ಬದಲಿಸುವ ವೇಳೆ ವಿದ್ಯುತ್ ಸ್ಪರ್ಶವಾಗಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆ ಕೆಆರ್‌ಎಸ್–ಇಲವಾಲ ರಸ್ತೆಯ ಬಸ್ತಿಪುರ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ. ಇಲವಾಲ ಗ್ರಾಮದ ಗೋವಿಂದ ಎಂಬುವರ ಪುತ್ರ ಉಮೇಶ್ ಕುಮಾರ್(35) ಮತ್ತು ಶಂಕರಾಚಾರಿ(55) ವಿದ್ಯುತ್ ಅವಘಡದಲ್ಲಿ ಮೃತಪಟ್ಟವರು.

ಬಸ್ತೀಪುರ ಗ್ರಾಮದಲ್ಲಿರುವ ಪಿಕೆಕೆಆರ್ ಕ್ರಷರ್‌ನ ಕಾರ್ಮಿಕ ಉಮೇಶ್, ಪಕ್ಕದ ಪ್ಲಾಂಟ್‌ನ ಶಂಕರಾಚಾರಿ ಹಾಗೂ ಇತರೆ ನಾಲ್ವರೊಂದಿಗೆ ಸೇರಿ ಇಂದು ಮಧ್ಯಾಹ್ನ ವಿದ್ಯುತ್ ಕಂಬ ಬದಲಾಯಿಸುವ ಕೆಲಸದಲ್ಲಿ ನಿರತರಾಗಿದ್ದರು. ಸದರಿ ವಿದ್ಯುತ್ ಕಂಬದ ಮೇಲೆ 11 ಕೆವಿ ವಿದ್ಯುತ್ ಲೈನ್ ಹಾದು ಹೋಗಿತ್ತು. ಕಂಬವನ್ನು ಕ್ರೇನ್ ಮೂಲಕ ▶ 8ನೇ ಪುಟಕ್ಕೆ

ರಂಗನತಿಟ್ಟು ಪಕ್ಷಿಧಾಮದ ದೋಣಿ ವಿಹಾರ ತಾತ್ಕಾಲಿಕ ಬಂದ್

ಶ್ರೀರಂಗಪಟ್ಟಣ,ಜು.9(ಎಂಟಿವೈ)– ಕಾವೇರಿ ಕಣಿವೆಯಲ್ಲಿ ವ್ಯಾಪಕ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಅಣೆಕಟ್ಟೆಯಿಂದ ನದಿಗೆ ಹೆಚ್ಚಿನ ಪ್ರಮಾಣದ ನೀರು ಬಿಡುತ್ತಿರುವ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ 'ರಂಗನತಿಟ್ಟು' ಪಕ್ಷಿಧಾಮದಲ್ಲಿ ದೋಣಿ ವಿಹಾರವನ್ನು ಶನಿವಾರದಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದು, ಅಣೆಕಟ್ಟೆ ಭರ್ತಿಗೆ ಕೇವಲ 2 ಅಡಿ ಮಾತ್ರ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಭದ್ರತೆಯ ದೃಷ್ಟಿಯಿಂದ ಒಳಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ನದಿಗೆ ನೀರು ಹರಿಸಲಾಗುತ್ತಿದೆ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಇಂದು ಬೆಳಗ್ಗಿನಿಂದ 13 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದ್ದು, ನದಿ ಪಾತ್ರದ ಹಾಗೂ ತಗ್ಗು ಪ್ರದೇಶದ ಜನರು ▶ 8ನೇ ಪುಟಕ್ಕೆ



ಕೆಆರ್‌ಎಸ್ ಅಣೆಕಟ್ಟೆಯಿಂದ ಹೆಚ್ಚಿನ ಪ್ರಮಾಣದ ನೀರು ಕಾವೇರಿ ನದಿಗೆ ಬಿಟ್ಟಿರುವುದರಿಂದ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿಯಾನ ಸ್ಥಗಿತಗೊಳಿಸಲಾಗಿದೆ.

ಕೆರೆಕಟ್ಟೆ ತುಂಬಿಸಿ, ಅಂತರ್ಜಲ ವೃದ್ಧಿಸಿ ರೈತರ ಬಾವಿ ಬತ್ತದಿರಲಿ

●ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅಧಿಕಾರಿಗಳಿಗೆ ಸಲಹೆ; ರಾಜ್ಯಾದ್ಯಂತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಹೆಚ್ಚು ಒತ್ತು ●ಇಲವಾಲ ಸಮೀಪ ಆನಂದೂರು ಗ್ರಾಮದ ಬಳಿ ಏತ ನೀರಾವರಿ ಯೋಜನೆ ಕಾಮಗಾರಿ ಪರಿಶೀಲನೆ ●ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಉಪಸ್ಥಿತಿ



ಮೈಸೂರು ತಾಲೂಕು ಇಲವಾಲ ಸಮೀಪ ಆನಂದೂರು ಗ್ರಾಮದ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ನಿರ್ಮಿಸುತ್ತಿರುವ ಈರಪ್ಪನಕೊಪ್ಪಲು ಏತ ನೀರಾವರಿ ಯೋಜನೆ ಮತ್ತು ಮೈದನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿಗಳನ್ನು ಶಾಸಕ ಜಿ.ಟಿ.ದೇವೇಗೌಡರ ಉಪಸ್ಥಿತಿಯಲ್ಲಿ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಶನಿವಾರ ಪರಿಶೀಲಿಸಿದರು.

ಮೈಸೂರು,ಜು.9(ಪಿಎಂ)– ಕೆರೆ ಕಟ್ಟೆಗಳನ್ನು ತುಂಬಿಸಿ, ಅಂತರ್ಜಲ ವೃದ್ಧಿಸುವ ಮೂಲಕ ರೈತರ ಕೊಳವೆ ಬಾವಿಗಳು ಬತ್ತದಂತೆ ಕಾಪಾಡುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದ ಸಣ್ಣ ನೀರಾವರಿ ಸಚಿವರೂ ಆದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಈ ಉದ್ದೇಶದಿಂದ ರಾಜ್ಯಾದ್ಯಂತ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಇದೇ ವೇಳೆ ಮಾಧ್ಯಮವರಿಗೆ ಪ್ರತಿಕ್ರಿಯೆ ನೀಡಿದರು. ಮೈಸೂರು ತಾಲೂಕು ಇಲವಾಲ ಸಮೀಪ ಆನಂದೂರು ಗ್ರಾಮದ ಬಳಿಯ ಕೆಆರ್‌ಎಸ್ ಹಿನ್ನೀರಿನಲ್ಲಿ ಕೈಗೆತ್ತಿಕೊಂಡಿರುವ ಈರಪ್ಪನಕೊಪ್ಪಲು ಏತ ನೀರಾವರಿ ಯೋಜನೆ ಮತ್ತು ಮೈದನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿಗಳನ್ನು ಶಾಸಕ ಜಿ.ಟಿ.ದೇವೇಗೌಡರ ಉಪಸ್ಥಿತಿಯಲ್ಲಿ ಪರಿಶೀಲಿಸಿ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ರೈತರ ಬೆಳೆಗಳಿಗೆ ನೀರುಣಿಸಲು ಸದ್ಯ ಸಾವಿರ ಅಡಿ ಬೋರ್‌ವೆಲ್ ಕೊರೆಯುವ ಪರಿಸ್ಥಿತಿ ಇದೆ. ಇದನ್ನು ನಿವಾರಿಸಬೇಕಿದ್ದು, ಆ ಮೂಲಕ ಅಂತರ್ಜಲ ವೃದ್ಧಿಯಾಗಿ 300–400 ▶ 8ನೇ ಪುಟಕ್ಕೆ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆ ವಿಸ್ತರಿಸಿ

ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಂದ ಮನವಿ ಸಲ್ಲಿಕೆ

ಮೈಸೂರು,ಜು.9(ಪಿಎಂ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಏತ ನೀರಾವರಿ ಯೋಜನೆ ವಿಸ್ತರಿಸುವಂತೆ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಮನವಿ ಸಲ್ಲಿಸಿದರು. ಆನಂದೂರು ಬಳಿ ಏತ ನೀರಾವರಿ ಯೋಜನೆ ಕಾಮಗಾರಿ ಪರಿಶೀಲನೆ ವೇಳೆ ಸಚಿವರಿಗೆ ಜಿ.ಟಿ.ದೇವೇಗೌಡ ಮನವಿ ಸಲ್ಲಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಹಲವು ಮಳೆ ಅವಲಂಬಿತ ಕೆರೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸಲು ಹಾಗೂ ಈ ಹಿಂದೆ ಕೈಗೊಂಡಿದ್ದ ಆನಂದೂರು ಮತ್ತು ಎಡಹಳ್ಳಿ ಏತ ನೀರಾವರಿ ಯೋಜನೆಗಳನ್ನು ಪುನರುಜ್ಜೀವನಗೊಳಿಸುವ ಕಾಮಗಾರಿಗಳಿಗೆ ಅಗತ್ಯ ಅನುದಾನ ಮಂಜೂರು ಮಾಡುವಂತೆ ಮನವಿಯಲ್ಲಿ ಶಾಸಕರು ಕೋರಿದ್ದಾರೆ.

ಮನವಿಯಲ್ಲಿ ಕೋರಿರುವ ಕಾಮಗಾರಿಗಳು: ದೊಡ್ಡಮಾರಗೌಡನಹಳ್ಳಿ ಮತ್ತು ಇತರೆ 11 ಕರೆಗಳಿಗೆ ನೀರು ತುಂಬಿಸಲು ಆನಂದೂರು ಗ್ರಾಮದ ಬಳಿ ಹೊಸದಾಗಿ 50 ಕೋಟಿ ರೂ. ವೆಚ್ಚದಲ್ಲಿ ▶ 8ನೇ ಪುಟಕ್ಕೆ

ಟೆಂಟ್ ಟೂರಿಸಂಗೆ ನಾನೇ ಪ್ರಸ್ತಾವನೆ ಸಲ್ಲಿಸಿದ್ದೆ

- ಮಾಜಿ ಪ್ರವಾಸೋದ್ಯಮ ಸಚಿವ, ಶಾಸಕ ಸಾ.ರಾ.ಮಹೇಶ್ ಸ್ಪಷ್ಟನೆ
- ಮೈಸೂರು ಪ್ರವಾಸೋದ್ಯಮಕ್ಕೆ ಇಂತಹ ಚಿಂತನೆ ಅವಶ್ಯ
- ನಾನು ಸಚಿವನಾಗಿದ್ದಾಗಲೇ ಡಬಲ್ ಡೆಕ್ಕರ್ ಬಸ್ ಪ್ರಸ್ತಾಪಿಸಿದ್ದೆ
- ನಮ್ಮ ಅವಧಿಯ ಯೋಜನೆ ಅನುಷ್ಠಾನ ಸಂತಸದ ವಿಚಾರ





ಮೈಸೂರು, ಜು.9(ಎಂಟಿವೈ)- ಮೈಸೂರಿನ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡುವ ನಿಟ್ಟಿನಲ್ಲಿ ಮೈಸೂರಿನ ಲಲಿತಮಹಲ್ ಪ್ಯಾಲೆಸ್ ಆವರಣದಲ್ಲಿ ಟೆಂಟ್ ಟೂರಿಸಂಗೆ ಈ ಹಿಂದೆಯೇ ಕ್ರಮ ಕೈಗೊಳ್ಳಲಾಗಿತ್ತು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ನಮ್ಮ ಸರ್ಕಾರ ಪ್ರಸ್ತಾಪಿಸಿದ್ದ ಯೋಜನೆಯನ್ನು ಹಾಲಿ ಸರ್ಕಾರ ಜಾರಿಗೊಳಿಸಲು ಮುಂದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಲಲಿತಮಹಲ್ ಪ್ಯಾಲೆಸ್ ಹೋಟೆಲ್ ಆವರಣದಲ್ಲಿ ಐಷಾರಾಮಿ ಟೆಂಟ್ ನಿರ್ಮಾಣಕ್ಕೆ ಮುಂದಾಗಿರುವ ವಿಚಾರವಾಗಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ನಾನು 2018ರಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದ ವೇಳೆ ಮೈಸೂರಿನ ಲಲಿತಮಹಲ್ ಪ್ಯಾಲೆಸ್ ಹೋಟೆಲ್ ಆವರಣದಲ್ಲಿ ಐಷಾರಾಮಿ ಟೆಂಟ್ ನಿರ್ಮಿಸಲು ಉದ್ದೇಶಿಸಲಾಗಿತ್ತು. ಯುರೋಪ್, ಲಂಡನ್ ಸೇರಿದಂತೆ ಕೆಲವೆಡೆ ಪ್ರವಾಸಕ್ಕೆ ಹೋಗಿದ್ದಾಗ ಸಮುದ್ರದ ದಡ ಹಾಗೂ ಅರಣ್ಯ ಪ್ರದೇಶದ ಅಂಚಿನಲ್ಲಿ ಟೆಂಟ್ ಹಾಕಿಕೊಂಡು ಪ್ರವಾಸಿಗರು ವಿರಮಿಸುತ್ತಿದ್ದನ್ನು ನೋಡಿದ್ದೆ. ಇತ್ತೀಚಿನ ದಿನಗಳಲ್ಲಿ ಜನರು ಪ್ರವಾಸಿ ತಾಣಗಳಲ್ಲಿ ಟೆಂಟ್‌ಗಳಲ್ಲಿ ವಾಸ್ತವ್ಯ ಹೂಡಲು ಬಯಸುತ್ತಾರೆ. ಇಂತಹ ಅಭಿರುಚಿ ಹೆಚ್ಚಾಗುತ್ತಿರುವುದರಿಂದ ಮೈಸೂರಲ್ಲೂ ಟೆಂಟ್ ನಿರ್ಮಿಸುವ ಉದ್ದೇಶವಿತ್ತು ಎಂದರು.

ಲಲಿತಮಹಲ್ ಪ್ಯಾಲೆಸ್ ಆವರಣದಲ್ಲಿರುವ ಮರಗಳ ನಡುವೆ ಟೆಂಟ್ ಅಳವಡಿಸುವುದರಿಂದ ನೈಸರ್ಗಿಕ ವಾತಾವರಣದಲ್ಲಿರಲು ಬಯಸುವ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗುತ್ತಿತ್ತು. ಲಲಿತ ಮಹಲ್ ಕಟ್ಟಡದ ಪಾರಂಪರಿಕತೆಗೆ ಧಕ್ಕೆಯಾಗದಂತೆ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಇದು ಸಹಕಾರಿಯಾಗಲಿದೆ. ಕಡಿಮೆ ವೆಚ್ಚ, ಸುಲಭ ವಿಧಾನದಲ್ಲಿ ಇಂತಹ ಟೆಂಟ್ ನಿರ್ವಹಿಸಬಹುದಾಗಿದೆ. ಆ ವ್ಯವಸ್ಥೆಯನ್ನು ಸ್ಥಗಿತಗೊಳಿಸಬೇಕಾದ ಸಂದರ್ಭ ಒದಗಿ ಬಂದರೆ ಸುಲಭವಾಗಿ ಸ್ಥಳಾಂತರಿಸಲೂಬಹುದಾಗಿದೆ. ಈ ನಿಟ್ಟಿನಲ್ಲಿ ನಮ್ಮ ಅವಧಿಯಲ್ಲಿಯೇ ಈ ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿತ್ತು ಎಂದು ತಿಳಿಸಿದರು. ಲಲಿತಮಹಲ್ ಪ್ಯಾಲೆಸ್ ಹೋಟೆಲ್ ನಿರ್ವಹಣೆಯನ್ನು ತಾಜ್ ಅಥವಾ ಪ್ರತಿಷ್ಠಿತ ಸಂಸ್ಥೆ ಸುಪರ್ದಿಗೆ ವಹಿಸುವುದಕ್ಕೂ ನಮ್ಮ ಅವಧಿಯಲ್ಲಿ ಪ್ರಸ್ತಾಪ ಸಲ್ಲಿಸಲಾಗಿತ್ತು. ಮೈಸೂರು ನಗರಕ್ಕೆ ಬರುವ ಪ್ರವಾಸಿಗರು ನಗರದ ಪ್ರದಕ್ಷಿಣೆ ಹಾಕಲು ಬಸ್‌ವೊಂದನ್ನು ಮೇಲ್ಛಾವಣಿ ರಹಿತ ಬಸ್ ಆಗಿ ಪರಿವರ್ತಿಸಿ ದಸರಾ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಸಂಚರಿಸಲು ಅವಕಾಶ ಮಾಡಿಕೊಡಲಾಗಿತ್ತು. ಅದಕ್ಕೆ ವ್ಯಾಪಕ ಬೇಡಿಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಾಲ್ಕು ಡಬ್ಬಲ್ ಡೆಕ್ಕರ್ ಬಸ್ ಖರೀದಿಸಲು ಪ್ರಸ್ತಾವನೆ ಕಳುಹಿಸಲಾಗಿತ್ತು. ಪ್ರಸ್ತುತ ಆ ಬಸ್‌ಗಳು 'ಅಂಬಾರಿ' ಹೆಸರಲ್ಲಿ ಈಗ ಸಂಚರಿಸುತ್ತಿವೆ. ಈ ಹಿಂದೆ ನಮ್ಮ ಸರ್ಕಾರದ ಅವಧಿಯಲ್ಲಿ ಪ್ರಸ್ತಾಪಿಸಿದ್ದ ಯೋಜನೆಗಳಾದ ಡಬ್ಬಲ್ ಡೆಕ್ಕರ್ ಬಸ್, ಐಷಾರಾಮಿ ಟೆಂಟ್ ಟೂರಿಸಂ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದು ಶ್ಲಾಘನೀಯ. ಯಾರೇ ಜಾರಿಗೆ ತಂದರೂ ಅದಕ್ಕೆ ನಮ್ಮ ಬೆಂಬಲವಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಸಂಚಾರಿ ಚಿಕಿತ್ಸಾ ಘಟಕ, ಕಾರ್ಮಿಕ ಅದಾಲತ್ ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರು, ಜು. 9- ಕಾರ್ಮಿಕ ಇಲಾಖೆ ಹಾಗೂ ಇಲಾಖೆ ಅಧೀನದಲ್ಲಿ ಬರುವ ಮಂಡಳಿಗಳಿಗೆ ಸಂಬಂಧಿಸಿದ ಬಾಕಿ ಅರ್ಜಿಗಳನ್ನು ವಿಲೇವಾರಿ ಮಾಡುವ ಸಂಬಂಧ ಸಚಿವರು ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಹಾಗೂ ಪರಿಹಾರ ಒದಗಿಸಲು ಕಾರ್ಮಿಕ ಅದಾಲತ್-2.0 ಮತ್ತು ಕಟ್ಟಡ, ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾದ ಕಟ್ಟಡ ಕಾರ್ಮಿಕರು, ಅವರ ಅವಲಂಬಿತರಿಗೆ ಚಿಕಿತ್ಸೆ ನೀಡುವ ಸಲುವಾಗಿ ಶ್ರಮಿಕ್ ಸಂಜೀವಿನಿ ಯೋಜನೆಯಡಿ 'ಸಂಚಾರಿ ಚಿಕಿತ್ಸಾ ಘಟಕ'ಕ್ಕೆ ಮತ್ತು ಕಾರ್ಮಿಕ ಅದಾಲತ್ ಪ್ರಚಾರ ವಾಹನಕ್ಕೆ ಜಿಲ್ಲಾ ನ್ಯಾಯಾಧೀಶ ದೇವರಾಜ ಭೂತೆ ಮೈಸೂರಿನ ಜಯನಗರದಲ್ಲಿರುವ ನೂತನ ಜಿಲ್ಲಾ ನ್ಯಾಯಾಲಯದ ಕಟ್ಟಡದಲ್ಲಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕಟ್ಟಡ ನಿರ್ಮಾಣದಲ್ಲಿ ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವುದರಿಂದ ಶ್ರವಣ ಸಮಸ್ಯೆಗಳು, ನರಹಾನಿ, ಚರ್ಮರೋಗಗಳು, ಉಸಿರಾಟದ ತೊಂದರೆ ಇತ್ಯಾದಿ ಖಾಯಿಲೆಗಳು ಮತ್ತು ಔದ್ಯೋಗಿಕ ಅಪಾಯಗಳಿಂದ ಪಾರು ಮಾಡಲು ಕಾಲಕಾಲಕ್ಕೆ ಆರೋಗ್ಯ ತಪಾಸಣೆ, ಚಿಕಿತ್ಸೆಯನ್ನು ಒದಗಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕಟ್ಟಡ, ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವಲಂಬಿತರ ಆರೋಗ್ಯದ ಹಿತದೃಷ್ಟಿಯಿಂದ ಮುಖ್ಯಮಂತ್ರಿಗಳು 2021ನೇ ಸಾಲಿನ ಆಯವ್ಯಯದಲ್ಲಿ ಸಂಚಾರಿ ಆರೋಗ್ಯ ಕ್ಲಿನಿಕ್ ಯೋಜನೆಯನ್ನು ಘೋಷಿಸಿದಂತೆ ಸಂಚಾರಿ ಆರೋಗ್ಯ ಘಟಕವನ್ನು 'ಶ್ರಮಿಕ ಸಂಜೀವಿನಿ' ಹೆಸರಿನಲ್ಲಿ ಮೈಸೂರು ಉಪವಿಭಾಗದಲ್ಲಿ ಆರಂಭಿಸಲಾಗಿದೆ ಎಂದರು.

ಸಂಚಾರಿ ಆರೋಗ್ಯ ಘಟಕವು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಇಲಾಖೆಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿರುವ ಪ್ರದೇಶಗಳನ್ನು ಗುರುತಿಸಿ ನಿಗದಿತ ವೇಳಾಪಟ್ಟಿಯಂತೆ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳೊಂದಿಗೆ ಸೋಮವಾರದಿಂದ ಶನಿವಾರದವರೆಗೆ ನಿಗದಿತ ಪ್ರದೇಶಗಳಿಗೆ ಭೇಟಿ ನೀಡಿ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಸಂಪೂರ್ಣ ಉಚಿತ ಆರೋಗ್ಯ ಸೇವೆಯನ್ನು ನೀಡುತ್ತದೆ. ಈ ಘಟಕದಲ್ಲಿ ಗುಣಮುಖ ಸೇವೆಗಳು, ಪ್ರಥಮ ಚಿಕಿತ್ಸೆ, ಪ್ರಯೋಗಾಲಯ ಪರೀಕ್ಷೆ, ಕೋವಿಡ್ ಪರೀಕ್ಷೆ, ಮಾಹಿತಿ ಶಿಕ್ಷಣ ಮತ್ತು ಸಂವಹನಾ ಕಾರ್ಯಕ್ರಮಗಳು, ಅನುಸರಣಾ ಸೇವೆಗಳು, ಕುಟುಂಬ ಯೋಜನೆ, ಪ್ರಸವಪೂರ್ವ ಹಾಗೂ ನಂತರದ ಸೇವೆಗಳು, ಚುಚ್ಚುಮದ್ದು, ಸಮಾಲೋಚನಾ ಸೇವೆಗಳು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು, ಆರೋಗ್ಯ ಶಿಕ್ಷಣ ಮತ್ತು ಪರಿಸರ ನೈರ್ಮಲ್ಯ ಕಾರ್ಯಕ್ರಮಗಳು ಸೇರಿ ಇನ್ನಿತರೆ ಸೇವೆಗಳನ್ನು ಈ ಸಂಚಾರಿ ಆರೋಗ್ಯ ವಾಹನದಲ್ಲಿ ಒದಗಿಸಲಾಗುತ್ತದೆ ಎಂದರು. ಕಾರ್ಮಿಕ ಅಧಿಕಾರಿ ರಾಜೇಶ್ ಜಾದವ್ ಮಾತನಾಡಿ, ಜು.15ರಿಂದ ಆಗಸ್ಟ್ 15ರವರೆಗೆ 'ಕಾರ್ಮಿಕ ಅದಾಲತ್-2.0' ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಇಲಾಖೆಯಲ್ಲಿ ಬಾಕಿ ಇರುವ ಎಲ್ಲಾ ಅರ್ಜಿಗಳು, ಪ್ರಕರಣಗಳನ್ನು ಇತ್ಯರ್ಥ ಮಾಡಲು ಜಿಲ್ಲೆಯಾದ್ಯಂತ ವ್ಯಾಪಕ ಪ್ರಚಾರ ಕೈಗೊಳ್ಳಲು ಮಂಡಳಿಯ ವತಿಯಿಂದ ನೀಡಿರುವ ಮೂರು ಆಟೋ ಹಾಗೂ 1 ಟಾಟಾ ಎಸಿ ಮೂಲಕ ಮೈಸೂರು ನಗರ, ಎಲ್ಲಾ ತಾಲೂಕು ಹಾಗೂ ಗ್ರಾಮಗಳಲ್ಲೂ ಪ್ರಚಾರ ನಡೆಸಲಾಗುತ್ತದೆ. ಕಾರ್ಮಿಕರ ನೋಂದಣಿ, ನವೀಕರಣ, ವಿವಿಧ ಧನಸಹಾಯದ ಅರ್ಜಿಗಳು, ಅಥವಾ ಪ್ರಕರಣಗಳು, ಕಡತಗಳು ಮಂಜೂರಾಗದೆ ಅಥವಾ ಇತ್ಯರ್ಥವಾಗದೇ ಬಾಕಿ ಇದ್ದಲ್ಲಿ ಅಂತಹ ಅರ್ಜಿಗಳನ್ನು ತ್ವರಿತಗತಿಯಲ್ಲಿ ನಿಯಮಾನುಸಾರ ಪರಿಶೀಲಿಸಿ ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿದರು. ಹಿರಿಯ ಕಾರ್ಮಿಕ ನಿರ್ದೇಶಕರು ಹಾಗೂ ವಿವಿಧ ಸಂಘಟನೆಯ ಸದಸ್ಯರು ಉಪಸ್ಥಿತರಿದ್ದರು.

ಕ್ಯಾನ್‌ಫಿನ್ ಹೋಮ್ಸ್‌ನಿಂದ ಮೈಸೂರು ಜಿಲ್ಲಾ ಆಸ್ಪತ್ರೆಗೆ 17 ಲಕ್ಷ ರೂ. ಮೌಲ್ಯದ ವೈದ್ಯಕೀಯ ಸಲಕರಣೆ ಕೊಡುಗೆ



ಮೈಸೂರು: ಸಿಎಸ್‌ಆರ್ ಇನಿಶಿಯೇಟಿವ್ ಹಾಗೂ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನಿಂದ ನಗರದ ಮೇಟಗಳ್ಳಿಯ ಜಿಲ್ಲಾ ಆಸ್ಪತ್ರೆಗೆ ಸುಮಾರು 17.6 ಲಕ್ಷ ರೂ. ಮೌಲ್ಯದ ನೇತ್ರಶಾಸ್ತ್ರಕ್ಕೆ ಸಂಬಂಧಪಟ್ಟ ವೈದ್ಯಕೀಯ ಸಲಕರಣೆಗಳನ್ನು ಕೊಡುಗೆಯಾಗಿ ನೀಡಿದರು. ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನ ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ಮಲ್ಯ, ನೇತ್ರ ಚಿಕಿತ್ಸೆಗೆ ಸಂಬಂಧಿತ ಸಲಕರಣೆಗಳ ಕೊಠಡಿಯನ್ನು ಉದ್ಘಾಟಿಸಿದರು. ಸಿಎಸ್‌ಆರ್ ಉಪಕ್ರಮದ ಭಾಗವಾಗಿ 17,06,880 ಮೌಲ್ಯದ ನೇತ್ರ ವೈದ್ಯಕೀಯ ಸಲಕರಣೆಗಳನ್ನು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅಮರನಾಥ್ ಮತ್ತು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ನಯಾಜ್ ಪಾಷಾ ಅವರ ಸಮ್ಮುಖದಲ್ಲಿ ವೈದ್ಯಕೀಯ ಸಲಕರಣೆಗಳನ್ನು ಹಸ್ತಾಂತರಿಸಿದರು.

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಗುರುಪೂರ್ಣಿಮೆ ಉಪನ್ಯಾಸ, ಬೆಳದಿಂಗಳ ಸಂಗೀತ





ಮೈಸೂರು, ಜು. 9- ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜುಲೈ 13ರಂದು ಬುಧವಾರ ಸಂಜೆ 5.30 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಗುರುಪೂರ್ಣಿಮೆ ಮತ್ತು ಬೆಳದಿಂಗಳ ಸಂಗೀತ-244ರ ಅಂಗವಾಗಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರಿಂದ ಉಪನ್ಯಾಸ ಹಾಗೂ ವಿದ್ವಾನ್ ಗಾನಪ್ರವೀಣ ಯೋಗೀಶ ಶರ್ಮ ಬಳ್ಳಪದಮುರ ಅವರಿಂದ ಗಾಯನವನ್ನು ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಕೇಶವ್ ಮೋಹನ್‌ಕುಮಾರ್-ವಯೋಲಿನ್, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ- ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ.

ಅಮರನಾಥ ಮೇಘಸ್ಫೋಟ: ಮೃತ ಯಾತ್ರಿಕರ ಸಂಖ್ಯೆ 16ಕ್ಕೆ ಏರಿಕೆ

ನವದೆಹಲಿ/ಶ್ರೀನಗರ: ಜಮ್ಮು-ಕಾಶ್ಮೀರದ ಪವಿತ್ರ ಅಮರನಾಥ ಗುಹೆಯ ಬಳಿ ಮೇಘಸ್ಫೋಟದಿಂದ ಪ್ರವಾಹಕ್ಕೆ ಮೃತಪಟ್ಟ ಯಾತ್ರಿಕರ ಸಂಖ್ಯೆ 16ಕ್ಕೇರಿದೆ. 15 ಸಾವಿರ ಯಾತ್ರಿಕರನ್ನು ಪಂಜತರ್ನಿ ಮೂಲ ಶಿಬಿರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಗಡಿ ಭದ್ರತಾ ಪಡೆಯ ವಕ್ತಾರ, ಬಾಲ್ತಲ್‌ಗೆ 16 ಮೃತದೇಹಗಳನ್ನು ರವಾನಿಸಲಾಗಿದೆ, ತನ್ನ ಮಾರ್ಗವನ್ನು ಐಟಿಬಿಪಿ ವಿಸ್ತರಿಸಿದ್ದು, ಪಂಜತರ್ನಿಯವರೆಗೆ ಪವಿತ್ರ ಗುಹೆಯ ಕೆಳಭಾಗದಿಂದ ಕಳುಹಿಸಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಎನ್‌ಡಿಆರ್‌ಎಫ್ ಡಿಜಿ ಅತುಲ್ ಕಾರ್ವಾಲ್, ನಿನ್ನೆಯ ನಂತರ ಭೂಕುಸಿತ ಉಂಟಾಗಿಲ್ಲ, ಮಳೆ ಸುರಿದಿಲ್ಲ, ರಕ್ಷಣಾ ಕಾರ್ಯ ನಿರಾತಂಕವಾಗಿ ಸಾಗುತ್ತಿದೆ ಎಂದಿದ್ದಾರೆ.

ಕೇದಾರನಾಥ ಯಾತ್ರೆ ಸ್ಥಗಿತ: ಅಮರನಾಥ ಗುಹಾ ದೇಗುಲದ ಬಳಿ ಸಂಭವಿಸಿದ ಮೇಘಾಸ್ಫೋಟದಿಂದಾಗಿ ಹಠಾತ್ ಸಂಭವಿಸಿದ ಪ್ರವಾಹದಲ್ಲಿ 16 ಮಂದಿ ಮೃತಪಟ್ಟು ಹಲವರು ನಾಪತ್ತೆಯಾಗಿರುವ ಹಿನ್ನೆಲೆಯಲ್ಲಿ ಕೇದಾರನಾಥ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ. ಸೋನಪ್ರಯಾಗದಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಹಾಗೂ ಯಾತ್ರಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರುದ್ರಪ್ರಯಾಗ ಜಿಲ್ಲಾಡಳಿತ ತಿಳಿಸಿದೆ.

ನಿಧನ



ಶ್ರೀಮತಿ ಅನಿತಾ ಅಚ್ಯುತಾ

ಮೈಸೂರು, ಜು.9- ಮೈಸೂರಿನ ಇಟ್ಟಿಗೆಗೂಡಿನ ನಿವಾಸಿ ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಅಚ್ಯುತ (ಫಲಾಮೃತ) ಅವರ ಪತ್ನಿ ಶ್ರೀಮತಿ ಅನಿತಾ ಅಚ್ಯುತ (51) ಅವರು ಇಂದು ರಾತ್ರಿ 9.30ರಲ್ಲಿ ನಿಧನರಾದರು.

ಮೃತರು ಪತಿ, ಪುತ್ರಿ ಗೌರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಭಾನುವಾರ) ಮಧ್ಯಾಹ್ನ 1.30ರವರೆಗೆ ಇಟ್ಟಿಗೆಗೂಡು ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದ್ದು, ನಂತರ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಕ್ಕಳ ಮನರಂಜನೆಗೆ 'ಒಂದಿನ' ಕಿರುಚಿತ್ರ ನಿರ್ಮಾಣ



ಮೈಸೂರು,ಜು.9(ಎಂಟಿವೈ)- ಮಕ್ಕಳ ಮನರಂಜನೆಗಾಗಿ ಕಾಮಿಕ್ಸ್ ಮಾದರಿಯ 'ಒಂದಿನ' ಕಿರುಚಿತ್ರ ನಿರ್ಮಿಸಿದ್ದು, ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳಿಸಿರುವುದಾಗಿ ಅಂತಾರಾಷ್ಟ್ರೀಯ ಕಲಾವಿದರಾದ ಲೆಸ್ಲಿ ತ್ಯಾಗರಾಜನ್ ತಿಳಿಸಿದ್ದಾರೆ..

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದು ಸುಮಾರು 46 ನಿಮಿಷಗಳದ್ದಾಗಿದ್ದು, ವಿಶ್ವದ ಏಕ ವ್ಯಕ್ತಿ ಪಪ್ಪೆಟ್ ಶೋ ಚಲನಚಿತ್ರವಾಗಿದೆ. ಈ ಹಿಂದೆ ತಾವು ಸುಮಾರು 30 ವರ್ಷ ಯೂರೋಪ್ ಸೇರಿದಂತೆ ವಿವಿಧ ದೇಶಗಳಲ್ಲಿ ಸೇವೆ ಸಲ್ಲಿಸಿದ್ದೆ. ತಾಯ್ನಾಡಿಗೆ ಏನಾದರು ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ಮೈಸೂರಿಗೆ ವಾಪಸಾಗಿ ನೆಲೆಸಿದ್ದೇನೆ. ತ್ರಿ ಡಿ ಚಿತ್ರ, ವಿಶಿಷ್ಟ ವಿಧಾನದ ವರ್ಣಚಿತ್ರಗಳನ್ನು ರಚಿಸಿದ್ದೇನೆ. ಮಕ್ಕಳಿಗೆ ಅಕ್ಷರ, ಕನ್ನಡ ಪದಗಳನ್ನು ವೈಜ್ಞಾನಿಕ ಮತ್ತು ಕುತೂಹಲಕಾರಿಯಾಗಿ ತಿಳಿಸಿಕೊಡುವ ಪುಸ್ತಕಗಳನ್ನು ಬರೆದಿರುವುದಾಗಿ ತಿಳಿಸಿದರು. ಈ ವೇಳೆ ಕೆಲವು ತ್ರಿ ಡಿ ಹಾಗೂ ಇನ್ನಿತರ ವಿಶಿಷ್ಟ ರೀತಿಯ ವರ್ಣಚಿತ್ರ ಪ್ರದರ್ಶಿಸಿದರು.

ಪೌರಕಾರ್ಮಿಕರ ಖಾಲಿ ಹುದ್ದೆ ಭರ್ತಿಗೆ ಆಗ್ರಹ



ಮೈಸೂರು,ಜು.9(ಎಂಟಿವೈ)-ರಾಜ್ಯ ಸರ್ಕಾರ ಪೌರಕಾರ್ಮಿಕರ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಂಡಿರುವ ಬೆನ್ನಲ್ಲೇ, ರಾಜ್ಯ ಸಫಾಯಿ ಕರ್ಮಚಾರಿ ಕಾಯ್ದೆ ಸಮಿತಿ ಐಪಿಡಿ ಸಾಲಪ್ಪ ವರದಿ ಜಾರಿಗೆ ಮನವಿ ಮಾಡಿದೆ ಎಂದು ಸಮಿತಿಯ ನಿರ್ದೇಶಕ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆ ಭರ್ತಿ ಮಾಡಬೇಕು. ಪೌರಕಾರ್ಮಿಕರಿಗೆ ನ್ಯಾಯಸಮ್ಮತ ವೇತನ ನೀಡಬೇಕು. ಪೌರಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಸರ್ಕಾರಕ್ಕೆ ಸಫಾಯಿ ಕರ್ಮಚಾರಿ ಕಾಯ್ದೆ ಸಮಿತಿ ಮನವಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪೌರಕಾರ್ಮಿಕರ ಬೇಡಿಕೆ ಈಡೇರಿಕೆಗೆ ಮುಂದಾಗಿದೆ ಎಂದರು. ರಾಜ್ಯದಲ್ಲಿ 26,349 ನೇರ ಪಾವತಿ ಪೌರಕಾರ್ಮಿಕರಿದ್ದಾರೆ. ಆದರೆ 10,380 ಹುದ್ದೆ ಖಾಲಿ ಇವೆ. ಹೀಗಾಗಿ ಸೇವೆ ಖಾಯಂಗೊಳಿಸಬೇಕು. ಸಮರ್ಪಕವಾಗಿ ವೇತನ ನೀಡುವ ಮೂಲಕ ಅವರು ಆರ್ಥಿಕವಾಗಿ ಚೇತರಿಸಿಕೊಳ್ಳಲು ನೆರವಾಗಬೇಕೆಂದು ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ರಾಮನಗರದಲ್ಲಿ ಪುರುಷರಿಗೆ ಪ್ರತ್ಯೇಕ ಚಿಕಿತ್ಸಾ ಘಟಕ



ಬೆಂಗಳೂರು, ಜು.9(ಕೆಎಂಶಿ)- ಹಲವು ಬಗೆಯ ಸಂಕೀರ್ಣ ಅನಾರೋಗ್ಯಗಳಿಂದ ನರಳುತ್ತಿರುವ ಪುರುಷರಿಗೆ ಪ್ರತ್ಯೇಕವಾಗಿ ಅಗತ್ಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವ ಸೌಲಭ್ಯವನ್ನು ಸದ್ಯದಲ್ಲೇ ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುವುದು ಎಂದು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ದೇಶದಲ್ಲೇ ಪುರುಷರಿಗೆ ಪ್ರತ್ಯೇಕವಾದ ವೈದ್ಯಕೀಯ ಪರೀಕ್ಷಾ ಸೇವಾ ಸೌಲಭ್ಯವನ್ನು ಆರಂಭಿಸುವ ಕುರಿತು ಅಂಕುರ ಹೆಲ್ತ್ ಕೇರ್‌ನ ಡಾ.ವಾಸನ್ ಅವರ ಜತೆ ಸಚಿವರು ಮಾತುಕತೆ ನಡೆಸಿದರು.

ಈ ಬಗ್ಗೆ ಮಾತನಾಡಿದ ಸಚಿವರು, 'ಪುರುಷರೂ ಹಲವು ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಆದರೆ ಇವರಲ್ಲಿ ಹೆಚ್ಚಿನವರು ಆಸ್ಪತ್ರೆಗೇ ಬರುವುದಿಲ್ಲ. ಹೀಗಾಗಿ ಖಾಸಗಿ ಮತ್ತು ಸರಕಾರಿ ಸಹಭಾಗಿತ್ವದಡಿಯಲ್ಲಿ ಈ ವಿನೂತನ ಯೋಜನೆಯನ್ನು ಎರಡೂ ಕಡೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುತ್ತಿದೆ. ಇದಕ್ಕೆ ಸಿಕ್ಕುವ ಸ್ಪಂದನವನ್ನು ಆಧರಿಸಿ ಮುಂಬರುವ ದಿನಗಳಲ್ಲಿ ಇದನ್ನು ಎಲ್ಲೆಡೆಗೂ ವಿಸ್ತರಿಸಲಾಗುವುದು. ಈ ಯೋಜನೆಯಡಿ ಅಂಕುರ ಹೆಲ್ತ್ ಕೇರ್‌ನ ಡಾ.ವಾಸನ್ ಅವರು ವೈದ್ಯಕೀಯ ಪರೀಕ್ಷೆಗಳ ಸೌಲಭ್ಯ ಕಲ್ಪಿಸುತ್ತಾರೆ ಎಂದಿದ್ದಾರೆ.

ಮಧುಮೇಹ, ಕ್ಯಾನ್ಸರ್, ನರಕ್ಕೆ ಸಂಬಂಧಿಸಿದ ಕಾಯಿಲೆಗಳು, ಮೂಳೆಗೆ ಸಂಬಂಧಿಸಿದ ಸಮಸ್ಯೆಗಳು ಪುರುಷರನ್ನು ಹೆಚ್ಚಾಗಿ ಕಾಡುತ್ತಿವೆ. ಇದರ ಜತೆಗೆ ಒತ್ತಡದ ಜೀವನ, ಧೂಮಪಾನ, ಮದ್ಯಪಾನ, ಅವೈಜ್ಞಾನಿಕ ಆಹಾರ ಸೇವನೆಯ ಕ್ರಮ ಇತ್ಯಾದಿಗಳೂ ಪುರುಷರ ಅನಾರೋಗ್ಯಕ್ಕೆ ಕಾರಣಗಳಾಗಿವೆ. ಈಗ ಕೈಗೆತ್ತಿಕೊಂಡಿರುವ ಯೋಜನೆಯಲ್ಲಿ ಜೀವನಶೈಲಿ ಮತ್ತು ಆಹಾರ ಸೇವನೆಗೆ ಸಂಬಂಧಿಸಿದ ದೋಷಗಳನ್ನು ಪರಿಹರಿಸಲು ಗಮನಹರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಹೆಚ್ಚಿನ ಕುಟುಂಬಗಳಿಗೆ ಪುರುಷರೇ ಆಧಾರಸ್ತಂಭದಂತೆ ಇರುತ್ತಾರೆ. ಆದ್ದರಿಂದ ಇಂತಹ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಇದರಿಂದಾಗಿ ಸಂಭವನೀಯ ಅನಾರೋಗ್ಯವು ಸೃಷ್ಟಿಸುವ ಆರ್ಥಿಕ ಹೊರೆ ಮತ್ತಿತರ ಸಮಸ್ಯೆಗಳಿಂದ ಪಾರಾಗಬಹುದು ಎಂದು ಸಚಿವರು ವಿವರಿಸಿದ್ದಾರೆ. ಕಾರ್ಯಕ್ರಮದಲ್ಲಿ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಾಥಮಿಕ ಶಿಕ್ಷಣ ಸಚಿವ ನಾಗೇಶ್ ಶಿಕ್ಷಣ ವಿರೋಧಿ



ಬೆಂಗಳೂರು, ಜು.9(ಕೆಎಂಶಿ)- ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಶಿಕ್ಷಣ ವಿರೋಧಿ, ಅವಿವೇಕಿ. ಅವರನ್ನು ಸಂಪುಟದಿಂದ ಕೈಬಿಡಬೇಕೆಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ಒತ್ತಾಯಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ನೀಡಲು ಸಾಧ್ಯವಿಲ್ಲವೆಂದು ಸಚಿವರು ಹೇಳಿದ್ದರು. ನಾವು ಎಚ್ಚರಿಸಿದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಕ್ಕಳಿಗೆ ಏನು ಸೌಲಭ್ಯ ದೊರೆಯಬೇಕೋ ಅದನ್ನು ನೀಡಲು ಒಪ್ಪಿದ್ದಾರೆ.

ಬಡ ಶಾಲಾ ಮಕ್ಕಳಿಂದ ಶೂ, ಸಾಕ್ಸ್ ಕಿತ್ತುಕೊಳ್ಳಲು ಹೊರಟಿದ್ದ ಮನುಷ್ಯತ್ವವೇ ಇಲ್ಲದ ಅವಿವೇಕಿ ಎಂದು ನಾಗೇಶ್ ಅವರ ಬಗ್ಗೆ ವಾಗ್ದಾಳಿ ನಡೆಸಿದ್ದಾರೆ. ನಾಗೇಶ್ ಒಂದಾದ ಮೇಲೆ ಒಂದು ಎಡವಟ್ಟು ಮಾಡಿಕೊಂಡು ಬರುತ್ತಿದ್ದಾರೆ. ಅವರು ಶಿಕ್ಷಣ ವಿರೋಧಿ. ಮೊದಲು ಸಂಪುಟದಿಂದ ಕಿತ್ತು ಹಾಕಿ ಎಂದು ಆಗ್ರಹಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.07.2022 ಭಾನುವಾರ, ಮಳೆ ನಕ್ಷತ್ರ : ಪುನರ್ವಸು 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ-2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಮಹಿಳಾ ಉದ್ಯಮಿಗಳ ವಸ್ತು ಪ್ರದರ್ಶನ ಮತ್ತು ಮಾರಾಟ, ಸ್ಥಳ: ಕ್ರೀಡಾ ಸಭಾಂಗಣ, ಕರ್ನಾಟಕ ರಾಜ್ಯ ಮುಕ್ತ ವಿವಿ, ಬೆಳಗ್ಗೆ 9 ರಿಂದ.

■ **ವಿಠಲ ಸೇವಾ ಚಾರಿಟಬಲ್ ಟ್ರಸ್ಟ್ :** ಏಕಾದಶಿ ಪ್ರಯುಕ್ತ ಪಾಂಡುರಂಗನಿಗೆ ವಿಶೇಷ ಅಭಿಷೇಕ, ಪೂಜಾ ಕೈಂಕರ್ಯ, ಸ್ಥಳ:ದಕ್ಷಿಣ ಕಾನಡ ವಿಠಲ ಧ್ಯಾನ ಮಂದಿರ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ.

■ **ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ :** 47ನೇ ಅಖಿಲ ಭಾರತ ಶಾಸ್ತ್ರೀಯ ನೃತ್ಯೋತ್ಸವ-2022, ಉದ್ಘಾಟನೆ : ಹಿರಿಯ ವಕೀಲ ಓ. ಶ್ಯಾಮ ಭಟ್, ವಿಶೇಷ ಅತಿಥಿಗಳು : ಆಧ್ಯಾತ್ಮಿಕ ಚಿಂತಕ ಡಾ. ಶೆಲ್ವಪಿಳ್ಳೈ, ಉದ್ಯಮಿ ಸತ್ಯನಾರಾಯಣ, ಉದಯಕುಮಾರ್, ಹಿರಿಯ ನೃತ್ಯ ಕಲಾವಿದೆ ಸುಮಾ ರಾಮಪ್ರಸಾದ್, ಡಾ. ವಿ. ಮಂಜುನಾಥ್, ಹಿರಿಯ ಸಿವಿಲ್ ನ್ಯಾಯಾಧೀಶೆ ಎಂ.ಎಸ್. ಶಶಿಕಲಾ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 9 ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್-ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸಿರಿಗನ್ನಡ ವೇದಿಕೆ ರಾಜ್ಯ ಸಮಿತಿ :** ಚಿಗುರೆಲೆಯ ಸಂಭ್ರಮ ಕೃತಿ ಲೋಕಾರ್ಪಣೆ, ಶಿಕ್ಷಣ ರತ್ನ ಪ್ರಶಸ್ತಿ ಪ್ರದಾನ, ಕವಿಗೋಷ್ಠಿ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಎನ್.ಸಿ. ಮಮತ, ಸಿರಿಗನ್ನಡ ವೇದಿಕೆ ರಾಜ್ಯ ಸಮಿತಿ ಕಾರ್ಯಾಧ್ಯಕ್ಷೆ ಡಾ. ಸೌಗಂಧಿಕ ವಿ. ಜೋಯಿಸ್, ಬಿ. ಶೋಭಾ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ನರೆಡ್ಕೋ ಮೈಸೂರು :** ಬಿಲ್ಡರ್ಸ್ ಮತ್ತು ಡೆವಲಪರ್ಸ್ ಒಕ್ಕೂಟದ ಸದಸ್ಯರಿಗಾಗಿ ಬ್ಯಾಡ್‌ಮಿಂಟನ್ ಪಂದ್ಯಾವಳಿ, ಉದ್ಘಾಟನೆ : ಸ್ಕಿಲ್‌ಟೆಕ್ ಇಂಜಿನಿಯರ್ಸ್ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕುಮಾರ್, ಉಪಸ್ಥಿತರು : ಮೋಹನ್ ಕೆ. ಗೌಡ, ಸ್ಥಳ: ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್, ಕೆ.ಸಿ. ಲೇಔಟ್.

■ **ಶ್ರೀ ಮಾಯಕಾರ ಗುರುಕುಲ :** ಸಂಸ್ಥೆ ಮುಖ್ಯಸ್ಥ ಡಾ. ಮೂಗೂರು ಮಧುದೀಕ್ಷಿತ್ ಅವರಿಂದ ನಿತ್ಯಾಗ್ನಿ ಕ್ರಿಯೆ, 106ನೇ ಕಾರ್ಯಾಗಾರ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಸೈನ್ಸ್ ಫೌಂಡೇಷನ್ :** ದಶಮಾನೋತ್ಸವ ಸಂಭ್ರಮದ ಸಮಾರೋಪ ಸಮಾರಂಭ, ಇಸ್ರೋ ಬಾಹ್ಯಾಕಾಶ ವಿಜ್ಞಾನಿ ಡಾ. ಟಿ.ಎನ್. ಸುರೇಶ್ ಕುಮಾರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಸಿಎಸ್‌ಆರ್‌ಟಿಐ ಹಿರಿಯ ವಿಜ್ಞಾನಿ ಡಾ.ಟಿ. ತಿಪ್ಪೇಸ್ವಾಮಿ, ಉಪಸ್ಥಿತರು : ಯುವರಾಜ ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಎನ್.ಯಶೋಧ, ಆಹಾರ ವಿಜ್ಞಾನ ಮತ್ತು ಪೌಷ್ಟಿಕ ವಿಭಾಗದ ಮುಖ್ಯಸ್ಥ ಡಾ. ಆರ್. ಶೇಖರ್ ನಾಯಕ್, ಮೈಸೂರು ಸೈನ್ಸ್ ಫೌಂಡೇಷನ್ ಉಪಾಧ್ಯಕ್ಷ ಡಾ. ಟಿ. ಶಿವಲಿಂಗಸ್ವಾಮಿ, ಸ್ಥಳ: ಯುವರಾಜ ಕಾಲೇಜು ಅಮೃತ ಮಹೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಜೆ.ಕೆ. ಟೈರ್ಸ್ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ವಿಕ್ರಾಂತ್ ದಲಿತ ನೌಕರರ ಸಮಿತಿ :** ಅಂಬೇಡ್ಕರ್ ಜಯಂತಿ, ಸಾನಿಧ್ಯ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಜೆಕೆ ಟೈರ್ಸ್ ಉಪಾಧ್ಯಕ್ಷ ಈಶ್ವರರಾವ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ರಮೇಶ್, ಮುಖ್ಯ ಭಾಷಣಕಾರರು : ಡಾ.ಬಿ.ಪಿ. ಮಹೇಶ್‌ಚಂದ್ರ ಗುರು, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪುರುಷೋತ್ತಮ್, ಹೆಚ್.ಕೆ. ಸುಬ್ರಹ್ಮಣ್ಯ, ಗಂಗಾಧರ್, ಬಿ. ಶಿವಲಿಂಗಯ್ಯ, ಸ್ಥಳ: ಹೋಟೆಲ್ ಗೋವರ್ಧನ್ ಸಭಾಂಗಣ, ಶ್ರೀ ಹರ್ಷ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ :** ಅಸೋಸಿಯೇಷನ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವನ್ಯಜೀವಿ ಅರಣ್ಯ ಸಂರಕ್ಷಣಾಧಿಕಾರಿ ಡಾ.ವಿ. ಕರಿಕಾಳನ್, ಮುಖ್ಯ ಅತಿಥಿಗಳು : ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಅಧ್ಯಕ್ಷ ಟಿ. ಕೆಂಪಣ್ಣ, ಲೇಖಕಿ ಡಾ. ಶ್ವೇತಾ ಮಾದಪ್ಪಾಡಿ, ಅಧ್ಯಕ್ಷತೆ :ಎ.ಶಾಂತಪ್ಪ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ :** ಏಕಾದಶಿ ಪ್ರಯುಕ್ತ ಉಡುಪಿ ಪಾಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರಿಂದ ತಪ್ತ ಮುದ್ರಾಧಾರಣೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಬೆಳಗ್ಗೆ 11.30 ರಿಂದ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ ನಾಕ ಬಲಿ ಹೊಳಲು ಸುತ್ತುವುದು, ಅವಭೃತ ತೀರ್ಥಸ್ನಾನ, ರಾತ್ರಿ 8ಕ್ಕೆ ಹೂವಿನ ಪಲ್ಲಕ್ಕಿ ಉತ್ಸವ, ಮುದುವಟ್ಟು ಸೇವೆ, ಸ್ಥಳ: ಅರಮನೆ ಆವರಣದಲ್ಲಿರುವ ಕೋಟೆ ತ್ರಿಣೇಶ್ವರ ದೇವಾಲಯ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥ ಭಾಷಣ ಮತ್ತು ಸ್ವಾಮಿ ಮುಕ್ತಿದಾನಂದಜೀ ವಿರಚಿತ ಸ್ವಾಮಿ ವಿವೇಕಾನಂದ-ಎ ಮಾಂಕ್ ವಿತ್ ಅ ವಿಷನ್ ಅಂಡ್ ಅ ಮಿಷನ್ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಆಶ್ರಮದ ಆವರಣ, ಸಂಜೆ 5 ರಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಖೇಡಾ ವೇದವ್ಯಾಸ ಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ :** ಹಳೆಮನೆ ಅಂಗಳದಲ್ಲಿ ರಂಗ ತಾರೆಗಳ ನೆನಪು, 5ನೇ ವರ್ಷದ ಕಾರ್ಯಕ್ರಮದ ಪ್ರಯುಕ್ತ ರಾಷ್ಟ್ರಕವಿ ಕುವೆಂಪು ವಿರಚಿತ ಬೆರಳ್‌ಗೆ ಕೊರಳ್ ನಾಟಕ ಪ್ರದರ್ಶನ, ಉದ್ಘಾಟನೆ : ಮುಖ್ಯಮಂತ್ರಿ ಚಂದ್ರು, ಅಧ್ಯಕ್ಷತೆ : ಹಿರಿಯ ರಂಗ ನಿರ್ದೇಶಕ ಬಸವಲಿಂಗಯ್ಯ, ಮುಖ್ಯ ಅತಿಥಿಗಳು : ಗುಂಡಣ್ಣ ಚಿಕ್ಕಮಗಳೂರು, ಚಲನಚಿತ್ರ ನಟ ಮಂಡ್ಯ ರಮೇಶ್, ಉಪಸ್ಥಿತರು : ಬಿ.ಎಂ. ರಾಮಚಂದ್ರ, ನಂದಾ ಹಳೆಮನೆ, ಪ್ರಾಸ್ತಾವಿಕ ನುಡಿ : ನಾಲ್ವಡಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಕಿರಿಯ ರೆಪರ್ಟರಿ ಕಲಾವಿದರಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ : ಆರ್. ನಾಗೇಶ್, ರಂಗ ವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ಗಾನಭಾರತೀ :** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗನಿರ್ದೇಶಕ ಪ್ರಸನ್ನ, ಸಂಗೀತ : ಅನುಶೆಟ್ಟಿ, ವಸ್ತ್ರಾಲಂಕಾರ : ನಂದಿನಿ.ಕೆ.ಆರ್, ಪ್ರಸಾದನ : ಬಿ.ಎಮ್. ರಾಮಚಂದ್ರ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ-ಪ್ರೊ.ಸೈಯ್ಯದ್ ಶಹಾಬುದ್ದೀನ್, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ", ಲೇಖನ ಮತ್ತು ಪ್ರಸ್ತುತಿ-ಸುರೇಂದ್ರನಾಥ್ ಸಾತ್ವಿಕ್, 6.40 ಭಾವಗೀತೆ, 6.50 ವನಮಹೋತ್ಸವ- ಪ್ರಾಯೋಜಕರು - ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು: ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್-ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ- ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ "ಋತುಸ್ರಾವ" ಕುರಿತು ಡಾ.ಹೆಚ್.ವಿ. ರಮಾ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ, "ಕಥೆ ಕೇಳು ಪುಟ್ಟಾ"- ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ-ಗುರುಪೂರ್ಣಿಮಾ ಅಂಗವಾಗಿ ವಿಶೇಷ ಕಾರ್ಯಕ್ರಮ, ರಚನೆ ಶ್ರೀಮತಿ ತಾರಾದೇವಿ ಬಿ.ವಿ. ಪ್ರಸ್ತುತಿ- ಅಕ್ಷಯ ಸಂಸ್ಕೃತಿ ಕೇಂದ್ರದ ಮಕ್ಕಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ-ಸುಧಾ ಮಧುಸೂದನ್, 1.20 ಭಾವಗೀತೆ-ರಶ್ಮಿ ಬಿನು, 2.35 ಚಲನಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ-ಮಾರುತಿ ಪ್ರತಾಪ, ಪ್ರಸ್ತುತಿ- ಮಂಗಳೂರು ಶಕ್ತಿನಗರದ ಕರಾವಳಿ ಯಕ್ಷಗಾನದ ಮಿತ್ರಮಂಡಳಿಯ ಕಲಾವಿದರು, 7.00 ನಮ್ಮ ಕನಸಿಗೆ ನಮ್ಮದೇ ಮಾತು, 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ- ಮಹೇಶ್ ಮಲ್ಲಿಕ್- ವಯೋಲಿನ್, ಮಹಮ್ಮದ್ ಮೋಯಿನ್- ತಬಲಾ, 11.00 ಸವಿನೆನಪು

ಮೈಸೂರಿನ ಎಲ್ಲಾ ಅಮರನಾಥ ಯಾತ್ರಿಗಳು ಸುರಕ್ಷಿತ





ಅಮರನಾಥ ಯಾತ್ರಾ ಸ್ಥಳಕ್ಕೆ ತೆರಳಿದ್ದ ಮೈಸೂರಿನ ವಕೀಲರ ತಂಡವು ಸುರಕ್ಷಿತವಾಗಿ ದೆಹಲಿ ಮೆಟ್ರೋ ತಲುಪಿದೆ.



ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ತಂಡದವರು ಸುರಕ್ಷಿತವಾಗಿದ್ದಾರೆ.

ಮೈಸೂರು, ಜು. 9(ಆರ್‌ಕೆ)– ಮೇಘ ಸ್ಫೋಟದ ಹಿನ್ನೆಲೆಯಲ್ಲಿ ಅಮರನಾಥ ಯಾತ್ರೆಗೆ ತೆರಳಿದ್ದ ಮೈಸೂರಿನ ಹಲವರು ಸುರಕ್ಷಿತವಾಗಿ ವಾಪಸಾಗುತ್ತಿದ್ದಾರೆ.

ಮೈಸೂರಿನ ಕುವೆಂಪುನಗರ ನಿವಾಸಿ ಶ್ರೀನಾಥ್, ಪತ್ನಿ ರಾಜೇಶ್ವರಿ ಹಾಗೂ ನರ್ಮದಾ ಎಂಬುವರು ಸೋನ್ ಮಾರ್ಗದ ಹೋಟೆಲೊಂದರಲ್ಲಿ ಬೀಡು ಬಿಟ್ಟಿದ್ದು, ಅತ್ತ ಮೇಘಸ್ಫೋಟದಿಂದ ಯಾತ್ರೆ ರದ್ದಾಗಿದೆ. ಇತ್ತ ಇವರು ಅಲ್ಲಿಂದ ಹೊರ ಬರಲು ಸಾಧ್ಯವಾಗದೇ ಕಂಗಾಲಾಗಿದ್ದರು. ಕಳೆದ ಮಂಗಳವಾರ ಮೈಸೂರಿನಿಂದ ಬೆಂಗಳೂರಿಗೆ ತೆರಳಿ ಅಲ್ಲಿಂದ ವಿಮಾನದಲ್ಲಿ ಶ್ರೀನಗರ ತಲುಪಿದ್ದಾರೆ. ಅಮರನಾಥ ಗುಹೆ ಬಳಿ ಮೇಘ ಸ್ಫೋಟದಿಂದ 15ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಅಮರನಾಥ ಯಾತ್ರೆ ರದ್ದು ಮಾಡಲಾಗಿದೆ ಎಂದು ಶ್ರೀನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬೆಂಗಳೂರಿನಿಂದ ನಮ್ಮ ಮಗಳು, ಅಳಿಯ, ಬೀಗರು ಮತ್ತು ಅವರ ಕುಟುಂಬದ 15 ಮಂದಿ ಅಮರನಾಥ ಯಾತ್ರೆ ಕೈಗೊಂಡಿದ್ದು, ಅಲ್ಲಿ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತಾದರೂ ನಂತರ ಸುರಕ್ಷಿತವಾಗಿ ವಾಪಸಾಗುತ್ತಿದ್ದಾರೆ ಎಂದರು.

ನಾವು ಸದ್ಯಕ್ಕೆ ಶ್ರೀನಗರದ ಸೋನ್ ಮಾರ್ಗ ನಗರದ ಹೋಟೆಲೊಂದರಲ್ಲಿ ವಾಸ್ತವ್ಯ ಹೂಡಿದ್ದೇವೆ. ಊಟ–ತಿಂಡಿಗೆ ತೊಂದರೆ ಇಲ್ಲ. ಆದರೆ, ಮುಂದೆ ನಾವು ಏನು ಮಾಡಬೇಕು, ರಸ್ತೆ, ವಿಮಾನ, ರೈಲು ಸಂಚಾರ ಯಾವಾಗ ಆರಂಭವಾಗುತ್ತದೆ ಎಂಬುದರ ಬಗ್ಗೆ ಮಾಹಿತಿ ಸಿಗುತ್ತಿರಲಿಲ್ಲ. ಹೆಲ್ಪ್ ಡೆಸ್ಕ್ ಇಲ್ಲ, ಅತ್ತ ಕರ್ನಾಟಕ ಸರ್ಕಾರವೂ ನಮ್ಮನ್ನು ಸುರಕ್ಷಿತವಾಗಿ ಕರೆಸಿಕೊಳ್ಳುವ ಬಗ್ಗೆ ಪ್ರಯತ್ನಿಸದಿರುವುದರಿಂದ ನಾವು ಕಂಗಾಲಾಗಿದ್ದೇವೆ. ಆದರೆ ಇಂದು ಸಂಜೆ ನಮಗೆ ಸುರಕ್ಷಿತವಾಗಿ ವಾಪಸಾಗಲು ಸ್ಥಳೀಯ ಅಧಿಕಾರಿಗಳು ನೆರವಾಗುತ್ತಿದ್ದಾರೆ ಎಂದು ಶ್ರೀನಾಥ್ ಹೇಳಿದರು.

ಇಲ್ಲಿ ಮೊಬೈಲ್ ಫೋನ್ ಸಂಪರ್ಕಗಳೂ ಸರಿಯಾಗಿ ಸಿಗುತ್ತಿರಲಿಲ್ಲ. ಇಂಟರ್‌ನೆಟ್ ಕನೆಕ್ಷನ್ ಸಿಗ್ನಲ್‌ಗಳೂ ಇರಲಿಲ್ಲ, ಸ್ಥಳೀಯ ಆಡಳಿತದವರೂ ಸಹ ನಮ್ಮ ನೆರವಿಗೆ ಬರುತ್ತಿಲ್ಲ. ಅಮರನಾಥ ಯಾತ್ರೆಯಂತೂ ಸಾಧ್ಯವಿಲ್ಲ. ಆದರೂ ಪರಿಸ್ಥಿತಿಯನ್ನು ನೋಡಿ ಸಾಧ್ಯವಾದರೆ ಅಮರನಾಥ ದರ್ಶನ ಮಾಡುತ್ತೇವೆ. ತಪ್ಪಿದ್ದಲ್ಲಿ ಯಾತ್ರೆ ರದ್ದುಗೊಳಿಸಿ ವಾಪಸಾಗುತ್ತೇವೆ ಎಂದ ಅವರು, ಜುಲೈ 14ರಂದು ಹಿಂದಿರುಗಲು ರಿಟರ್ನ್ ಫ್ಲೈಟ್ ಟಿಕೆಟ್ ಬುಕ್ ಮಾಡಿದ್ದೆವು. ಆದರೆ ವಿಮಾನ ಹಾರಾಟವೂ ರದ್ದಾಗಿರುವುದರಿಂದ ತೊಂದರೆಯಾಗುತ್ತದೆ. ನಮ್ಮಂತೆ ಕರ್ನಾಟಕದಿಂದ ಬಂದಿರುವ ನೂರಾರು ಮಂದಿಗೂ ಇದೇ ಪರಿಸ್ಥಿತಿ ಎದುರಾಗಿದೆ ಎಂದು ಶ್ರೀನಾಥ್ ತಿಳಿಸಿದರು.


ವಕೀಲರ ತಂಡ ಸೇಫ್: ದಕ್ಷಿಣ ಕಾಶ್ಮೀರದ ಹಿಮಾಲಯದ ತಪ್ಪಲಲ್ಲಿರುವ ಅಮರನಾಥ ಯಾತ್ರಾ ಸ್ಥಳಕ್ಕೆ ತೆರಳಿದ್ದ ಮೈಸೂರಿನ ವಕೀಲರ ತಂಡವು ಸುರಕ್ಷಿತವಾಗಿ ದೆಹಲಿ ಮೆಟ್ರೋ ತಲುಪಿದೆ. ಮೈಸೂರು ತಾಲೂಕು ಮರಟಿಕ್ಯಾತನಹಳ್ಳಿಯ ಎ.ಜಿ.ಸುಧೀರ್, ಗುಂಗ್ರಾಲ್ ಛತ್ರದ ಶಿವರಾಮ್, ಎಸ್.ರಘು, ಮೈಸೂರಿನ ಜಿ.ಕೆ. ಜೋಷಿ, ಕೆ.ಟಿ.ವಿಷ್ಣು, ಲೋಕೇಶ್, ಪ್ರದೀಪ್‌ಕುಮಾರ್, ಹೊಸಹುಂಡಿಯ ಸಂತೋಷ್, ನಂಜನಗೂಡಿನ ಮೋಹನ್‌ಕುಮಾರ್, ಶ್ರೀರಂಗಪಟ್ಟಣದ ಕೃಷ್ಣಸ್ವಾಮಿ ಅಮರನಾಥ ಯಾತ್ರೆ ಮುಗಿಸಿ ಹಿಂದಿರುಗುತ್ತಿದ್ದಾರೆ.

ಜುಲೈ 4ರಂದು ಯಾತ್ರೆಗೆ ತೆರಳಿದ್ದ ಅವರು, ಅಮರನಾಥ ದರ್ಶನ ನಂತರ ಉಂಟಾದ ಮೇಘ ಸ್ಫೋಟದಿಂದ ಭಯಭೀತರಾಗಿದ್ದರು. ಆದರೆ ಅಂದು ಭಾರತೀಯ ಸೈನ್ಯವು ಅವರನ್ನು ಸುರಕ್ಷಿತವಾಗಿ ಹಿಮಾಲಯದ ತಪ್ಪಲಿಗೆ ತಲುಪಿಸಿದೆ. ಅಲ್ಲಿಂದ ಅವರು ಬಾಲ್‌ಘಾಟ್‌ಗೆ ಬಂದು ನಂತರ ಖಾತ್ರ ತಲುಪಿ ಅಲ್ಲಿಂದ ಅಮೃತಸರ ಮುಖಾಂತರ ದೆಹಲಿ ತಲುಪಿದ್ದಾರೆ. ಭಾನುವಾರ ವಿಮಾನದಲ್ಲಿ ಬೆಂಗಳೂರಿಗೆ ಬಂದು ರಾತ್ರಿ ವೇಳೆಗೆ ವಕೀಲರು ಮೈಸೂರು ತಲುಪುವರು ಎಂದು ಮೂಲಗಳು ತಿಳಿಸಿವೆ.

ಯೋಗ ತಂಡ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ (SPYSS)ಯ ರಾಮಸ್ವಾಮಿ, ಕಿರಣ್, ವಿಠಲರಾಜು, ಲಿಂಗಪ್ಪ, ಬಾಬು, ವಿಭಾ ಅವರು ಜುಲೈ 3ರಂದು ಅಮರನಾಥ ಯಾತ್ರೆಗೆ ತೆರಳಿದ್ದರು. ಅವರೆಲ್ಲರೂ ಸುರಕ್ಷಿತವಾಗಿದ್ದು, ಇಂದು ಸಂಜೆ ಜಮ್ಮು ತಲುಪಿದ್ದಾರೆ. ನಿನ್ನೆ ಮೇಘ ಸ್ಫೋಟವಾದಾಗ ಅವರು ಗುಹೆ ಸಮೀಪವೇ ಇದ್ದರಾದರೂ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಆದರೆ ದೇವರ ದರ್ಶನ ಮಾಡಲು ಸಾಧ್ಯವಾಗಲಿಲ್ಲ ಎಂದು ಕಿರಣ್ ತಿಳಿಸಿದ್ದಾರೆ.

ಮತ್ತೊಂದೆಡೆ ಮೈಸೂರಿನ ಜೆಪಿ ನಗರ ನಿವಾಸಿ ಕೆ.ಇ. ಮಂಜುನಾಥ ಶಾಸ್ತ್ರಿ ಅವರು ಜೂನ್ 25ರಂದು ಯಾತ್ರೆಗೆ ಹೊರಟು ಜುಲೈ 2ರಂದು ಅಮರನಾಥ ದರ್ಶನ ಮುಗಿಸಿ ಶುಕ್ರವಾರ ಹಿಂದಿರುಗಿದ್ದಾರೆ. ನಾನು ಮನೆಗೆ ಹಿಂದಿರುಗುತ್ತಿದ್ದಂತೆಯೇ ಮೇಘಸ್ಫೋಟದ ವಿಷಯ ತಿಳಿದು ಆತಂಕವಾಯಿತು ಎಂದು ಶಾಸ್ತ್ರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕನ್ನಡಿಗರ ರಕ್ಷಣೆಗೆ ಅಗತ್ಯ ಕ್ರಮ



ಬೆಂಗಳೂರು, ಜು.9(ಕೆಎಂಶಿ)– ಅಮರನಾಥದಲ್ಲಿ ಮೇಘಸ್ಫೋಟದಿಂದ 15 ಜನ ಸಾವನ್ನಪ್ಪಿದ್ದು, ಪ್ರಾಥಮಿಕ ಮಾಹಿತಿಯ ಪ್ರಕಾರ ನೂರಕ್ಕೂ ಹೆಚ್ಚು ಜನ ಕನ್ನಡಿಗರು ಅಮರನಾಥಯಾತ್ರೆಯಲ್ಲಿದ್ದಾರೆ. ಕನ್ನಡಿಗರ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ರಾಜ್ಯದಿಂದ ಅಮರನಾಥ ಯಾತ್ರೆ ಕೈಗೊಂಡಿದ್ದ ಕನ್ನಡಿಗರು ಸುರಕ್ಷಿತವಾಗಿದ್ದು, ಬೇರೆ ಯಾವ ಅಹಿತಕರ ಸುದ್ದಿಯೂ ಬಂದಿಲ್ಲ. ಅಲ್ಲಿನ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜೊತೆ ಸಂಪರ್ಕದಲ್ಲಿದ್ದೇವೆ ಎಂದರು.

ರಕ್ಷಣಾ ಕಾರ್ಯಕ್ಕಾಗಿ ಸಹಾಯವಾಣಿಯನ್ನೂ ಸಹ ತೆರೆಯಲಾಗಿದೆ. ಈಗಾಗಲೇ 15–20 ಜನ ಕರೆ ಮಾಡಿ ತಾವು ಸಿಲುಕಿರುವ ಸ್ಥಳದ ಬಗ್ಗೆ ಮಾಹಿತಿ ನೀಡಿದ್ದಾರೆ. ರಕ್ಷಣಾ ಕಾರ್ಯವನ್ನು ಕೂಡಲೇ ಕೈಗೊಳ್ಳಲಾಗುವುದು ಎಂದರು.

ಕೇಂದ್ರ ಸರ್ಕಾರ, ಗಡಿ ರಕ್ಷಣಾ ಪಡೆ, ಇಂಡಿಯನ್ ಟಿಬೆಟ್ ಫೋರ್ಸ್ ಎಲ್ಲರೂ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. ಮುಖ್ಯ ಕಾರ್ಯದರ್ಶಿಗಳು ನೇರವಾಗಿ ಕೇಂದ್ರ ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದಾರೆ. ತೊಂದರೆಗೆ ಸಿಲುಕಿರುವವರು ಸಹಾಯವಾಣಿಗೆ ಕರೆ ಮಾಡಿದರೆ ಕೂಡಲೇ ರಕ್ಷಣೆಗೆ ಕ್ರಮ ವಹಿಸಲಾಗುವುದು ಎಂದರು.

ಸಹಾಯವಾಣಿ ವಿವರ

ಎನ್.ಡಿ.ಆರ್.ಎಫ್: 011–23438252, 011–23438253

ಕಶ್ಮೀರ್ ಡಿವಿಷನಲ್ ಹೆಲ್ಪ್‌ಲೈನ್: 0914– 2496240

ದೇವಸ್ಥಾನ ಮಂಡಳಿಯ ಸಹಾಯವಾಣಿ: 0194–2313149

ಕರ್ನಾಟಕ ರಾಜ್ಯ ತುರ್ತು ಕೇಂದ್ರ : 080–1070, 22340676

ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ

ದೇಶದ ಪ್ರಗತಿಗೆ ಶಿಕ್ಷಣ ಬಹಳ ಮುಖ್ಯ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಮತ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಏರ್ಪಡಿಸಿದ್ದ 'ಮಕ್ಕಳ ನಡೆ ಶಾಲೆಯ ಕಡೆ' ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾಂಗ್ರೆಸ್ ಮುಖಂಡರು ಚಿತ್ರದಲ್ಲಿದ್ದಾರೆ.

ಮೈಸೂರು, ಜು.9(ಜಿಎ)– ಯಾವುದೇ ಒಂದು ದೇಶ ಪ್ರಗತಿಯಾಗಬೇಕು ಎಂದರೆ ಶಿಕ್ಷಣ ಬಹಳ ಮುಖ್ಯ ಎಂದು ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕಾರ್ಮಿಕ ವಿಭಾಗ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಾಗೂ ಶಿಕ್ಷಕರ ಮತ್ತು ಪದವೀಧರರ ಘಟಕದ ವತಿಯಿಂದ ನಗರದ ಕಾಂಗ್ರೆಸ್ ಭವನದಲ್ಲಿ ಏರ್ಪಡಿಸಿದ್ದ 'ಮಕ್ಕಳ ನಡೆ ಶಾಲೆಯ ಕಡೆ' ಕಾರ್ಯಕ್ರಮ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿದ್ಯೆಗೆ ಬಡ, ಶ್ರೀಮಂತ ಎಂಬ ಭೇದವಿಲ್ಲ. ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ವಿದ್ಯಾರ್ಥಿಗಳು ಈಗ ಕಷ್ಟ ಪಟ್ಟು ವಿದ್ಯೆ ಕಲಿತರೆ, ಮುಂದಿನ 30 ವರ್ಷ ಉತ್ತಮ ಜೀವನ ನಡೆಸಲು ಸಹಕಾರಿಯಾಗುತ್ತದೆ. ಕಳೆದ ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶವನ್ನು ನೋಡಿದರೆ, ಅದರಲ್ಲಿ ಬಡತನ ರೇಖೆಯಲ್ಲಿರುವ ವಿದ್ಯಾರ್ಥಿಗಳು ಅತೀ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿರುವುದನ್ನು ನೋಡಿ ಸಂತಸವಾಯಿತು ಎಂದರು.

ನಮಗಿಂತ ಅತಿ ಚಿಕ್ಕ ದೇಶ ಫಿಲಿಫೈನ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ. ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಆ ದೇಶ ವೇಗವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿದೆ. ಈ ಹಿಂದೆ ಮನಮೋಹನ್ ಸಿಂಗ್ ಅವರ ಸರ್ಕಾರವಿದ್ದಾಗ ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ 6ರಿಂದ 16 ವರ್ಷದ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಕಡ್ಡಾಯಗೊಳಿಸಿದ್ದರು. ಇದಕ್ಕೆ ಪ್ರಮುಖ ಕಾರಣ ದೇಶದ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ವಿದೇಶಗಳಿಗೆ ತೆರಳುತ್ತಿದ್ದರು, ಅದನ್ನು ತಡೆಯಲು ಈ ನಿರ್ಧಾರ ತೆಗೆದುಕೊಂಡಿದ್ದರು ಎಂದರು.

ಮಾಜಿ ಶಾಸಕ ವಾಸು, ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಕಾರ್ಮಿಕ ವಿಭಾಗದ ಅಧ್ಯಕ್ಷ ಮಾದೇಗೌಡ, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಎ.ರಫಿಕ್ ಅಲಿ, ಕಾರ್ಮಿಕ ವಿಭಾಗದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾಗರಾಜ್, ಮೈಸೂರು ಶಿಕ್ಷಕರ ಮತ್ತು ಪದವೀಧರರ ಘಟಕ ಅಧ್ಯಕ್ಷ ರಾಘವೇಂದ್ರ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಹಾಗೂ ನಗರದ ವಿವಿಧ ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

> "ಸರ್ಕಾರ ಶಿಕ್ಷಣಕ್ಕೆ ಒತ್ತು ನೀಡುವ ಸಲುವಾಗಿ ಉಚಿತ ಪಠ್ಯಪುಸ್ತಕ, ವಿದ್ಯಾರ್ಥಿ ವೇತನ ಮತ್ತು ಬಿಸಿಯೂಟ ನೀಡುತ್ತಿದೆ. ಸ್ವಾತಂತ್ರ್ಯ ಬಂದಾಗ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಶೇ.12ರಷ್ಟಿತ್ತು. ಈಗ ಶೇ.80ರಷ್ಟಿದೆ ಹಾಗೂ ಅಂದು ದೇಶದಲ್ಲಿ 9 ವಿವಿಗಳು ಮಾತ್ರವಿತ್ತು. ಈಗ 900ಕ್ಕೂ ಹೆಚ್ಚು ವಿವಿಗಳಿವೆ. ಇಂದಿನ ಸರ್ಕಾರ ಮಕ್ಕಳಿಗೆ ಶೂ, ಸಾಕ್ಸ್ ನೀಡಲು ವಿಳಂಬ ಮಾಡುತ್ತಿದೆ. ಇದರ ಬಗ್ಗೆ ನೀವು ತಲೆಕೆಡಿಸಿಕೊಳ್ಳದೆ ಸರ್ಕಾರದ ಈ ಸವಲತ್ತುಗಳನ್ನು ಬಳಸಿಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳುವುದರ ಜೊತೆಗೆ ದೇಶದ ಪ್ರಗತಿಗೂ ಶ್ರಮಿಸಬೇಕು. –ಆರ್.ಧ್ರುವನಾರಾಯಣ್



ರೋಟರಿ ಮೈಸೂರು ಜೆ.ಪಿ.ನಗರದ ಅಧ್ಯಕ್ಷರಾಗಿ ಡಾ.ಮುಳ್ಳೂರು ನಂಜುಂಡಸ್ವಾಮಿ ಅಧಿಕಾರ ಸ್ವೀಕರಿಸಿದರು. ಜಿಲ್ಲಾ ಮಾಜಿ ಗವರ್ನರ್ ಮತ್ತು ಅಂತಾರಾಷ್ಟ್ರೀಯ ಜಿಲ್ಲೆ 3181ರ ಸಿಓಎಲ್ ಪ್ರತಿನಿಧಿ ಎಂ.ಲಕ್ಷ್ಮೀನಾರಾಯಣ್ ಅಧಿಕಾರ ಪ್ರದಾನ ಮಾಡಿದರು. ನೂತನ ಪದಾಧಿಕಾರಿಗಳಾಗಿ ಅನಿಲ್ ಸಾಲ್ಡಾನ (ಕಾರ್ಯದರ್ಶಿ), ಎಂ.ಮರಿಸ್ವಾಮಿ (ಸಹ ಕಾರ್ಯದರ್ಶಿ), ರಾಘವೇಂದ್ರ (ಸಾರ್ಜೆಂಟ್ ಅಟ್ ಆರ್ಮ್ಸ್), ಎಂ.ರವಿ (ಖಜಾಂಚಿ), ಲೋಹಿತ್ (ನಿಯೋಜಿತ ಅಧ್ಯಕ್ಷ), ಕೃಷ್ಣ ಅರಸ್ (ಉಪಾಧ್ಯಕ್ಷ), ನಿರ್ದೇಶಕರಾಗಿ ಡಾ.ವೆಂಕಟೇಶ್, ಡಾ.ಮಹದೇವಗೌಡ, ನಗರ್ಲೆ ಮಹಾದೇವಸ್ವಾಮಿ, ಬಾಲಸುಬ್ರಹ್ಮಣ್ಯಂ, ಹೆಚ್.ವೇಣು ನೇಮಕವಾದರು. ಸಹಾಯಕ ಗವರ್ನರ್ ಮೇಜರ್ ಡೋನರ್ ವೆಂಕಟೇಶ್, ವಲಯ ಸೇನಾನಿ ಸತೀಶ್, ಕುಮಾರ್, ರವಿಶಂಕರ್ ವೇದಿಕೆಯಲ್ಲಿದ್ದರು.

ಪ್ರಕೃತಿ ವಿಕೋಪ ಪರಿಹಾರಕ್ಕೆ 55 ಕೋಟಿ ರೂ. ಬಿಡುಗಡೆ

ಮೈಸೂರು, ಜು.9(ಎಸ್‌ಪಿಎನ್)– 2022–23ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗೆ ವೆಚ್ಚ ಮಾಡಲು ರಾಜ್ಯ ವಿಪತ್ತು ಪರಿಹಾರ ನಿಧಿಗೆ 55 ಕೋಟಿ ರೂ. (5,500 ಲಕ್ಷ ರೂ.) ಅನುದಾನವನ್ನು ಕಂದಾಯ ಇಲಾಖೆ ಜು.8ರಂದು ಬಿಡುಗಡೆಗೊಳಿಸಿದೆ.

ಮೈಸೂರು 5 ಕೋಟಿ, ಮಂಡ್ಯ 5, ಚಾಮರಾಜನಗರ 3 ರಾಮನಗರ 1 ಹಾಗೂ ಹಾಸನ 2 ಕೋಟಿ ರೂ. ಅನುದಾನ ಸೇರಿದಂತೆ ಒಟ್ಟು 26 ಜಿಲ್ಲೆಗಳಿಗೆ 55 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು) ಅಧೀನ ಕಾರ್ಯದರ್ಶಿ ಜಿ.ಎನ್.ಸುಶೀಲ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಈ ಆದೇಶದಲ್ಲಿ ತಿಳಿಸಿರುವಂತೆ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ನಿಯಮಗಳನ್ವಯ ಪ್ರವಾಹ ಮತ್ತು ಇತರೆ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗೆ ಮಾತ್ರ ಅನುದಾನ ಬಳಸಿಕೊಳ್ಳುವ ಷರತ್ತು ಸೇರಿದಂತೆ ಒಟ್ಟು 3 ಷರತ್ತುಗಳನ್ನು ಉಲ್ಲೇಖಿಸಿ ಅನುದಾನ ಬಳಕೆಗೆ ಅನುಮತಿ ನೀಡಲಾಗಿದೆ.

ಬಾಲಕಿಗೆ ಲೈಂಗಿಕ ದೌರ್ಜನ್ಯ: ಪ್ರಕರಣ ದಾಖಲು

ಮೈಸೂರು, ಜು.9–ತಾಯಿ ಮತ್ತು ಅಕ್ಕನಿಗೆ ತೊಂದರೆ ಕೊಡುವುದಾಗಿ ಹೆದರಿಸಿ ಅಪ್ರಾಪ್ತ ಬಾಲಕಿ ಮೇಲೆ ಸತತವಾಗಿ ಲೈಂಗಿಕ ದೌರ್ಜನ್ಯ ನಡೆಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ನಾಯ್ಡುನಗರ ನಿವಾಸಿ ರಿಯಾಜ್ ಅಹಮದ್ (40) ಎಂಬಾತ 14 ವರ್ಷದ ಬಾಲಕಿಯ ತಮ್ಮ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಅವರ ಕುಟುಂಬಕ್ಕೆ ಸಹಾಯ ಮಾಡುವ ಸೋಗಿನಲ್ಲಿ ಬಾಲಕಿಯ ತಾಯಿ ಮತ್ತು ಅಕ್ಕ ಆಸ್ಪತ್ರೆಯಲ್ಲಿರುವ ವೇಳೆ ಮನೆಯಲ್ಲಿ ಬಾಲಕಿ ಒಬ್ಬಳೇ ಇದ್ದಾಗ 2021ರ ಮೇ 9ರಂದು ಮೊದಲ ಬಾರಿಗೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಈ ವಿಚಾರ ಯಾರಿಗಾದರೂ ಹೇಳಿದರೆ ತಾಯಿ ಮತ್ತು ಅಕ್ಕನಿಗೆ ತೊಂದರೆ ಕೊಡುವುದಾಗಿ ಹೆದರಿಸಿ ನಂತರದ ದಿನಗಳಲ್ಲೂ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ ಎಂದು ಆರೋಪಿಸಲಾಗಿದೆ.

ಈ ಮಧ್ಯೆ ಅನಾರೋಗ್ಯಕ್ಕೊಳಗಾಗಿದ್ದ ಬಾಲಕಿಯ ತಮ್ಮ ನಿಧನ ಹೊಂದಿದ್ದು, ನಂತರ ಬಾಲಕಿಯು ತೀವ್ರ ಖಿನ್ನತೆಗೆ ಒಳಗಾಗಿದ್ದಾಳೆ. ರಾತ್ರಿ ನಿದ್ರೆಯಲ್ಲಿ ಕನವರಿಸುವುದು ಹಾಗೂ ಬೆಚ್ಚಿ ಬೀಳುವುದು ಮಾತ್ರವಲ್ಲದೆ, ಓದಿನಲ್ಲೂ ಆಸಕ್ತಿ ಕಳೆದುಕೊಂಡಿದ್ದಾಳೆ. ಹೀಗಾಗಿ ತಾಯಿ ಮತ್ತು ಅಕ್ಕ ಬಾಲಕಿಯನ್ನು ವಿಚಾರ ಮಾಡಿದಾಗ ಪರಿಚಯಸ್ಥನೇ ಆದ ರಿಯಾಜ್ ಅಹಮದ್ ಸತತವಾಗಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಬಾಲಕಿ ತಾಯಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪ್ರವಾಸಕ್ಕೆ ಕರೆದೊಯ್ಯುವುದಾಗಿ ಹೇಳಿ 52.55 ಲಕ್ಷ ರೂ. ವಂಚನೆ

ಮೈಸೂರಿನ ಟ್ರಾವೆಲ್ಸ್ ಮಾಲೀಕನ ಕುಟುಂಬದ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜು.9–ವಿದೇಶ ಪ್ರವಾಸ ಕರೆದೊಯ್ಯುವುದಾಗಿ ನಂಬಿಸಿ 52.55 ಲಕ್ಷ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಟ್ರಾವೆಲ್ಸ್‌ವೊಂದರ ವಿರುದ್ಧ ದೇವರಾಜ ಠಾಣೆಯಲ್ಲಿ ಕೇಸ್ ದಾಖಲಾಗಿದೆ. ದೇವರಾಜ ಅರಸು ರಸ್ತೆಯಲ್ಲಿರುವ ಅರ್ಚನಾ ಇಂಟರ್‌ನ್ಯಾಷನಲ್ ಟ್ರಾವೆಲ್ಸ್‌ನ ಮಾಲೀಕ ಎಸ್.ರವೀಂದ್ರ, ಅವರ ಪತ್ನಿ ಎಂ.ಆರ್.ಪುಷ್ಪಾ, ಪುತ್ರ ಆರ್.ಚೇತನ್ ಮತ್ತು ಪುತ್ರಿ ಆರ್.ಅರ್ಚನಾ ಅವರುಗಳು ಅರ್ಚನಾ ಟ್ರಾವೆಲ್ಸ್‌ನಲ್ಲಿ ಸದಸ್ಯತ್ವ ಪಡೆದುಕೊಂಡರೆ ಹಲವಾರು ಸ್ಕೀಂಗಳಡಿ ಸೌಲಭ್ಯ ಪಡೆದುಕೊಂಡು ವಿದೇಶ ಪ್ರವಾಸ ಮಾಡಬಹುದು ಎಂದು ನಂಬಿಸಿ ಸದಸ್ಯತ್ವದ ಶುಲ್ಕ ಮತ್ತು ಯೂರೋಪ್ ಪ್ರವಾಸ ಶುಲ್ಕವಾಗಿ 2015ರ ಮಾರ್ಚ್‌ನಿಂದ 2018ರ ಏಪ್ರಿಲ್ 30ರವರೆಗೆ 52.55 ಲಕ್ಷ ರೂ. ಕಟ್ಟಿಸಿಕೊಂಡು 8 ತಿಂಗಳು ಕಳೆದರೂ, ಯಾವುದೇ ಪ್ರವಾಸ ಕರೆದೊಯ್ಯದೇ ವಂಚನೆ ಎಸಗಿದ್ದಾರೆ ಎಂದು ಬೆಂಗಳೂರಿನ ಬನಶಂಕರಿ ನಿವಾಸಿಗಳಾದ ಚಂದ್ರಶೇಖರ್ ಮತ್ತು ಸ್ನೇಹಿತರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮುಖಾಮುಖಿ ಸಮಾವೇಶ

ಮೈಸೂರು,ಜು.9–ಬೆಂಗಳೂರಿನ ಗಾಂಧಿನಗರದಲ್ಲಿರುವ ಲಿಂಗಾಯತ ಕಲ್ಯಾಣ ಟ್ರಸ್ಟ್‌ನಲ್ಲಿ ಜು.10ರಂದು ಮಧ್ಯಾಹ್ನ 2 ಗಂಟೆಗೆ ವೀರಶೈವ ಲಿಂಗಾಯತ ವಧು–ವರರ 160ನೇ ವಿಶೇಷ ಮುಖಾಮುಖಿ ಸಮಾವೇಶ ಏರ್ಪಡಿಸಿದೆ. ಮಾಹಿತಿಗೆ ದೂ. 0821–22269237 ಸಂಪರ್ಕಿಸಿ.

2ನೇ ವರ್ಷದ ಸವಿನೆನಪು



ನೀವು ನಮ್ಮನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ: ಎಂ.ಎಸ್. ಜಲಜಾಕ್ಷಿ

ಮಗ: ಶ್ರೀಕಾಂತ್ ವಿ. ಸೊಸೆ ಮತ್ತು ಮೊಮ್ಮಕ್ಕಳು

ದಿ॥ ಆರ್.ಪುಟ್ಟಸ್ವಾಮಿ

ನಿಧನ: 10–07–2020

ಭಾವಪೂರ್ಣ ಶ್ರದ್ಧಾಂಜಲಿ



ಇವರು ದಿ:03.07.2022ರಂದು ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಪುಣ್ಯ ತಿಥಿಯನ್ನು ದಿ:14.07.2022 ನೇ ಗುರುವಾರ ಮಧ್ಯಾಹ್ನ 12–00 ಗಂಟೆಗೆ ಮೃತರ ಸ್ವಗೃಹ ಕೊತ್ತನಹಳ್ಳಿ ಗ್ರಾಮ, ಯಸಳೂರು ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿ ನೆರವೇರಿಸಲಾಗುವುದು. ಬಂಧು–ಮಿತ್ರರು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀಮತಿ ನಾಗರತ್ನಮ್ಮ

(ದಿಂವಗತ ಶ್ರೀ ಬಿ.ಎಂ.ಶಾಂತಪ್ಪಗೌಡರವರ ಧರ್ಮಪತ್ನಿ)

ದುಃಖತಪ್ತರು: ಕುಟುಂಬಸ್ಥರು ಹಾಗೂ ಕೊತ್ತನಹಳ್ಳಿ ಗ್ರಾಮಸ್ಥರು

ಒಂದನೇ ವರ್ಷದ ಸವಿನೆನಪು



ಶ್ರೀಮತಿ ಬಿ.ಜಯಮ್ಮ (ಪಾಪತಿ)

(ಆದಾಯ ತೆರಿಗೆ ಇಲಾಖೆ, ಮೈಸೂರು)

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು ನಿಮ್ಮ ನೆನಪು ನಮ್ಮ ಹೃದಯದಲ್ಲಿದೆ ನೀವು ತೋರಿದ ಪ್ರೀತಿ ಹಾಗೂ ಆದರ್ಶ ಅಜರಾಮರ

ದುಃಖತಪ್ತರು:

ಮಕ್ಕಳು, ಸೊಸೆಯಂದಿರು, ಅಳಿಯಂದಿರು ಕುಟುಂಬವರ್ಗದವರು

ಡಿ.ದೇವರಾಜು ಅರಸು ಕಾಲೋನಿ

ಗೌರವಾನ್ವಿತ 4ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಅಸಲು ದಾವಾ ಸಂಖ್ಯೆ 708 /2021

ವಾದಿ: ಎನ್.ಸುಂದರಂ

ವಿರುದ್ಧ

ಪ್ರತಿವಾದಿ : ಬಿ.ಕೆ.ಲಿಂಗರಾಜು

ಹಿ.ದಿ: 27/07/2022

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಎನ್.ಸುಂದರಂ ಬಿನ್ ನೆಂಜಿಕುಟ್ಟಿ ಗೌಂಡರ್, 84 ವರ್ಷ, ವಾಸಸ್ಥಳ: 592, ಮರುದ್ದ ಬಿಲ್ಡಿಂಗ್, ರಿಂಗ್ ರೋಡ್ ಸರ್ಕಲ್, ಬೋಗಾದಿ, ಮೈಸೂರು – 570026 ಇವರು

ಮೈಸೂರು ನಗರ, ಕುವೆಂಪುನಗರ, ಅನಿಕೇತನ ರಸ್ತೆ, 10ನೇ ಅಡ್ಡರಸ್ತೆ, ಮನೆ ನಂ.553, ಮಹಡಿ ಮನೆಯಲ್ಲಿ ವಾಸವಾಗಿರುವ ಸುಮಾರು 49 ವರ್ಷ ವಯಸ್ಸಿನ ಕರಿಯಪ್ಪನವರ ಮಗ ಬಿ.ಕೆ.ಲಿಂಗರಾಜು ಇವರ ವಿರುದ್ಧ ರೂ.9,73,000/– ಮತ್ತು ಮುಂದಿನ ಬಡ್ಡಿ ವಸೂಲಿಗಾಗಿ ಮೈಸೂರಿನ ನಾಲ್ಕನೆ ಅಧಿಕ ದಿವಾಣಿ ನ್ಯಾಯಾಲಯ (ಹಿರಿಯ ವಿಭಾಗ) ಮೈಸೂರು ಇಲ್ಲಿ ಅಸಲು ದಾವಾ 708/2021 ರಲ್ಲಿ ದಾವೆ ಹೂಡಿದ್ದು, ದಾವಾ ಸಮನ್ಸ್ ಮತ್ತು ನೋಂದಿತ ಅಂಚೆ ಮೂಲಕ ಕಳುಹಿಸಲಾದ ನ್ಯಾಯಾಲಯದ ಸಮನ್ಸ್‌ನ್ನು ಸಹ ಪ್ರತಿವಾದಿ ಬಿ.ಕೆ.ಲಿಂಗರಾಜು ಸ್ವೀಕರಿಸದೇ ಇರುವುದರಿಂದ ಈ ಪ್ರಕಟಣೆ ಮಾಡಲಾಗಿದೆ.

ಮೇಲ್ಕಂಡ ಅಸಲು ದಾವೆ ಸಂಖ್ಯೆ 708/2021 ಇದು ಇದೇ ತಾರೀಖು 27/07/2022 ರಂದು ಬೆಳಿಗ್ಗೆ 11–00 ಘಂಟೆಗೆ ನಿಗದಿಯಾಗಿರುತ್ತದೆ. ಬಿ.ಕೆ.ಲಿಂಗರಾಜುರವರಿಗೆ ಈ ಮೂಲಕ ತಿಳುವಳಿಕೆ ನೀಡಲಾಗಿದೆ. ತಪ್ಪಿದರೆ ಮುಂದಿನ ಕಾನೂನು ಕ್ರಮ ಜರುಗಿಸಲು ನ್ಯಾಯಾಲಯ ಸಿದ್ಧವಾಗಿರುತ್ತದೆ.

By Order of the Court
Sd/- Chief Ministerial Officer
Court of Senior Civil Judge and CJM, Mysuru.

ಸಹಿ/– ಎಲ್.ಶಶಿಧರ
ಪವಿತ್ರ ಆರ್ ತೇಜೂರು
ವಕೀಲರುಗಳು
100, "ಶ್ರೇಯಸ್" 7ನೇ ಮುಖ್ಯ ರಸ್ತೆ, ಪಡುವಾರಹಳ್ಳಿ, ಮೈಸೂರು – 570012.
ದಿನಾಂಕ: 07/07/2022, ಮೈಸೂರು.



ನಕ್ಕರೆ ಅದೇ ಸ್ವರ್ಗ

ಗೆಳೆಯ : ಕವಿತೆಗೂ ಪ್ರಬಂಧಕ್ಕೂ ಏನು ವ್ಯತ್ಯಾಸ?
ಆತ : ಗೆಳತಿ ಬಗ್ಗೆ ಮಾತನಾಡಿದರೆ ಕವಿತೆ,
ಹೆಂಡತಿ ಬಗ್ಗೆ ಮಾತನಾಡಿದರೆ ಪ್ರಬಂಧ!

ಮೈಸೂರು ಮಿತ್ರ
ಭಾನುವಾರ, 10 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಾವಿರಾರು ಜನರನ್ನು ಗೆಲ್ಲುವವನು ವೀರನಲ್ಲ.
ತನ್ನ ಮನಸ್ಸನ್ನು ಗೆಲ್ಲುವವನು ವೀರ. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಾಯಿ ಇದ್ದರೆ ತವರೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

ನಿಮ್ಮ ಪತ್ರಗಳು

ಸಾರ್ವಜನಿಕ ಉದ್ಯಾನವನಗಳ ಕಳಪೆ ನಿರ್ವಹಣೆ

ಮಾನ್ಯರೆ,






ಮೈಸೂರಿನ ಯಾದವಗಿರಿಯ ಆಕಾಶವಾಣಿ ವೃತ್ತದಲ್ಲಿರುವ ಚೆಲುವಾಂಬ ಉದ್ಯಾನವನದ ಕಳಪೆ ನಿರ್ವಹಣೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಈ ಉದ್ಯಾನವನದಲ್ಲಿ ಮಕ್ಕಳು ಆಟವಾಡುವ ಪ್ರದೇಶ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಗಾಗಿರುವುದಲ್ಲದೆ, ಉದ್ಯಾನವನ ಸರಿಯಾಗಿ ನಿರ್ವಹಣೆಯಾಗದಿರುವುದರಿಂದ ಹಿರಿಯ ನಾಗರಿಕರು ವಾಯುವಿಹಾರ ಮಾಡಲು ತುಂಬಾ ತೊಂದರೆಯಾಗಿದೆ. ಉದ್ಯಾನವನದ ಹಸಿರು ಪ್ರದೇಶ ಕಸ ಮತ್ತು ತ್ಯಾಜ್ಯದಿಂದ ಕೂಡಿದೆ. ಕುಳಿತುಕೊಳ್ಳುವ ಆಸನಗಳು ಮುರಿದು ಹೋಗಿವೆ. ಬೆಳಕಿನ ವ್ಯವಸ್ಥೆ ಸರಿಯಾಗಿಲ್ಲ. ವಾಯುವಿಹಾರದ ರಸ್ತೆ ನಿರ್ವಹಣೆಯಾಗಿಲ್ಲ.

ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಮೆಟಲ್ ರೇಲಿಂಗ್ಸ್ ಮತ್ತು ಆಟದ ಉಪಕರಣಗಳು ತುಕ್ಕು ಹಿಡಿದು ಹಾಳಾಗಿವೆ. ಈ ಅವ್ಯವಸ್ಥೆ ಕೇವಲ ಚೆಲುವಾಂಬ ಉದ್ಯಾನವನದಲ್ಲಿ ಮಾತ್ರವಲ್ಲ ಇತರೆ ಉದ್ಯಾನಗಳು ಕೂಡ ನಿರ್ವಹಣೆ ಇಲ್ಲದೆ ಸೊರಗುತ್ತಿವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪಾಲಿಕೆ ಸದಸ್ಯರು ಗಮನಹರಿಸಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ತೆರಿಗೆ ಪಾವತಿದಾರ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ. **–ಶ್ರೀದೇವಿ, ಮೈಸೂರು.**

ಸರ್ಕಾರಿ ಶಾಲೆಯಲ್ಲೊಬ್ಬರು ಮಾದರಿ ಶಿಕ್ಷಕಿ

ಮಾನ್ಯರೆ,



ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಅಗತಗೌಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ ಶ್ರೀಮತಿ ಬಿ.ಶ್ರೀದೇವಿ ಮೇಡಂ ಅಂದರೆ ಎಲ್ಲಾ ವಿದ್ಯಾರ್ಥಿಗಳಿಗೂ ಅಚ್ಚುಮೆಚ್ಚು. ಸದಾ ಕ್ರಿಯಾಶೀಲತೆಯಿಂದ ಮಕ್ಕಳಿಗೆ ಹೊಸ ಹೊಸ ವಿಚಾರಗಳನ್ನು ಬೋಧಿಸುತ್ತಾ ಮಕ್ಕಳನ್ನು ಆಧುನಿಕತೆಯತ್ತ ಕರೆದೊಯ್ಯುವ ಮಾದರಿ ಶಿಕ್ಷಕಿಯಾಗಿ ಹೊರಹೊಮ್ಮಿದ್ದಾರೆ. ಇಂತಹ ಶಿಕ್ಷಕಿಯನ್ನು ಪಡೆದ ನನ್ನೂರಿನ ವಿದ್ಯಾರ್ಥಿಗಳೇ ಧನ್ಯ.

ಪ್ರಸ್ತುತ ದಿನಗಳಲ್ಲಿ ಖಾಸಗಿ ಶಾಲೆಗಳ ವ್ಯಾಮೋಹಕ್ಕೆ ಮಾರು ಹೋಗದವರೇ ಇಲ್ಲ..! ಇದಕ್ಕೆ ನನ್ನೂರಿನ ಜನರೇನು ಹೊರತೇನಲ್ಲ. ಅವರು ಸಹ ಕಾನ್ವೆಂಟ್ ಸಂಸ್ಕೃತಿಗೆ ಆಕರ್ಷಿತರಾಗಿ ತಮ್ಮ ಮಕ್ಕಳನ್ನು ಅಂತಹ ಶಾಲೆಗಳಿಗೆ ಸೇರಿಸಿ ಬೀಗುತ್ತಿದ್ದಾರೆ. ಆದರೆ ಖಾಸಗಿ ಶಾಲೆಗಳ ಡೊನೇಷನ್ ಹಾವಳಿಗೆ ಬೆಚ್ಚಿದ ಕೆಲವು ಮಂದಿ ತಮ್ಮ ಮಕ್ಕಳನ್ನು ನಮ್ಮೂರಿನ ಸರ್ಕಾರಿ ಶಾಲೆಗೆ ಸೇರಿಸಿ, ನಿಟ್ಟುಸಿರು ಬಿಟ್ಟಿದ್ದಾರೆ.

ಆ ಸರ್ಕಾರಿ ಶಾಲೆಯ ಮಕ್ಕಳನ್ನು ಯಾವುದೇ ಖಾಸಗಿ ಶಾಲೆಯ ಮಕ್ಕಳಿಗೂ ಕಡಿಮೆ ಇಲ್ಲದ ಹಾಗೆ ಅವರಿಗೆ ನಲಿ ಕಲಿ ಜೊತೆ ಜೊತೆಗೆ ಸ್ಮಾರ್ಟ್ ಕ್ಲಾಸ್, ಕಂಪ್ಯೂಟರ್ ಕ್ಲಾಸ್, ಇತ್ತೀಚೆಗೆ ಇಂಗ್ಲಿಷ್ ಹ್ಯಾಂಡ್ ರೈಟಿಂಗ್ ಕ್ಲಾಸ್ ಅನ್ನು ಸಹ ಮಕ್ಕಳಿಗೆ ಪರಿಚಯಿಸುತ್ತಾ... ಹೀಗೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೂ ಸಹ ಅಷ್ಟೇ ಆದ್ಯತೆಯನ್ನು ಕೊಟ್ಟು ನಮ್ಮ ಶಾಲೆಯ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ನಮ್ಮೂರ ಶಾಲೆಯ ಶಿಕ್ಷಕಿ ಶ್ರೀಮತಿ ಬಿ.ಶ್ರೀದೇವಿ ಅವರಿಗೆ ನನ್ನದೊಂದು ಸಲಾಂ.

ಆಧುನಿಕತೆಗೆ ತಕ್ಕಂತೆ ತಮ್ಮನ್ನು ತಾವು ಬೋಧನೆಗೆ ತೊಡಗಿಸಿಕೊಂಡು ಮಕ್ಕಳ ಜೊತೆ ಜೊತೆಗೆ ಮಕ್ಕಳಂತಾಗಿ ಬೋಧಿಸುತ್ತಾ ನಾಡಿನ ಇತರ ಶಿಕ್ಷಕರಿಗೂ ಮಾದರಿಯಾಗಿರುವ ಶ್ರೀದೇವಿ ಟೀಚರ್ ಅಂತಹವರ ಸಂತತಿ ನಾಡಿನುದ್ದಕ್ಕೂ ಹೆಚ್ಚಲಿ. ಆಗ ನಮ್ಮ ಸರ್ಕಾರಿ ಶಾಲೆಗಳು ಸಹ ಯಾವುದೇ ಖಾಸಗಿ ಶಾಲೆಗಳಿಗೂ ಕಡಿಮೆ ಇಲ್ಲದ ಹಾಗೆ ಬೆಳೆಯಲು ಸಹಕಾರಿಯಾಗುತ್ತದೆ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ಪ್ಲಾಸ್ಟಿಕ್ ನಿಷೇಧ ಕಟ್ಟುನಿಟ್ಟಾಗಿ ಜಾರಿಗೊಳಿಸಿ

ಮಾನ್ಯರೆ,

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಕೇಂದ್ರ ಸರ್ಕಾರ ನಿಯಮ ಜಾರಿಮಾಡಿರುವುದು ಸ್ವಾಗತಾರ್ಹ. ಸರ್ಕಾರ ಪ್ಲಾಸ್ಟಿಕ್ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಿಯಮ ಉಲ್ಲಂಘಿಸಿ ಕಳ್ಳ ಮಾರ್ಗದಲ್ಲಿ ಪ್ಲಾಸ್ಟಿಕ್ ಉತ್ಪಾದನೆ, ಮಾರಾಟ ಮತ್ತು ಬಳಕೆ ಮಾಡುವವರನ್ನು ಗುರುತಿಸಿ ಶಿಕ್ಷೆಗೆ ಒಳಪಡಿಸಬೇಕು. ಈ ನಿಯಮ ಕೇವಲ ಕಡತಕ್ಕೆ ಮಾತ್ರ ಸೀಮಿತವಾಗಬಾರದು. ಸರ್ಕಾರ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪರಿಸರ ಸ್ನೇಹಿ ವಸ್ತುಗಳನ್ನು ಉತ್ಪಾದಿಸಲು ಮತ್ತು ಬಳಸಲು ಪ್ರೋತ್ಸಾಹ ನೀಡಬೇಕು. **–ಚನ್ನಕೇಶವ ಜಿ. ಕೆ. ತರೀಕೆರೆ**

ಬೆಟ್ಟಕ್ಕೆ ರೋಪ್ ವೇ ಕೈ ಬಿಟ್ಟದ್ದು ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರ್ಕಾರವು ತನ್ನ ಬಜೆಟ್‌ನಲ್ಲಿ ಘೋಷಿಸಿದ್ದ ಚಾಮುಂಡಿ ಬೆಟ್ಟದ ರೋಪ್ ವೇ ಯೋಜನೆಯನ್ನು ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಭೆ ನಡೆಸಿ ಒಮ್ಮತ ಅಭಿಪ್ರಾಯದಿಂದ ಕೈ ಬಿಟ್ಟಿರುವುದು ಸ್ವಾಗತಾರ್ಹ. ಪವಿತ್ರ ಯಾತ್ರಾ ಸ್ಥಳವಾದ ಚಾಮುಂಡಿ ಬೆಟ್ಟವನ್ನು ಆಧ್ಯಾತ್ಮಿಕ ಕೇಂದ್ರವಾಗಿ ಮತ್ತು ಪರಿಸರ ಸಂರಕ್ಷಣೆಯ ದೃಷ್ಟಿಕೋನದಲ್ಲಿ ನೋಡಬೇಕೇ ವಿನಃ ಪ್ರವಾಸೋದ್ಯಮ ಕೇಂದ್ರವಾಗಿ ಅಲ್ಲ. ಬೆಟ್ಟದಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚಾಗದಂತೆ ಮತ್ತು ಲಂಗುಲಗಾಮಿಲ್ಲದ ಅಭಿವೃದ್ಧಿ ಕಾರ್ಯಗಳಿಗೆ ಕಡಿವಾಣ ಹಾಕಲು, ಜೊತೆಗೆ ಅಗತ್ಯದ ಕಾಮಗಾರಿಗಳನ್ನು ವೈಜ್ಞಾನಿಕವಾಗಿ ಮಾಡಿ ಬೆಟ್ಟವನ್ನು ಸೂಕ್ತವಾಗಿ ಅಭಿವೃದ್ಧಿಪಡಿಸಲು ಪ್ರತ್ಯೇಕ ಪ್ರಾಧಿಕಾರದ ರಚನೆ ಕುರಿತು ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟು ಶೀಘ್ರವಾಗಿ ಪ್ರಾಧಿಕಾರದ ರಚನೆಗೆ ಜಿಲ್ಲೆಯ ಜನಪ್ರತಿನಿಧಿಗಳು ಮುಂದಾಗಬೇಕು.

–ಮಲ್ಲೇಶ್ ಎಂ ಎಂ, ಮಹಾರಾಜ ಕಾಲೇಜು, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

‘ಸಿಂಧೂ’ ಎಂಬ ಮಹಾ ಮಹಾನದಿ

ನಮ್ಮೆಲ್ಲರ ಪಾಲಿಗೆ ಪವಿತ್ರವಾದ, ಪಾವನವಾದ, ರೋಮಾಂಚನವನ್ನು ಉಂಟುಮಾಡುವ ಹೆಸರು ‘ಸಿಂಧೂ’. ಭಾರತೀಯರಿಗೆ ಪವಿತ್ರವಾದ ನದಿ. ಗಂಗೆ, ಸಿಂಧೂ, ಕಾವೇರಿ, ಯಮುನಾ, ಸರಸ್ವತಿ, ನರ್ಮದಾ, ಗೋದಾವರಿ ಇವು ಈ ದೇಶದ ಪ್ರಮುಖ ‘ಸಪ್ತ’ ನದಿಗಳು. ಇವು ದೇಶದ ಜೀವನದಿಗಳೂ ಹೌದು.

ಇವುಗಳ ಪೈಕಿ ‘ಸಿಂಧೂ’ ಬಹಳ ಪುರಾತನ ಕಾಲದಿಂದಲೂ ಪರಮ ಪವಿತ್ರ ನದಿ. ಐದು ಸಾವಿರ ವರ್ಷಗಳಿಗೂ ಮೀರಿದ ಇತಿಹಾಸ ವಿದೆ. ಸಿಂಧೂ ನದಿಯ ದಡದಲ್ಲಿಯೇ ನಮ್ಮ ವೇದಗಳು ಉಗಮವಾಗಿವೆ. ನಮ್ಮ ನಾಗರಿಕ ಸಂಸ್ಕೃತಿಯ ಕೇಂದ್ರಗಳಾದ ಹರಪ್ಪ, ಮೊಹೆಂಜೊದಾರೋಗಳು ಸಿಂಧೂ ನದಿಪಾತ್ರದಲ್ಲಿಯೇ ಕಂಡುಬರುತ್ತವೆ. ಅಖಂಡ ಭಾರತವಿದ್ದಾಗ ಇಡೀ ಸಿಂಧೂ ನದಿ ಭಾರತದಲ್ಲೇ ಹರಿಯುತ್ತಿತ್ತು. ಆದರೆ ದೇಶ ವಿಭಜನೆಯಾಗಿ ಪಾಕಿಸ್ತಾನ ಉದಯವಾದಾಗ ಆರಂಭದ ಮೂರನೇ ಒಂದು ಭಾಗ ಮಾತ್ರ ಭಾರತಕ್ಕೆ ಸೇರಿತು. ನಂತರದ ಉಳಿಕೆ ಮೂರನೆಯ ಎರಡು ಭಾಗ ಪಾಕಿಸ್ತಾನಕ್ಕೆ ಸೇರಿಹೋಯಿತು.

ಸಿಂಧೂ ನದಿಯ ವಿಸ್ತಾರ ವಿಸ್ಮಯ ಮೂಡಿಸುತ್ತದೆ. ಸುಮಾರು 3180 ಕಿ.ಮೀ. ದೂರ ಸಿಂಧೂ ನದಿ ಹರಿಯುತ್ತದೆ. ಇದು ಏಷಿಯಾ ಖಂಡದಲ್ಲೇ ಉದ್ದವಾದ ನದಿ ಎನಿಸಿದೆ. ಈಗ ಚೀನಾ ವಶದಲ್ಲಿರುವ ಟಿಬೆಟ್‌ನ ಕೈಲಾಸ ಪರ್ವತ ಹಾಗೂ ಮಾನಸ ಸರೋವರದ ವಲಯದಲ್ಲಿ ಸಿಂಧೂ ನದಿ ಉಗಮವಾಗುತ್ತದೆ. ಮಾನಸ ಸರೋವರದಿಂದ ಮತ್ತೊಂದು ಮಹಾನದಿ ಬ್ರಹ್ಮಪುತ್ರ ಸಹ ಉಗಮವಾಗುತ್ತದೆ.

ಟಿಬೆಟ್ ಭಾಗದಲ್ಲಿ ಹಿಂದೂಕುಶ್ ಪರ್ವತ ಹಾಗೂ ಕಾರಾಕೋರಮ್‌ನಲ್ಲಿ ಗಿಲ್ಗಿಟ್, ಬಲ್ಟಿಸ್ತಾನ್, ಖೈಬರ್, ಫಕುಂಕ್ವಾ ಮೂಲಕ ಹರಿದು ಪಾಕಿಸ್ತಾನ ಪ್ರವೇಶಿಸಿ, ಅಲ್ಲಿನ ಪಂಜಾಬ್, ಸಿಂಧ್ ಪ್ರಾಂತ್ಯಗಳಲ್ಲಿ ಸಾಗಿ ಕರಾಚಿಯ ಸಮೀಪ ಅರಬ್ಬಿ ಸಮುದ್ರ ಸೇರುತ್ತದೆ. ಇದು ಪಾಕಿಸ್ತಾನದ ರಾಷ್ಟ್ರೀಯ ನದಿಯೂ ಆಗಿದೆ.

ಸಿಂಧೂ ನದಿಯ ಬಗ್ಗೆ ಋಗ್ವೇದದಲ್ಲಿ ಪ್ರಸ್ತಾಪವಿದೆ. ಅಲ್ಲಿ ಇದನ್ನು ‘ಸಪ್ತ ಸಿಂಧೂ’ ಎಂದು ಕರೆಯಲಾಗಿದೆ. ಕ್ರಿ.ಪೂ. 510ರಲ್ಲೇ ಈ ನದಿಯನ್ನು ಕಂಡು ಹಿಡಿಯಲು ಪರ್ಷಿಯಾ ದೇಶದ ದೊರೆ ತಂಡವೊಂದನ್ನು ಕಳುಹಿಸಿದ್ದನು ಎಂದು ಚರಿತ್ರೆ ತಿಳಿಸುತ್ತದೆ. ಸಿಂಧೂ ನದಿಯನ್ನು 7ನೇ ಶತಮಾನದಲ್ಲಿ ಸಿಂಧೂ, ಇಂಡಸ್, ಅಬ್‌ಸಿಂಧ್, ಅಲ್‌ಸಿಂಧ್ (ಅರಬ್ಬಿ ಭಾಷೆಯಲ್ಲಿ) ಎಂದೆಲ್ಲಾ ಕರೆಯಲಾಗುತ್ತಿತ್ತು.

ಸಿಂಧೂ ನದಿಯಲ್ಲಿ ಹರಿಯುವ ನೀರು ನೈಲ್‌ನದಿಯ ಎರಡರಷ್ಟು ಹಾಗೂ ಟೈಗ್ರಿಸ್ ನದಿಯ ಮೂರುಪಟ್ಟು ಜಾಸ್ತಿ ಇದ್ದು, ಸಿಂಧೂ ನದಿ ಪ್ರಪಂಚದ 21 ದೊಡ್ಡ ನದಿಗಳ ಪೈಕಿ ಒಂದೆನಿಸಿದೆ.

ಸಿಂಧೂ ನದಿಯನ್ನು ಇಂಡಸ್ ಎಂಬುದಾಗಿಯೂ ಕರೆಯಲಾಗುತ್ತದೆ. ಸಿಂಧೂ ನದಿಯಿಂದ ಹಿಂದೂ ಹಾಗೂ ಹಿಂದೂಸ್ಥಾನ ಪದಗಳೂ, ಇಂಡಸ್‌ನ ಹೆಸರಿನಿಂದ ಇಂಡಿಯಾ ಎಂಬ ಪದವು ಉತ್ಪತ್ತಿಯಾಗಿದೆ. ಹಿಂದು ಎಂಬ ಪದವನ್ನು ಬಹಳ ಪುರಾತನ ಕಾಲದಿಂದಲೂ ಬಳಸಲಾಗುತ್ತಿದೆ. ಹಾಗಾಗಿ ಸಿಂಧೂ ನದಿ ಭಾರತದ ಪುರಾತನ ನದಿಯಷ್ಟೇ ಅಲ್ಲ, ಅದು ಭಾರತೀಯರಿಗೆ ಪವಿತ್ರವಾದ ನದಿಯೂ ಎನಿಸಿದೆ. ಪ್ರತಿದಿನ ಸ್ನಾನ ಮಾಡುವಾಗ, ಪೂಜಾಕಾರ್ಯ ಮಾಡುವಾಗ :

‘ಗಂಗೇಚ ಯಮುನೇ ಚೈವಾ ಗೋದಾವರಿ ಸರಸ್ವತಿ
ನರ್ಮದೇ ಸಿಂಧೂ ಕಾವೇರಿ ಜಲೇಸ್ಮಿನ್ ಸನ್ನಿಧಿಂಕುರು”

ಎಂಬ ಮಂತ್ರ ಹೇಳಿ ಈ ಸಪ್ತ ನದಿಗಳನ್ನು ಆಹ್ವಾನಿಸಲಾಗುತ್ತದೆ.

ಈಗಿನ ಭಾರತದ ಲಡಾಖ್‌ನ ಲೇಹ್ ಸಮೀಪದ ಜಂಸ್ಕಾರ್‌ನಲ್ಲಿ ಸಿಂಧೂನದಿ ಕಾಣಸಿಗುತ್ತದೆ. ಇದನ್ನು ಸಿಂಧೂ ನದಿಯ ಎಡಭಾಗದ ಉಪಭಾಗ ಎಂದು ಹೇಳಬಹುದು. ಈ ಭಾಗದ ನದಿಗೆ ಮುಂದೆ ಚೆನಾಬ್, ಝೀಲಮ್, ರಾವಿ, ಬಿಯಾಸ್ ಹಾಗೂ ಸಟ್ಲೆಜ್ ನದಿಗಳು ಸೇರುತ್ತವೆ. ಬಲಭಾಗದ ನದಿಗೆ ಶಯಾಕ್, ಗಿಲ್ಗಿಟ್, ಕಾಬೂಲ್, ಗೋಮಲ್ ಮತ್ತು ಕುರ್ರಮ್ ನದಿಗಳು ಸೇರುತ್ತವೆ.

ಸಿಂಧೂ ನದಿಯ ಪ್ರಮುಖ ಆಧಾರ ಸ್ರೋತ ಹಿಮಾಲಯ. ಬೇಸಿಗೆಯಲ್ಲಿ ಹಿಮ ಕರಗಿ ನೀರಾಗಿ ಹರಿದರೆ, ಮಳೆಗಾಲದಲ್ಲಿ ಮಳೆಯ ನೀರು ಸೇರುತ್ತದೆ. ಸಿಂಧೂ ನದಿಯು ಪೆಶಾವರ್, ರಾವಲ್ಪಿಂಡಿಯ ಬಳಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ನದಿ ಕೆಲವು ಕಡೆ ಹದಿನೈದರಿಂದ ಹದಿನೇಳು ಸಾವಿರ ಅಡಿಗಳಷ್ಟು ಕೆಳಗೆ ಹರಿಯುತ್ತದೆ. ನಂಗಾ ಪರ್ವತದ ಸಮೀಪ ಬಹಳ ಕೆಳಭಾಗದಲ್ಲಿ ನೀರು ಹರಿಯುವುದನ್ನು ಕಾಣಬಹುದು. ಮುಂದೆ ಕಾಬೂಲ್ ನದಿ ಸಿಂಧೂ ನದಿಗೆ ಸೇರುತ್ತದೆ.

ಜಂಸ್ಕಾರ್ ಇದು ಲಡಾಖ್‌ನ ಭಾಗ. ಇಲ್ಲಿಯೇ ಹರಪ್ಪ–ಮೊಹೆಂಜೋದಾರೋ ಪಟ್ಟಣಗಳು ಕ್ರಿ.ಪೂ. 3300ರಲ್ಲಿ ಇದ್ದವು. ಇದನ್ನು ಇಂಡಸ್ ವ್ಯಾಲಿ ಸಿವಿಲೈಸೇಷನ್ (Indus Valley Civilization) ಅಥವಾ ಸಿಂಧೂ ಕಣಿವೆಯ ನಾಗರಿಕತೆ ಎಂದು ಕರೆಯಲಾಗುತ್ತದೆ. ಸಿಂಧೂ ನದಿಗೆ 20ಕ್ಕೂ ಹೆಚ್ಚು ನದಿಗಳು ಅದರ ಪಾತ್ರದಲ್ಲಿ ಸೇರ್ಪಡೆಯಾಗುತ್ತವೆ. ಅವುಗಳಲ್ಲಿ ಬಿಯಾಸ್, ಗಿಲ್ಗಿಟ್, ಝೀಲಮ್, ಕುರ್ರಮ್, ಶಯಾಕ್, ಸಟ್ಲೆಜ್, ಜೋಬ್, ಚೆನಾಬ್, ಗೋಮಲ್, ಕಾಬೂಲ್, ಪಂಜ್ನಾಡ್, ಸೋನ್, ಗಾರ್, ಹ್ರಂಜಾ, ಕುನಾಸ್, ರಾವಿ, ಸುರು, ಜಂಸ್ಕಾರ್ ಸೇರಿವೆ.

> “ಸಿಂಧೂ ನದಿಯ ವಿಸ್ತಾರ ವಿಸ್ಮಯ ಮೂಡಿಸುತ್ತದೆ. ಸುಮಾರು 3180 ಕಿ.ಮೀ. ದೂರ ಸಿಂಧೂ ನದಿ ಹರಿಯುತ್ತದೆ. ಇದು ಏಷಿಯಾ ಖಂಡದಲ್ಲೇ ಉದ್ದವಾದ ನದಿ ಎನಿಸಿದೆ. ಈಗ ಚೀನಾ ವಶದಲ್ಲಿರುವ ಟಿಬೆಟ್‌ನ ಕೈಲಾಸ ಪರ್ವತ ಹಾಗೂ ಮಾನಸ ಸರೋವರದ ವಲಯದಲ್ಲಿ ಸಿಂಧೂ ನದಿ ಉಗಮವಾಗುತ್ತದೆ. ಮಾನಸ ಸರೋವರದಿಂದ ಮತ್ತೊಂದು ಮಹಾನದಿ ಬ್ರಹ್ಮಪುತ್ರ ಸಹ ಉಗಮವಾಗುತ್ತದೆ.

ಭಾರತ ಪಾಕಿಸ್ತಾನ ಇಬ್ಭಾಗದ ನಂತರ 1960ರಲ್ಲಿ ನೀರಿನ ನಿಯಂತ್ರಣ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಝೀಲಮ್ ನದಿಗೆ ಮಂಗ್ಲಾ ಅಣೆಕಟ್ಟೆ ಕಟ್ಟಿದ್ದರೆ, ಸಿಂಧೂ ನದಿಗೆ ತರ್‌ಬೆಲಾದಲ್ಲಿ ಅಣೆಕಟ್ಟೆ ಕಟ್ಟಲಾಗಿದೆ. ಒಟ್ಟಿನಲ್ಲಿ ಸಿಂಧೂ ನದಿ ಚೀನಾ ಭಾಗದಲ್ಲಿ ಹುಟ್ಟಿ, ಭಾರತದಲ್ಲಿ ಹರಿದು, ಪಾಕಿಸ್ತಾನದ ಜೀವನಾಡಿಯಾಗಿ ಹರಿದು ಅರಬ್ಬಿ ಸಮುದ್ರ ಸೇರುತ್ತವೆ. ಅರಬ್ಬಿ ಸಮುದ್ರ ಸೇರುವಾಗ ಸಿಂಧೂ ನದಿಯ ಪಾತ್ರ ಸಮುದ್ರದಂತೆಯೇ ವಿಶಾಲವಾಗಿ ಕಾಣುತ್ತದೆ.

ಇಂತಹ ಪವಿತ್ರವೆನಿಸಿರುವ ಸಿಂಧೂ ನದಿ, ದೇಶ ವಿಭಜನೆಯ ನಂತರ ಪಾಕಿಸ್ತಾನದಲ್ಲಿ ಸೇರಿಹೋಯಿತು. ಅದಕ್ಕೆ ಪೂರ್ವದಲ್ಲಿ ಭಾರತೀಯರು ಸಿಂಧೂ ನದಿಗೆ ಪೂಜೆ ಸಲ್ಲಿಸುವುದು, ಪವಿತ್ರ ಸ್ನಾನ ಮಾಡುವುದು, ಆರತಿ ಮಾಡುವುದು ಇತ್ಯಾದಿ ನಡೆದಿತ್ತು. ಆದರೆ ನಂತರ ಸಿಂಧೂ ನದಿ ಭಾರತದಲ್ಲಿಲ್ಲ ಎಂಬಂತೆ ಕಂಡು ಬಂತು. ನಮ್ಮ ಪವಿತ್ರ ನದಿ, ನಮಗೆ ಲಭ್ಯವಿಲ್ಲದಂತಾಯಿತು ಎಂಬ ಭಾವನೆ ಮೂಡಿತ್ತು.

ಆದರೆ ಸಿಂಧೂ ನದಿಯ ಒಂದು ಭಾಗ ಭಾರತದಲ್ಲೂ ಹರಿಯುತ್ತದೆ. ಲಡಾಖ್‌ನ ಲೇಹ್‌ನಿಂದ 8 ಕಿ.ಮೀ. ದೂರದಲ್ಲಿನ ಚೋಗ್ಲಾಮ್ಸರ್‌ನಲ್ಲಿ ಹರಿಯುವ ನದಿ ಸಿಂಧೂ ನದಿ. ಇದು ತದನಂತರದಲ್ಲಿ ಬೆಳಕಿಗೆ ಬಂದಿತು. ಈ ದೇಶದ ಜನರಿಗೆ ಮೊದಲಿನಿಂದಲೂ ನದಿಗಳು ಎಂದರೆ ಪವಿತ್ರ ಭಾವನೆ ಇದೆ. ನದಿಗಳಿಂದಾಗಿಯೇ ನಮ್ಮ ಜೀವನ ನಡೆದುಕೊಂಡು ಬಂದಿದೆ ಎಂಬ ಕೃತಜ್ಞತಾ ಭಾವ ನಮ್ಮಲ್ಲಿದೆ. ಮೊದಲಿನಿಂದಲೂ ನದಿಗಳ ದಡದಲ್ಲಿ ಊರುಗಳನ್ನು ಹುಟ್ಟುಹಾಕಿ ಅಲ್ಲಿ ನಮ್ಮ ಜೀವನವನ್ನು ಸುಸೂತ್ರವಾಗಿ ಮಾಡಿಕೊಂಡು ಬರಲಾಗಿದೆ. ಆದ್ದರಿಂದ ನದಿಗಳ ಬಗ್ಗೆ ನಮ್ಮಲ್ಲಿ ಪೂಜ್ಯ ಭಾವವನ್ನು ಮೊದಲಿನಿಂದಲೂ ಕಾಣಬಹುದು. ‘ಜೀವನ ಕೊಟ್ಟದ್ದು’ ಎಂಬ ಭಾವವೂ ಇದಕ್ಕೆ ಕಾರಣ. ಆದರೆ ಇತರೆ ನದಿಗಳ ದರ್ಶನ, ಸ್ನಾನ, ಪೂಜೆ ಸಾಧ್ಯವಾಗಿದ್ದರೂ ಸಿಂಧೂ ನದಿ ನಮ್ಮಲ್ಲಿ ಈಗ ಇಲ್ಲ ಎಂಬ ಹತಾಶಾ ಭಾವನೆ ಬಹು ವರ್ಷಗಳಿಂದಲೂ ಮನೆ ಮಾಡಿತ್ತು.

ಆದರೆ ನಮ್ಮ ದೇಶದಲ್ಲಿ ಈಗಲೂ ಸಿಂಧೂ ನದಿಯನ್ನು ಲೇಹ್ ಲಡಾಕ್‌ನಲ್ಲಿ ಕಾಣಬಹುದು ಎಂಬುದನ್ನು ಅರಿತ ನಂತರ ಸಿಂಧೂ ದರ್ಶನ ಯಾತ್ರಾ ಸಮಿತಿ ಎಂಬುದು ರಚಿತವಾಯಿತು. ಇದು ಪ್ರತಿ ವರ್ಷ ಜೂನ್ ತಿಂಗಳಿನಲ್ಲಿ ಸಿಂಧೂ ದರ್ಶನ ಕಾರ್ಯಕ್ರಮ ಏರ್ಪಡಿಸುತ್ತದೆ. ಅದಕ್ಕೆ ದೇಶಾದ್ಯಂತ ಜನರು ಬರುತ್ತಾರೆ. ಸಿಂಧೂ ನದಿಯನ್ನು ಕಂಡು ಹರ್ಷಿತರಾಗುತ್ತಾರೆ. ಅದಕ್ಕೆ ಪೂಜೆ ಸಲ್ಲಿಸುತ್ತಾರೆ, ಸ್ನಾನ ಮಾಡಿ ಪವಿತ್ರರಾದೆವು ಎಂಬ ಭಾವ ಹೊಂದುತ್ತಾರೆ. ಇದು 1997ರಿಂದ ನಡೆದುಕೊಂಡು ಬಂದಿದೆ. ಇದನ್ನು 3 ದಿನಗಳ ಕಾಲ ನಡೆಸಲಾಗುತ್ತದೆ. ಸಿಂಧೂ ದರ್ಶನದಲ್ಲಿ ಸಿಂಧೂ ನದಿಯ ದರ್ಶನ, ಅರ್ಚನೆ, ಸ್ನಾನದ ಜೊತೆಗೆ ದೇಶದ ಐಕ್ಯತೆ, ಸಾಮರಸ್ಯ ಹಾಗೂ ಸೌಹಾರ್ದತೆ ತರುವ ಮೂಲ ಉದ್ದೇಶವೂ ಅಡಗಿದೆ. ಇದರ ಜೊತೆಗೆ ನಮ್ಮ ಭಾರತ ಸೈನ್ಯದ ವೀರ ಯೋಧರಿಗೆ ಗೌರವ ಸಲ್ಲಿಸುವ ಉದ್ದೇಶವನ್ನೂ ಹೊಂದಲಾಗಿದೆ. ಈ ವರ್ಷ ನಡೆದಿದ್ದು 26ನೆಯ ಸಿಂಧೂ ದರ್ಶನ ಸಮಾರಂಭ. ಈಗ ಇಲ್ಲಿ ಸಿಂಧೂ ಘಾಟ್ ನಿರ್ಮಿಸಲಾಗಿದೆ.

ಸಿಂಧೂ ನದಿ ಭೋರ್ಗರೆಯುತ್ತಾ ಹರಿಯುವ ನದಿ. ಒಬ್ಬ ವೀರ ಯೋಧ ಶೌರ್ಯದಿಂದ ಅಬ್ಬರಿಸಿ ಮುನ್ನಡೆದಾಗ ಅವನು ಅನೇಕ ಯೋಧರ ಮುಂದಾಳಾಗಿ ಸಾಗುತ್ತಾನೆ. ಹಾಗೆಯೇ ಸಿಂಧೂ ನದಿ ಇತರ ನದಿಗಳ ನಾಯಕನಂತೆ ಸಾಗುತ್ತದೆ ಎಂದು ಈ ನದಿಯನ್ನು ವರ್ಣಿಸಲಾಗುತ್ತದೆ.

1997ರಲ್ಲಿ ನಡೆದ ಸಿಂಧೂ ದರ್ಶನ ಪೂಜಾ ಕಾರ್ಯಕ್ರಮದಲ್ಲಿ ಆಗಿನ ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಶ್ರೀ ಮುಕುಟ್ ಮೀಥಿಯವರು ಭಾಗವಹಿಸಿದ್ದರು. ಅವರು ಅರುಣಾಚಲದಿಂದ ತಂದಿದ್ದ ಬ್ರಹ್ಮಪುತ್ರಾ ನದಿಯ ನೀರನ್ನು ಸಿಂಧೂ ನದಿ ನೀರಿನೊಂದಿಗೆ ಮಿಳಿತಗೊಳಿಸಿದರು. ಸಿಂಧೂ ಹಾಗೂ ಬ್ರಹ್ಮಪುತ್ರ ಈ ಎರಡೂ ನದಿಗಳು ಮಾನಸ ಸರೋವರದಲ್ಲಿ ಜನಿಸಿ, ವಿವಿಧ ದಿಕ್ಕಿನಲ್ಲಿ ಹರಿಯುತ್ತವೆ. ಇಂದು ಆ ಎರಡೂ ನದಿಗಳ ನೀರು ಸಂಗಮವಾಗಿದೆ ಎಂದು ಅವರು ಹೇಳಿದ್ದರು.

ಈ ಪದ್ಧತಿ ಇಂದಿಗೂ ಮುಂದುವರೆದು ದೇಶದ ಐಕ್ಯತೆ ಸಾರುವ ಉತ್ಸವವಾಗಿ ಮಾರ್ಪಾಡಾಗಿದೆ. ಪ್ರತಿವರ್ಷ ಈ ಸಿಂಧೂ ಉತ್ಸವಕ್ಕೆ ದೇಶದ ಎಲ್ಲ ಭಾಗಗಳಿಂದ ಜನರು ಆಗಮಿಸುತ್ತಾರೆ. ಹಾಗೆ ಬರುವಾಗ ಅವರು ತಮ್ಮ ರಾಜ್ಯದಲ್ಲಿ ಹರಿಯುವ ಪ್ರಮುಖ ನದಿಗಳ ನೀರನ್ನು ತರುತ್ತಾರೆ. ಅವುಗಳನ್ನು ಸಿಂಧೂ ಪೂಜೆಯ ಸಮಯದಲ್ಲಿ ಪೂಜಿಸಿ ಸಿಂಧೂ ನದಿಯಲ್ಲಿ ಮಿಲನ ಮಾಡಿಸಲಾಗುತ್ತದೆ. ಇದರಿಂದ ದೇಶದ ವಿವಿಧ ಭಾಗಗಳ ನದಿಯ ನೀರು ಸಿಂಧೂ ನದಿಗೆ ಸೇರುತ್ತದೆ. ಮೊದಲೇ ಪಾವನವಾದ ಸಿಂಧೂ ನದಿ, ಇತರೆ ಪವಿತ್ರ ನದಿಗಳ ನೀರಿನ ಸೇರುವಿಕೆಯಿಂದ ಮತ್ತಷ್ಟು ಪಾವನವಾಗುತ್ತವೆ. ಇದು ಭಾರತ ದೇಶದ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಒಂದುಗೂಡಿಸಿದಂತೆ ಕಂಡುಬರುತ್ತದೆ.

ಸಿಂಧೂ ದರ್ಶನ ಯಾತ್ರೆಗೆ ಆಗಮಿಸುವ ಯಾತ್ರಾರ್ಥಿಗಳನ್ನು ಮೊದಲ ದಿನ ಲೇಹ್‌ನಲ್ಲಿ ಸ್ವಾಗತಿಸುವ ಕಾರ್ಯಕ್ರಮ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ವಿವಿಧ ಧರ್ಮದವರು, ಅಂದರೆ ಬೌದ್ಧರು, ಶಿಯಾ, ಸುನ್ನಿ, ಕ್ರಿಶ್ಚಿಯನ್, ಹಿಂದು, ಸಿಖ್ ಜನಾಂಗದವರ ಜಂಟಿ ಸಂಘಟನೆಯು ಮೂಲಕ ನಡೆಯುತ್ತದೆ. ಲಡಾಖ್‌ನ ಬೌದ್ಧ ಸಂಘಟನೆ, ಶಿಯಾ ಮಜ್ಲಿಸ್, ಸುನ್ನಿ ಅಂಜುಮಾನ್, ಕ್ರಿಶ್ಚಿಯನ್ ಮೊರಾವಿಯನ್ ಚರ್ಚ್, ಹಿಂದೂ ಟ್ರಸ್ಟ್ ಹಾಗೂ ಸಿಖ್ ಗುರುದ್ವಾರ ಪ್ರಬಂಧಕ ಸಮಿತಿ ಈ ಸ್ವಾಗತ ಕಾರ್ಯಕ್ರಮವನ್ನು ಜಂಟಿಯಾಗಿ ಆಯೋಜಿಸುತ್ತಿವೆ. ಇದರಿಂದ ರಾಷ್ಟ್ರೀಯ ಏಕತೆಯ ಸ್ವರೂಪ ನೆರೆದವರ ಅರಿವಿಗೆ ಬರುತ್ತದೆ. ಇದರ ಅಂಗವಾಗಿ ಬೌದ್ಧ ಧರ್ಮದ 50 ಹಿರಿಯ ಲಾಮಾಗಳು ಸಿಂಧೂನದಿ ದಡದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಸ್ವಾಗತ ಸಮಾರಂಭದಲ್ಲಿ ದೇಶದ ವಿವಿಧ ಭಾಗದ ಜನರು ಪ್ರಸ್ತುತಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತದೆ. 2ನೇ ದಿನ ಸಿಂಧೂ ಪೂಜಾ ಕಾರ್ಯಕ್ರಮ ನಡೆಯುತ್ತದೆ. ಈ ಉತ್ಸವ ನಡೆಯುವ ಮೂರು ದಿನ ಲೇಹ್‌ನಲ್ಲಿ ಪ್ರವಾಸಿಗರ ಜನಸಂದಣಿ ಹೆಚ್ಚಾಗಿ ಕಂಡುಬರುತ್ತದೆ. ಸ್ಥಳೀಯರೂ ಈ ವೈಭವಪೂರಿತ ಸ್ವಾಗತ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಮೂರನೆಯ ದಿನ ಭಾರತ ಹಾಗೂ ಚೀನಾ ದೇಶದ ಗಡಿಭಾಗದಲ್ಲಿರುವ ಪೇಂಗಾಂಗ್ ಲೇಕ್ (Pangong lake) ನೋಡಿಬರಲು ಅವಕಾಶ ಕಲ್ಪಿಸಲಾಗುತ್ತದೆ.

ಸಿಂಧೂ ನದಿ ಒಂದು ಪ್ರಾತಿನಿಧಿಕ ಕೇಂದ್ರ ಈ ಉತ್ಸವದಿಂದ ರಾಷ್ಟ್ರೀಯ ಏಕತೆ ಹಾಗೂ ಕೋಮು ಸಾಮರಸ್ಯ ಸಾರಲು ಸಾಧ್ಯವಾಗುತ್ತಿದೆ. ಇದರ ಜೊತೆಗೆ ಲಡಾಖ್‌ನ ಪ್ರಕೃತಿಯ ರಮಣೀಯತೆಯನ್ನು ಪ್ರವಾಸಿಗರು ವೀಕ್ಷಿಸುವಂತಾಗಲಿ ಎಂಬುದು ಈ ಯಾತ್ರೆಯ ಉದ್ದೇಶವೂ ಆಗಿದೆ.

ಸಾವಿರಾರು ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತುಪ್ರದರ್ಶನ ವೀಕ್ಷಣೆ

ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಉದ್ಘಾಟನೆ; ಯುವ ಪ್ರತಿಭೆ ಸಾಧನೆಗೆ ಪ್ರಶಂಸೆ




> “ಈ ಹಿಂದೆ ನೈಸರ್ಗಿಕ ವಿಪತ್ತು, ಪ್ರವಾಹ, ಮೇಘ ಸ್ಫೋಟಗಳಾದಾಗ ಊರಿಗೆ ಊರೇ ನಾಶವಾಗುತ್ತಿತ್ತು. ಹವಾಮಾನ ಮುನ್ಸೂಚನೆ ಅರಿಯಲು ಯಾವುದೇ ಸೌಲಭ್ಯಗಳಿರಲಿಲ್ಲ. ಆದರೆ ಈಗ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಿರುವುದರಿಂದ ನೈಸರ್ಗಿಕ ಬದಲಾವಣೆಯನ್ನು ಮೊದಲೇ ಅರಿತು ಮುಂಜಾಗ್ರತೆ ವಹಿಸಿ, ಉಂಟಾಗ ಬಹುದಾದ ನಷ್ಟವನ್ನು ತಡೆಯುಲು ವಿಜ್ಞಾನ ಸಹಕಾರಿಯಾಗಿದೆ.
> –ಕಿರಣ್‌ಕುಮಾರ್, ಇಸ್ರೋ ಮಾಜಿ ಅಧ್ಯಕ್ಷ



ಮೈಸೂರು, ಜು.9(ಆರ್‌ಕೆ)–ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಜ್ಞಾನ ವಸ್ತುಪ್ರದರ್ಶನವನ್ನು ಸುಮಾರು 10,000 ಶಾಲಾ–ಕಾಲೇಜು ವಿದ್ಯಾರ್ಥಿಗಳು ವೀಕ್ಷಿಸಿದರು.

ಮೈಸೂರು ಸೈನ್ಸ್ ಫೌಂಡೇಷನ್ ವತಿಯಿಂದ ದಶಮಾನೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸೈನ್ಸ್ ಎಕ್ಸ್‌ಪೋ–2022 ಅನ್ನು ಡ್ರೋಣ್ ಆಪರೇಟ್ ಮಾಡಿದ ನಂತರ ಪ್ರಸಿದ್ಧ ವಿಜ್ಞಾನಿಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಉದ್ಘಾಟಿಸಿದರು. ಕಾಲೇಜಿನ 3 ಮಹಡಿಗಳ 50 ಕೊಠಡಿಗಳಲ್ಲಿ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸೈನ್ಸ್ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳ ಅಧ್ಯಯನ ವಿಭಾಗಗಳು ಆಯೋಜಿಸಿದ್ದ ಒಂದು ದಿನದ ವಿಜ್ಞಾನ ವಸ್ತುಪ್ರದರ್ಶನವನ್ನು ಮೈಸೂರು ನಗರ ಜಿಲ್ಲೆಯಲ್ಲದೇ ರಾಜ್ಯದ ವಿವಿಧ ಜಿಲ್ಲೆಗಳ 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೀಕ್ಷಿಸಿದರು. ಆರ್ಯಭಟ ಮೊಬೈಲ್ ಪ್ಲಾನೆಟೇರಿಯಂ 3D ಷೋ, ಮೊಬೈಲ್ ಸೈನ್ಸ್ ಲ್ಯಾಬೊರೇಟರಿ, ವಿಜ್ಞಾನ ಮತ್ತು ಗಣಿತ ಮಾದರಿ ಪ್ರಾತ್ಯಕ್ಷಿಕೆ, ವಿಜ್ಞಾನದ ಪ್ರಯೋಗ, ಹೈಡ್ರಾಲಿಕ್ ಆರ್ಮ್, ಹೋಲೋಗ್ರಾಂ, ವಿಂಡ್ ಟರ್ಬಿಂಗ್, ರೋಡ್ ಸೇಫ್ಟಿ ಆಕ್ಸಿಡೆಂಟ್ ಪ್ರಿವೆನ್‌ಷನ್ ನಂತರ ಅನ್ವೇಷಣೆಯನ್ನು ಎಕ್ಸ್‌ಪೋದಲ್ಲಿ ಪ್ರದರ್ಶಿಸಲಾಗಿತ್ತು. ಇಸ್ರೋದಿಂದ ಗಾಲಿ ಮೇಲೆ ಬಾಹ್ಯಾಕಾಶ, ಫೋಟೋ ಎಕ್ಸ್‌ಪೋ, ಮಾನವನ ಅಂಗ ರಚನೆ, ಆಹಾರ ಕಲಬೆರಕೆ ಪತ್ತೆ ಮಾಡುವ ಕ್ರಮ, ನ್ಯೂಟ್ರೀಷನ್ ಸ್ಟೇಟಸ್ ಅಸೆಸ್‌ಮೆಂಟ್, ಸೈನ್ಸ್ ಅಂಡ್ ಮ್ಯಾಥ್ಸ್ ಮಾಡೆಲ್ ಮೇಕಿಂಗ್ ಕಾರ್ಯಾಗಾರ, ರೋಬೋಟಿಕ್ ಮಾದರಿ, ಸೋಲಾರ್ ಗೂಗಲ್, ಹೆಚ್‌ಎಎಂ ರೇಡಿಯೋ ಮತ್ತು 3D ಪ್ರಿಂಟಿಂಗ್ ಸೇರಿದಂತೆ ಇಂದಿನ ವಸ್ತುಪ್ರದರ್ಶನದಲ್ಲಿ ಹಲವು ವಿಶೇಷ ವಿಜ್ಞಾನ ಆವಿಷ್ಕಾರಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲಾಯಿತು.



ಈ ಸಂದರ್ಭ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್, ಕುತೂಹಲ ಅಭಿರುಚಿಗೆ ತಕ್ಕಂತೆ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಿದಲ್ಲಿ ವಿಜ್ಞಾನದ ಬಗ್ಗೆ ಆಳವಾದ ಅಧ್ಯಯನ ಮಾಡಿ ಸಾಧನೆ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಎಲ್ಲರಲ್ಲೂ ವಿಜ್ಞಾನದ ಆಸಕ್ತಿ ಸುಪ್ತವಾಗಿರುತ್ತದೆ. ಅದನ್ನು ಹೊರ ತರಬೇಕಷ್ಟೇ ಎಂದರು.

ಈ ಹಿಂದೆ ಪ್ರಾಚೀನ ಕಾಲದಲ್ಲಿ ನಾಗರಿಕತೆ ಗೊತ್ತಿಲ್ಲದಿದ್ದಾಗ ಮನುಷ್ಯ ಮರದ ಎಲೆಗಳನ್ನೇ ಕವಚ ಮಾಡಿಕೊಂಡು ಗೆಡ್ಡೆ–ಗೆಣಸು ತಿಂದು ಜೀವಿಸುತ್ತಿದ್ದ, ನಂತರ ಕಾಡುಪ್ರಾಣಿಗಳ ಮಾಂಸವನ್ನೇ ಆಹಾರ ಪದ್ಧತಿ ಮಾಡಿಕೊಂಡಿದ್ದ ಕಾಲದಿಂದ ಈಗ ಬಾಹ್ಯಾಕಾಶಕ್ಕೂ ತಲುಪಿ ಮಾಹಿತಿ ಕಲೆ ಹಾಕುವಷ್ಟು ಮಟ್ಟಕ್ಕೆ ಬೆಳೆಯಲು ವಿಜ್ಞಾನ ಪ್ರಮುಖ ಕಾರಣವಾಗಿದೆ ಎಂದ ಅವರು, ಒಂದು ಮೊಬೈಲ್ ಫೋನ್‌ನಿಂದ ಇಡೀ ಪ್ರಪಂಚ ನೋಡುವಷ್ಟರ ಮಟ್ಟಿಗೆ ತಂತ್ರಜ್ಞಾನ ಅಭಿವೃದ್ಧಿಯಾಗಿದ್ದು, ಅದರಿಂದ ದೇಶದ ಸಮಗ್ರ ಬೆಳವಣಿಗೆಯಾಗುತ್ತಿದೆ ಎಂದರು.

ಮೈಸೂರು ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ. ಕೃಷ್ಣೇಗೌಡ, ಖಜಾಂಚಿ ಎಂಜಿಎನ್ ಪ್ರಸಾದ್, ಸೀನಿಯರ್ ಸಿಎಫ್‌ಟಿಆರ್‌ಐ ವಿಜ್ಞಾನಿ ಡಾ. ಟಿ. ತಿಪ್ಪೇಸ್ವಾಮಿ, ಇಸ್ರೋ ವಿಜ್ಞಾನಿ ಸಿ.ಡಿ. ಪ್ರಸಾದ್, ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಂಎನ್‌ಕೆ ನರಹರಿ ಬಾಬು ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜು.13ರಂದು ‘ವನಸಿರಿ’; 25,000 ಸಸಿ ನೆಡುವ ಕಾರ್ಯಕ್ರಮ

ಮೈಸೂರು,ಜು.9(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಹಾಗೂ ರಾಜೀವ್ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಜು.13ರಂದು ‘ವನಸಿರಿ’ 25 ಸಾವಿರ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಿದೆ.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ‘ಹಸಿರು ಮೈಸೂರು’ ನರ್ಸರಿಯಲ್ಲಿ ಈ ವಿಷಯ ತಿಳಿಸಿದ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, 10,000 ಸಸಿಗಳನ್ನು ರಾಜೀವ್ ಸ್ನೇಹ ಬಳಗದಿಂದ, 15,000 ಸಸಿಗಳನ್ನು ಮುಡಾದಿಂದ ಪೂರೈಸಲಾಗುತ್ತಿದ್ದು, ಮೈಸೂರಿನ ಪಾರ್ಕ್‌ಗಳು, ರಸ್ತೆ ಬದಿಯಲ್ಲಿ ನೆಡಲಾಗುವುದು ಎಂದರು.

ಜು.13ರಂದು ಬೆಳಗ್ಗೆ 10 ಗಂಟೆಗೆ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿರುವ ವನಸಿರಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಡೆ ಸಸಿ ನೆಡುವ ಮೂಲಕ ವನಮಹೋತ್ಸವಕ್ಕೆ ಚಾಲನೆ ನೀಡುವರು.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವ ಕಾರ್ಯಕ್ರಮದಲ್ಲಿ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್ ‘ಸಮಾಜಮುಖಿ’ ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ‘ಸಿರಿ ಸಂವರ್ಧನ’ ಪ್ರಶಸ್ತಿ ಪ್ರದಾನ ಮಾಡುವರು.

ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸಲಿದ್ದು, ಮೇಯರ್ ಸುನಂದಾ ಪಾಲನೇತ್ರ, ಸಂಸದ ಪ್ರತಾಪ್ ಸಿಂಹ, ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಇನ್ನಿತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಗುರುಪೂರ್ಣಿಮೆ, ವ್ಯಾಸಮುನಿ ಜಯಂತಿ

ಮೈಸೂರು: ಬೆಲವತ್ತ ಗ್ರಾಮದಲ್ಲಿರುವ ಶ್ರೀ ನಾಗಾನಂದ ದತ್ತಾತ್ರೇಯ ಮಠದಲ್ಲಿ ಜು.13ರಂದು 48ನೇ ವರ್ಷದ ಗುರು ಪೂರ್ಣಿಮೆ ಹಾಗೂ ವ್ಯಾಸಮುನಿ ಜಯಂತಿ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ಭಜನೆ, ಮಧ್ಯಾಹ್ನ 1ಕ್ಕೆ ಮೆರವಣಿಗೆ, ಪ್ರವಚನ, ಆಶೀರ್ವಚನ ನಂತರ ಪ್ರಸಾದ ವಿನಿಯೋಗ, ಸಂಜೆ 6.30ರಿಂದ ಅಖಂಡ ಭಜನೆ ನಡೆಯಲಿದೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪುಟ 5
ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
10-7-2022

ಜುಲೈ 13, ಚಾಮರಾಜೇಶ್ವರ ಸ್ವಾಮಿಯ ರಥೋತ್ಸವದ ತನ್ನಿಮಿತ್ತ ಈ ಲೇಖನ

ಆಷಾಢ ಮಾಸದ

ಚಾಮರಾಜೇಶ್ವರಸ್ವಾಮಿ ಮಹಾ ರಥೋತ್ಸವ



ಸಂಗ್ರಹ ಚಿತ್ರ

ಆಷಾಢ ಮಾಸ, ಈ ಮಾಸವನ್ನು ಶೂನ್ಯ ಮಾಸವೆಂದೂ ಕರೆಯಲಾಗುತ್ತದೆ. ಹಾಗಾಗಿ, ಈ ಮಾಸದಲ್ಲಿ ಮದುವೆ, ಗೃಹಪ್ರವೇಶ ಸೇರಿದಂತೆ ಯಾವುದೇ ಶುಭ ಕಾರ್ಯಗಳು ನಡೆಯುವುದಿಲ್ಲ. ಆದರೆ, ಈ ಮಾಸದಲಿಯೇ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಶ್ರೀಚಾಮರಾಜೇಶ್ವರಸ್ವಾಮಿ ರಥೋತ್ಸವ ವೈಭವಯುತವಾಗಿ ನಡೆಯುತ್ತದೆ.

ಕಳೆದ ಐದು ವರ್ಷಗಳಿಂದ ನಡೆಯದಿದ್ದ ಚಾಮರಾಜನಗರದ ಕೆಂಪನಂಜಾಂಬ ಸಮೇತ ಶ್ರೀಚಾಮರಾಜೇಶ್ವರ ಸ್ವಾಮಿಯವರ ಮಹಾ ರಥೋತ್ಸವ ಜುಲೈ 13ರಂದು ನಡೆಯಲಿದ್ದು, ಭಕ್ತರಲ್ಲಿ ಹರ್ಷ ಮೂಡಿಸಿದೆ.

ಹಿಂದಿನ ಕಾಲದಿಂದಲೂ ಸಂಪ್ರದಾಯಬದ್ಧವಾಗಿ ನಡೆದುಕೊಂಡು ಬರುತ್ತಿದ್ದ ಜಿಲ್ಲೆಯ ಚಾಮರಾಜೇಶ್ವರ ಸ್ವಾಮಿ ರಥೋತ್ಸವ ರಥವಿಲ್ಲದೇ ಸ್ಥಗಿತಗೊಂಡಿತ್ತು. ರಥಕ್ಕೆ ದುಷ್ಕರ್ಮಿಯೊಬ್ಬ ಬೆಂಕಿ ಹಚ್ಚಿದ್ದರಿಂದ ಅದು ಸುಟ್ಟು ಹೋಗಿತ್ತು. ಹೀಗಾಗಿ ಹೊಸ ರಥ ನಿರ್ಮಾಣ ಮಾಡಿ ರಥೋತ್ಸವ ನಡೆಸಲು 5 ವರ್ಷಗಳೇ ಬೇಕಾಯಿತು. ಇದರ ನಡುವೆ



ರಥೋತ್ಸವಕ್ಕೆ ಸಜ್ಜುಗೊಳ್ಳುತ್ತಿರುವ ನೂತನ ರಥ

ಕೊರೊನಾ ಆರ್ಭಟ ಯಾವುದೇ ಜಾತ್ರೆಗಳು ನಡೆಯದಂತೆ ಮಾಡಿತ್ತು. ಇದೀಗ ಸುಸಜ್ಜಿತವಾದ ನೂತನ ರಥ ನಿರ್ಮಾಣವಾಗಿದ್ದರಿಂದ ಈ ಬಾರಿ ರಥೋತ್ಸವ ನಡೆಯುತ್ತಿದ್ದು, ಉತ್ಸವಕ್ಕೆ ಸಂಬಂಧಿಸಿದ ಕೈಂಕರ್ಯಗಳು ಆರಂಭಗೊಂಡಿದೆ.

ಜುಲೈ 6ರಿಂದಲೇ ಜಾತ್ರೆ ಆರಂಭ: ರಥೋತ್ಸವದ ಅಂಗವಾಗಿ ಚಾಮರಾಜೇಶ್ವರಸ್ವಾಮಿ ದೇಗುಲದಲ್ಲಿ ಜುಲೈ 6 ರಿಂದಲೇ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳು ಆರಂಭಗೊಂಡಿದ್ದು, 17ರವರೆಗೆ ವಿಶೇಷ ಪೂಜೆ ಸೇರಿದಂತೆ ವಿವಿಧ ಕಾರ್ಯಗಳು ನಡೆಯಲಿವೆ.

ಜುಲೈ 6ರಂದು ಅಂಕುರಾರ್ಪಣ ಪೂರ್ವಕ ವೃಷಭಾದಿವಾಸ ನಡೆದಿದ್ದು, 7ರಂದು ಬೆಳಗ್ಗೆ 11.30 ರಿಂದ 12ಗಂಟೆಗೆ ಕನ್ಯಾ ಲಗ್ನ ಮುಹೂರ್ತದಲ್ಲಿ ಧ್ವಜಾರೋಹಣ ಪೂರ್ವಕ ಬೇರಿತಾಡನಾ ನಂತರ ಶಿಭಿಕಾರೋಹಣೋತ್ಸವ ಹಾಗೂ ಜುಲೈ 8ರಂದು ಚಂದ್ರ ಮಂಡಲಾರೋಹಣೋತ್ಸವ ನಡೆದಿದೆ. ಇನ್ನು 9ರಂದು ಅನಂತ ಪೀಠಾರೋಹಣೋತ್ಸವ, 10ರಂದು ಪುಷ್ಪಮಂಟಪಾರೋಹಣೋತ್ಸವ, 11ರಂದು ವೃಷಭಾರೋಹಣೋತ್ಸವ, 12ರಂದು ವಸಂತೋತ್ಸವ ಪೂರ್ವಕ ಗಜವಾಹನೋತ್ಸವ ಕಾರ್ಯಕ್ರಮಗಳು ನಡೆಯಲಿವೆ.

ಜು.13ಕ್ಕೆ ಮಹಾರಥೋತ್ಸವ: ಜಿಲ್ಲೆಯಲ್ಲದೇ ರಾಜ್ಯಾದ್ಯಂತ ಪ್ರಸಿದ್ಧಿ ಪಡೆದಿರುವ ರಥೋತ್ಸವವು ಇದೇ ಜುಲೈ 13ರ ಬುಧವಾರ ಪೂರ್ವಾಷಾಢ ನಕ್ಷತ್ರದಲ್ಲಿ ಬೆಳಗ್ಗೆ 11 ಗಂಟೆಯಿಂದ 11.30ರವರೆಗೆ ಶುಭ ಕನ್ಯಾ ಲಗ್ನದಲ್ಲಿ ನಡೆಯಲಿದೆ.

ಜುಲೈ 14ರಂದು ಮೃಗಾಯಾತ್ರಾ ಪೂರ್ವಕ ಅಶ್ವಾರೋಹಣಾನಂತರ ಮಹಾಭೂತಾರೋಹಣ, ದೇವಿ ಪ್ರಣಯಕಲಹ ಸಂಧಾನೋತ್ಸವ, 15ರಂದು ಹಗಲು ಚೂರ್ಣೋತ್ಸವ ಪೂರ್ವಕ ಅವಬೃತ ತೀರ್ಥ ಸ್ನಾನ ರಾತ್ರಿ ಧ್ವಜಾರೋಹಣ, ಮೌನಬಲಿ, 16ರಂದು ಪುಷ್ಪಯಾಗ ಪೂರ್ವಕ ಕೈಲಾಸಯಾನಾ ರೋಹಣೋತ್ಸವ, 17ರಂದು ಮಹಾಸಂಪ್ರೋಕ್ಷಣ ಪೂರ್ವಕ ನಂದಿ ವಾಹನೋತ್ಸವ ಕಾರ್ಯಕ್ರಮಗಳು ನಡೆಯಲಿವೆ.

ಆಷಾಢದಲ್ಲಿ ನಡೆಯುವ ರಥೋತ್ಸವ: ಇದೀಗ ಮಹಾರಥೋತ್ಸವ ನಡೆಯುತ್ತಿರುವ ಸುದ್ದಿ ಭಕ್ತರಲ್ಲಿ ಹರ್ಷ ಮೂಡಿಸಿದೆ. ಆಷಾಢದಲ್ಲಿ ನಡೆಯುವ ಈ ರಥೋತ್ಸವಕ್ಕೆ ಜಿಲ್ಲೆಯ ಜನರು ಮಾತ್ರವಲ್ಲದೆ ಸುತ್ತಮುತ್ತಲಿನ ಜಿಲ್ಲೆಗಳ, ರಾಜ್ಯದ ಜನರು ಆಗಮಿಸುವುದು ವಿಶೇಷ. ಅದರಲ್ಲೂ ನೂತನವಾಗಿ ವಿವಾಹವಾದ ನವದಂಪತಿಗಳು ರಥಕ್ಕೆ ಹಣ್ಣುಧವನ ಎಸೆಯುವುದು ವಿಶೇಷವಾಗಿದೆ. ಕಳೆದ ಐದು ವರ್ಷಗಳಿಂದ ರಥೋತ್ಸವ ನಡೆಯದ ಕಾರಣ ಈ ಬಾರಿಯ ರಥೋತ್ಸವ ಬಹಳ ಪ್ರಾಮುಖ್ಯತೆ ಪಡೆದಿದೆ.

ರಥದ ಬೀದಿಯಲ್ಲಿ 6 ರಥಗಳ ವೈಭವ: ಚಾಮರಾಜೇಶ್ವರಸ್ವಾಮಿ ದೊಡ್ಡ ರಥ ಮುಂದೆ ಗಣಪತಿ ರಥ, ಸುಬ್ರಮಣ್ಯಸ್ವಾಮಿ ಚಿಕ್ಕ ರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತದೆ. ದೊಡ್ಡರಥದ ಹಿಂದೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಈ ಜಾತ್ರೆಯ ಮತ್ತೊಂದು ವಿಶೇಷ.ಒಟ್ಟಾರೆಯಾಗಿ ಹೇಳಬೇಕೆಂದರೆ ಈ ಬಾರಿ ಆಷಾಢದ ಚಾಮರಾಜೇಶ್ವರ ಸ್ವಾಮಿ ಬ್ರಹ್ಮ ಮಹಾರಥೋತ್ಸವವು ಹೊಸ ರಥದಲ್ಲಿ ನಡೆಯಲಿದ್ದು,

ಚಾಮರಾಜೇಶ್ವರ ದೇಗುಲದ ಹಿನ್ನೆಲೆ

ಚಾಮರಾಜನಗರದ ಹೃದಯ ಭಾಗದಲ್ಲಿರುವ ಈ ದೇವಾಲಯ 1791-1868ರಲ್ಲಿ ಚಾಮರಾಜೇಂದ್ರ ಒಡೆಯರ್ ಮಕ್ಕಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದ್ದಾರೆ. ಈ ಹಿಂದೆ ಚಾಮರಾಜನಗರ ಜಿಲ್ಲೆಗೆ ಅರಿಕುಟಾರ ಎಂಬ ಹೆಸರು ಇತ್ತು ನಂತರದ ದಿನಗಳಲ್ಲಿ ಈ ಸ್ಥಳದಲ್ಲಿ ಚಾಮರಾಜ ಒಡೆಯರ್ ಅವರು ಜನಿಸಿದ್ದರಿಂದ ಈ ಜಿಲ್ಲೆಗೆ ಚಾಮರಾಜ ನಗರ ಎಂದು ನಾಮಕರಣ ಮಾಡಿದ್ದರಂತೆ.

ಚಾಮರಾಜ ಒಡೆಯರ್ ಅವರು ಮೃತಪಟ್ಟ ನಂತರ ಇವರ ಮಗ ಮುಮ್ಮಡಿ ಕೃಷ್ಣರಾಜ ಒಡೆಯರು ತಂದೆಯ ಜ್ಞಾಪಕಾರ್ಥವಾಗಿ ಈ ಚಾಮರಾಜೇಶ್ವರ ದೇವಾಲಯವನ್ನು ಕಟ್ಟಿಸಿದರು. ಶಿವಲಿಂಗವನ್ನು ಸ್ಥಾಪಿಸಲು ಕೃಷ್ಣರಾಜ ಒಡೆಯರ್ ಕಾಶಿಗೆ ತೆರಳಿ ಅಲ್ಲಿನ ಗುರುಗಳನ್ನು ಭೇಟಿಯಾಗಿ ಅವರ ಬಳಿ ಚಾಮರಾಜನಗರದಲ್ಲಿ ಈಶ್ವರಲಿಂಗ ಸ್ಥಾಪಿಸಿ ದೇವಾಲಯ ನಿರ್ಮಿಸುವ ಬಗ್ಗೆ ಪ್ರಸ್ತಾಪಿಸಿದ್ದರುತೆ. ಆನಂತರ ಅಲ್ಲಿನ ಗುರುಗಳು ತಮ್ಮ ಬಳಿ ಇದ್ದ ಈಶ್ವರನ ಲಿಂಗವನ್ನು ಇವರಿಗೆ ನೀಡಿ ಈಶ್ವರ ಮತ್ತು ರಾಜತ್ವ ಸೇರಿ ಚಾಮರಾಜೇಶ್ವರ ಎಂದು ಹೆಸರು ಇಟ್ಟರಂತೆ. ಈ ಲಿಂಗವನ್ನು ಸ್ಥಾಪಿಸುವ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತದೆ ಎಂದು ಹೇಳಿ ಈ ಲಿಂಗವನ್ನು ನೀಡಿದ್ದರಂತೆ. ಅಲ್ಲಿಂದ ಲಿಂಗವನ್ನು ಕೃಷ್ಣರಾಜ ಒಡೆಯರ್ ಚಾಮರಾಜನಗರದಲ್ಲಿ ಪ್ರತಿಷ್ಠಾಪಿಸಿದರು.

ದೇವಾಲಯದ ಸುತ್ತಲೂ ಶಿವನ ವಿವಿಧ ಅವತಾರಗಳ ವಿಗ್ರಹಗಳನ್ನು ಕೆತ್ತಲಾಗಿದ್ದು, ಈ ದೇವಸ್ಥಾನದ ಸುತ್ತಲೂ ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಹಿಂಭಾಗದಲ್ಲಿ ಅಂದಿನ ಕಾಲದಲ್ಲಿ ಅಂದರೆ ಚಾಮರಾಜ ಒಡೆಯರ್ ಜೀವಿತಾವಧಿಯಲ್ಲಿ ಇದ್ದ ಮಹಾನ್ ದೈವ ಭಕ್ತರ ವಿಗ್ರಹಗಳನ್ನು ಕೆತ್ತಲಾಗಿದೆ. ಇವರು ಶಿವನ ಪರಮ ಭಕ್ತರು ಎಂದು ಹೇಳಲಾಗುತ್ತದೆ. ಎಡಭಾಗದಲ್ಲಿ ದೇವಾಲಯದ ಒಳಗಡೆ ಪಾರ್ವತಿ ದೇವಿಯನ್ನು ಪ್ರತಿಷ್ಠಾಪಿಸಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ಹೆಸರಿನ ಕೆಂಪನಂಜಾಂಬಾ ದೇವಾಲಯ ಎಂದು ನಾಮಕರಣ ಮಾಡಲಾಯಿತು.

ದೇವಾಲಯದಲ್ಲಿ ಮೈಸೂರು ಮಹಾರಾಜರ ಕುಲದೇವತೆ ಚಾಮುಂಡೇಶ್ವರಿ ತಾಯಿಯನ್ನು ಪೂಜಿಸಲಾಗಿದ್ದು, ತಾಯಿಯ ಮೂಲ ವಿಗ್ರಹದ ಶಿಲೆಯನ್ನು ಧಾರವಾಡದಿಂದ ತರಿಸಿ ಅಲ್ಲಿನ ಶಿಲ್ಪ ಕಲಾವಿದರಿಂದ ಕೆತ್ತಿಸಿ, ಚಾಮ ರಾಜೇಶ್ವರ ದೇವಾಲಯದ ಬಲಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ.


ಚಾಮರಾಜನಗರದ ಈ ಪುಣ್ಯ ಸ್ಥಳದಲ್ಲಿ ಶಿವಪಾರ್ವತಿಯರ ಅಲ್ಲದೆ, ಜಗನ್ಮಾತೆ ಚಾಮುಂಡೇಶ್ವರಿಯು ನೆಲೆಸಿರುವುದರಿಂದ ಭಕ್ತರು ಅಷ್ಟು ದೇವರುಗಳ ಕೃಪೆಗೆ ಪಾತ್ರರಾಗುತ್ತಾರೆ. ಚಾಮುಂಡೇಶ್ವರಿ ದೇವಿಯು ಹೆಣ್ಣುಮಕ್ಕಳ ಕಷ್ಟ ಕಾರ್ಪಣ್ಯಗಳನ್ನು ನಿವಾರಣೆ ಮಾಡುವ ಆದಿಶಕ್ತಿಯಾಗಿ ಇರುವುದರಿಂದ ಇಲ್ಲಿಗೆ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅಷ್ಟೇ ಅಲ್ಲದೇ ದೇವಿಗೆ ಪ್ರತಿವಾರ ವಿಶೇಷ ಪೂಜೆಯನ್ನು ನೆರವೇರಿಸಲಾಗುತ್ತದೆ. ■

ಸಿದ್ದಲಿಂಗಸ್ವಾಮಿ
ಮೊ. 9242265657

ಆಷಾಢ ಮಾಸದಲ್ಲಿಯೇ ಏಕೆ?

ಚಾಮರಾಜಒಡೆಯರ್ ಹುಟ್ಟಿದ ನಕ್ಷತ್ರದ ಅನುಸಾರವಾಗಿ ಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ಮಹಾರಾಜರು ಹುಟ್ಟಿದ ನಕ್ಷತ್ರ ಆಷಾಢ ಮಾಸದ ಪೂರ್ವಾಷಾಢ ನಕ್ಷತ್ರ ದಿನ. ಹಾಗಾಗಿ, ಅವರು ಹುಟ್ಟಿದ ನಕ್ಷತ್ರದಂದು ರಥೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ.

ಐದಾರು ವರ್ಷಗಳ ಬಳಿಕ ನಡೆಯುತ್ತಿರುವ ರಥೋತ್ಸವದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಲು ಭಕ್ತರು ಕಾಯುತ್ತಿದ್ದಾರೆ. ಜಿಲ್ಲಾಡಳಿತ ರಥೋತ್ಸವವನ್ನು ಸುಸೂತ್ರವಾಗಿ ನಡೆಸಲು ಬೇಕಾದ ತಯಾರಿ ಮಾಡಿಕೊಳ್ಳುತ್ತಿರುವುದು ಕಂಡು ಬರುತ್ತಿದೆ.



ವಾರಭವಿಷ್ಯ



10.7.2022 ರಿಂದ 16.7.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಮಿಥುನ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ಮೇಷ, ಬುಧ-ಮಿಥುನ, ಗುರು-ಮೀನ, ಶುಕ್ರ-ಮಿಥುನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭ ಸ್ವಲ್ಪ ಒತ್ತಡಭರಿತವಾಗಿರುತ್ತದೆ. ವ್ಯಾಪಾರ ವಹಿವಾಟುಗಳ ಭರದಿಂದ ಸಾಗಿದರೂ ಲಾಭ-ನಷ್ಟಗಳು ಸಮಸಮವೇ. ನಿಮ್ಮ ರಾಶಿಗೆ ಬಂದ ಕುಜನಿಂದ ದುಡುಕು ಮಾತಿನಿಂದ ಕಾರ್ಯಗೇಡಾಗುವುದು. ಚತುಷ್ಪಾದ ಪ್ರಾಣಿಗಳಿಂದ ಎಚ್ಚರವಾಗಿರಿ. ವಾರ ಮಧ್ಯಾನಂತರ ಆರ್ಥಿಕ ಕಷ್ಟಗಳು ಉಂಟಾದರೂ ಜಯಿಸಿಕೊಳ್ಳುವಿರಿ. ಹಿಂದೆ ಮಾಡಿದ್ದ ರಿಯಲ್ ಎಸ್ಟೇಟ್ ಹೂಡಿಕೆಗಳು ಲಾಭಪ್ರದವೆನಿಸುವುದು. - ಶ್ರೀ ಸುಬ್ರಹ್ಮಣ್ಯೇಶ್ವರ ದರ್ಶನ, ಶುಭಸಂಖ್ಯೆ-8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಧನಾತ್ಮಕವಾಗಿ ಚಿಂತಿಸುವುದರಿಂದ ಸಾಧನೆಯ ಮಾರ್ಗ ತೆರೆದುಕೊಳ್ಳುವುದು. ಬೃಹಸ್ಪತಿಯ ಕೃಪೆಯಿಂದ ಉದ್ಯೋಗ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಸ್ಥಗಿತಗೊಂಡಿದ್ದ ಕೆಲಸ ಕಾರ್ಯಗಳಿಗೆ ಮರು ಚಾಲನೆ ದೊರೆಯುವುದು. ಸತಿ-ಪತಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆಯಾಗುವುದು. ಶುಕ್ರಗ್ರಹ ಸಂಚಲನ ಶುಭವಿದ್ದು, ಸಾಲಮುಕ್ತರಾಗುವ ಸಾಧ್ಯತೆ ಇದೆ. ಸರ್ಕಾರಿ ಅಧಿಕಾರಿಗಳಿಂದ ಪೀಡನೆ. - ಜಗತ್‌ಸ್ವಾಮಿನಿ ಚಾಮುಂಡಿ ಸೇವೆ, ಶುಭಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಪ್ರಯತ್ನಶೀಲರಿಗೆ ದೈವ ಸಹಾಯವೂ ಒದಗುತ್ತದೆ. ನಿಮ್ಮ ಯೋಜನೆಗಳು ಸಾಕಾರ ರೂಪಕ್ಕೆ ಬರಲು ಗುರು ಹಿರಿಯರ ಗೈಡೆನ್ಸ್ ದೊರೆಯುವುದು. ಆಪ್ತಮಿತ್ರರು ಸಹಾಯಕ್ಕೆ ಒದಗುವರು. ನೌಕರಿ ತಲಾಶ್ ಮಾಡುವವರಿಗೆ ಶುಭ ಸಮಾಚಾರ ಬರುವುದು. ಧಾರ್ಮಿಕ ಮಠ-ಮಾನ್ಯಗಳ ಗುರುಗಳ ಭೇಟಿಯಿಂದ ಧನ್ಯತಾ ಭಾವ. ರಫ್ತು ವ್ಯಾಪಾರ ಮಾಡುವವರಿಗೆ ವಿಶೇಷ ಧನಲಾಭವಾಗುವುದು. ನೇತ್ರ ಬಾಧೆ ಕಾಡಿಸಬಹುದು. - ಶ್ರೀ ರಾಮ ನಾಮ ಜಪಿಸಿ, ಶುಭಸಂಖ್ಯೆ-3.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ವಾಹನ ಖರೀದಿಯ ಕನಸು ನನಸಾದೀತು. ನಿಮ್ಮ ನಿಕಟವರ್ತಿಗಳು ನಿಮ್ಮ ಮಹತ್ವದ ಕೆಲಸಗಳಿಗೆ ನೆರವು ನೀಡುವರು. ಷೇರು ವ್ಯವಹಾರಗಳಲ್ಲಿ ಲಾಭವನ್ನು ಕಾಣಬಹುದು. ಉತ್ತಮ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇದೆ. ಕುಂಭ ಶನಿದೇವನ ಕಾರಣ ಮನೆಯಲ್ಲಿ ಆಂತರಿಕ ಕಲಹಗಳು ಉಂಟಾದೀತು. ವಾಹನ ಚಾಲನೆಯಲ್ಲಿ ಜಾಗರೂಕರಾಗಿರಿ. - ಶ್ರೀದುರ್ಗಾ ಪರಮೇಶ್ವರಿ ದರ್ಶನ, ಶುಭಸಂಖ್ಯೆ-7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದ ಆದಿಗೆ ಸುಖ, ಸಂತೋಷ, ಧನ-ಧಾನ್ಯ ಸಂಗ್ರಹ. ಕೃಷಿಕರಿಗೆ ಉತ್ತಮ ಫಸಲು, ದ್ವಿದಳ ಧಾನ್ಯ, ಎಳ್ಳು ಸಗಟು ವ್ಯಾಪಾರಿಗಳಿಗೆ ಹೆಚ್ಚಿನ ಧನ ಲಾಭವಾಗುವುದು. ಇಂಜಿಯರ್‌ಗಳಿಗೆ ಬೇಡಿಕೆ ಹೆಚ್ಚಾಗುವುದು. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ದಂಪತಿಗಳಲ್ಲಿ ಮನಸ್ತಾಪ ಉಂಟಾದೀತು, ದುಡುಕದಿರಿ, ಪರಸ್ಪರ ಸೋತು ಗೆಲ್ಲಿ. ವಾಹನ ಚಲಾಯಿಸುವಾಗ ಸೇಫ್ಟಿ ಫರ್ಸ್ಟ್, ಸ್ಪೀಡ್ ನೆಕ್ಸ್ಟ್. - ಶ್ರೀ ಶನಿ ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ-5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆದಿಗೆ ಸಂಪತ್ತಿನ ಸಂಗ್ರಹ, ಆಕಸ್ಮಿಕ ಧನ ಲಾಭ, ವಿಷಯ ಸುಖಗಳನ್ನು ಅನುಭವಿಸುವಿರಿ. ಪ್ರಭಾವಶಾಲಿಗಳೆನಿಸಿ ಶತ್ರುಗಳ ಮೇಲೆ ವಿಜಯ. ನ್ಯಾಯಾಲಯದ ವಿಚಾರಗಳಲ್ಲಿ ಮೇಲುಗೈ ಸಾಧಿಸುವಿರಿ. ಗುರುಕೃಪೆಯಿಂದ ಮನಸ್ಸಿಗೆ ನೆಮ್ಮದಿ ನೀಡುವ ಮಾರ್ಗವೊಂದು ಗೋಚರಿಸಲಿದೆ. ಹೋಟೆಲ್ ಉದ್ಯಮದವರಿಗೆ ಹೇರಳ ಧನಲಾಭ. ಯಾರೊಡನೆಯೂ ದ್ವೇಷ ಸಾಧನೆ ಮಾಡದಿರಿ. - ಶ್ರೀಮನ್ನಾರಾಯಣ ಪ್ರಾರ್ಥನೆ, ಶುಭಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವ್ಯಾಪಾರ ಸಾಪಾರಗಳು ಭರಾಟೆಯಿಂದ ಸಾಗುವುದು. ಟ್ರಾವೆಲ್ ಏಜೆನ್ಸಿಯವರಿಗೆ ಹೇರಳ ಧನಲಾಭ. ಗಣಕ ಯಂತ್ರ ವ್ಯಾಪಾರಿಗಳಿಗೆ ಹೆಚ್ಚಿನ ವರಮಾನವಾಗುವುದು. ಪಂಚಮ ಶನಿ ಕಾರಣ ಕೆಲವೊಮ್ಮೆ ವಿಚಾರಹೀನತೆಯ ಕಾರಣ ಪೂರ್ವಯೋಜಿತ ಕೆಲಸಗಳು ದಡ ಸೇರದು. ರಾಜಕೀಯ ವ್ಯಕ್ತಿಗಳಿಗೆ ಜನಾಪವಾದ ಸುತ್ತಿಕೊಳ್ಳುವುದು. ಅನಾರೋಗ್ಯ ಕಾರಣ ಔಷಧೋಪಚಾರಕ್ಕೆ ಹಣ ವ್ಯಯ. - ಶ್ರೀ ಶಮೀವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-1.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯು)
ಬೃಹಸ್ಪತಿ ಹಾಗೂ ಚಂದ್ರಮನ ಕೃಪೆಯಿಂದ ಉದ್ಯೋಗ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ನಿಂತುಹೋಗಿದ್ದ ಕೆಲಸಗಳು ಪುನರಾರಂಭವಾಗಲಿದೆ. ಸಾಲ ಮುಕ್ತರಾಗುವ ಸಾಧ್ಯತೆ ಇದೆ. ವಿಶ್ವಾಸ ಪಾತ್ರರ ಸಲಹೆ, ಮಾರ್ಗದರ್ಶನಗಳು ನಿಮ್ಮ ಭವಿಷ್ಯತ್ತಿಗೆ ಅನುಕೂಲಕರವೆನಿಸುವುದು. ನಿಮಗಾಗದವರು ನಿಮ್ಮ ವಿರುದ್ಧ ಗುಪ್ತ ಕಾರ್ಯಾಚರಣೆ ಮಾಡಬಹುದು. ಆಹಾರ-ಪಾನೀಯಗಳಲ್ಲಿ ಸಂಯಮವಿರಲಿ. - ಶ್ರೀ ನೃಸಿಂಹ ಸ್ತೋತ್ರ ಪಠಿಸಿ, ಶುಭಸಂಖ್ಯೆ-8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಚಂದ್ರಗ್ರಹದ ಕರುಣೆಯಿಂದ ಹಲವು ಮೂಲಗಳಿಂದ ಧನ ಸಂಚಯವಾದರೂ ಬರಿಗೈ ಆಗಲು ಕ್ಷಣ ಮಾತ್ರ. ಜೊತೆಗೆ ಮಾನಸಿಕ ಅಸ್ಥಿರತೆ ನಿವಾರಣೆಯಾಗದು. ರೈತಾಪಿ ಜನರಿಗೆ ತಮ್ಮ ಫಸಲಿಗೆ ಸೂಕ್ತ ಬೆಲೆ ದೊರೆತು ಖುಷಿ. ರಾಸಾಯನಿಕ ಗೊಬ್ಬರ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಹಾಗೂ ಧನಲಾಭವಾಗುವುದು. ತೃತೀಯ ಶನಿದೇವನಿಂದ ಕುಟುಂಬದಲ್ಲಿ ನೆಮ್ಮದಿ, ವೃತ್ತಿ ಲಾಭದಿಂದ ಸಂತೃಪ್ತಿ. -ಶ್ರೀಗುರುಚರಣ ನಮನ, ಶುಭಸಂಖ್ಯೆ-6.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆದಿಗೆ ನಿಮ್ಮ ಮಾತೃಶ್ರೀಯವರಿಂದ ನಿಮ್ಮ ಆಸೆ, ಆಕಾಂಕ್ಷೆಗಳು ಪೂರೈಕೆಯಾಗಲು ಚಂದ್ರಗ್ರಹದ ಕೃಪೆ ಇದೆ. ಜವಳಿ, ರೆಡಿಮೇಡ್ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಸುವರ್ಣ, ರಜತ ಪದಾರ್ಥಗಳ ಖರೀದಿ, ರಾಜಕೀಯ ರಂಗದವರು ತಮ್ಮ ವಿರೋಧಿಗಳ ವಿರುದ್ಧ ಮೇಲುಗೈ ಸಾಧಿಸುವರು. ಲೇವಾದೇವಿ ಸಂಸ್ಥೆಗಳಿಗೆ ಸರ್ಕಾರದಿಂದ ಸಂಕಷ್ಟಗಳು ಎದುರಾದೀತು. ವಾತ-ಕಫ ರೋಗ ಕಾಡಿಸುತ್ತದೆ. - ಶ್ರೀ ಅಷ್ಟಾಕ್ಷರಿ ಮಂತ್ರ ಪಠಿಸಿ, ಶುಭಸಂಖ್ಯೆ-4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸಪ್ತಾಹದ ಆರಂಭಕ್ಕೆ ನಿಮ್ಮ ಸಾಮಾಜಿಕ, ಆರ್ಥಿಕ ಜೀವನದಲ್ಲಿ ಎದುರಾಗುವ ಆತಂಕಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಅದೃಶವಾಗುವುದು. ಸಾಲಸೋಲಗಳಿಂದ ವಿಮುಕ್ತಿಯನ್ನು ಹೊಂದುವಿರಿ. ಹೊಸ ಸಂಸ್ಥೆಯ ಒಡೆತನ ನಿಮ್ಮದಾಗಲಿದೆ. ಗುರುಕೃಪೆಯಿಂದ ಆಸ್ತಿಪಾಸ್ತಿ ಹೊಂದುವ ಯೋಗವಿದೆ. ಉದ್ಯೋಗ ಅರಸುವವರಿಗೆ ಶುಭ ಸಂದೇಶ ಬರುವ ಸಾಧ್ಯತೆ ಇದೆ. ವಾಯು ಪ್ರಕೋಪ ಕಾಡಬಹುದು. - ಶ್ರೀ ಹನುಮಾನ್ ಚಾಲೀಸ ಪಠಿಸಿ, ಶುಭಸಂಖ್ಯೆ-9.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವ್ಯವಹಾರ ಕುಶಲತೆಯಿಂದ ಅಧಿಕ ಧನ ಸಂಪಾದನೆ ಆಗುವುದು. ಬಹು ನಿರೀಕ್ಷಿತ ಕೆಲಸಗಳು ಸುಖಾಂತ್ಯವನ್ನು ಹೊಂದುವುದು. ಹೊಸ ಮಿತ್ರರು, ವಾಹನ ಪ್ರಾಪ್ತಿ, ಸಹೋದರರೊಡನೆ ಭೇದಾಭಿಪ್ರಾಯ ಉಂಟಾಗುವುದು. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗವಾದೀತು. ರವಿನನ್ದನನಾದ ಶನಿದೇವನು ಅನಾವಶ್ಯಕ ಖರ್ಚುಗಳನ್ನು, ಆರೋಗ್ಯದಲ್ಲಿ ವ್ಯತ್ಯಯವನ್ನೂ ಉಂಟುಮಾಡಲಿದ್ದಾನೆ. - ಶ್ರೀ ಶಿರಡಿಸಾಯಿ ಪೂಜನ, ಶುಭಸಂಖ್ಯೆ-5.

ಕೊಡೆ ಅರಳುವ ಸಮಯ



ಕೊಡೆಗಳಿಗೆ ಸುಮಾರು 400 ವರ್ಷಗಳ ಇತಿಹಾಸವಿದೆ. ಆಸ್ಟ್ರೀಯಾ, ಈಜಿಪ್ಟ್, ಗ್ರೀಸ್, ಮತ್ತು ಚೀನಾ ದೇಶಗಳ ಇತಿಹಾಸಗಳಲ್ಲಿ ಕೊಡೆ ಎಂಬ ಕಲಾತ್ಮಕ ವಸ್ತುವಿನ ಉಲ್ಲೇಖವಿದೆ. ಇದನ್ನು ಮೊದಲು ಬಳಕೆ ಮಾಡಿದವರು ಚೀನಾದೇಶದವರು. ಇವರು ತಮ್ಮ ಪೇಪರ್ ಛತ್ರಿಗಳಿಗೆ ವ್ಯಾಕ್ಸ್ ಸವರಿ ಮಳೆಗಾಲದಲ್ಲಿ ಬಳಸುತ್ತಿದ್ದರು ಅಂಬ್ರೆಲ್ಲಾ ಅಂಗಡಿ ಪ್ರಾರಂಭವಾಗಿದ್ದು 1830ರಲ್ಲಿ ಲಂಡನ್ ಆಕ್ಸ್‌ಫರ್ಡ್ ಬಜಾರಿನಲ್ಲಿ ಇಂದಿಗೂ ಇದೆ. ವಿವಿಧ ಕಾಲಘಟ್ಟದಲ್ಲಿ ವಿವಿಧ ರೂಪ ತಾಳಿರುವ ಕೊಡೆ ಜನರ ಜೀವನ ಶೈಲಿಯಲ್ಲಿ ವಿಶೇಷ ಸ್ಥಾನಮಾನ ಪಡೆದಿದೆ.

ಎಂ.ಆರ್.ಮಂಜುನಾಥ್

ಮನೆಯ ಮೂಲೆಯಲ್ಲಿ ಮುದುರಿ ಮಲಗಿದ್ದ ಕೊಡೆಗಳು ಈಗ ಹೊರ ಬರುತ್ತಿವೆ. ಮಳೆ ಬರುವ ಸೂಚನೆ ನೀಡುತ್ತವೆ. ನನ್ನೇ ಮರೆತರೆ ಎಂದು ನೆನಪಿಸುತ್ತವೆ. ಹರಿದು ಹೋದ ಜಾಗದಲ್ಲಿ ತ್ಯಾಪೆ ಹಾಕಿಸು ಎಂದು ಸೂಚಿಸುತ್ತಿವೆ. ಮಳೆಗಾಲವಿರಲಿ ಅಥವಾ ಬೇಸಿಗೆ ಕಾಲವಿರಲಿ ಪ್ರತಿಯೊಬ್ಬರಿಗೂ ನೆನಪಾಗುವುದೇ ಕೊಡೆ. ಇದು ನಮಗೆ ಎಲ್ಲಾ ಕಾಲಕ್ಕೂ ರಕ್ಷಣೆ ನೀಡುವ ಜೊತೆಗಾರ. ದಿನವಿಡೀ ನೆನೆದು ಜಗಲಿಯಲ್ಲಿ ರಾತ್ರಿ ಪೂರ್ತಿ ಮೈಯೊಡ್ಡಿ ಬೆಚ್ಚಗಾಗುವ ತನಕ ಇಲ್ಲವೆ ಗೋಡೆಯ ಮೊಳೆಗೆ ನೇತು ಹಾಕಿಸಿಕೊಂಡು ಕುಳಿತೆ ಇರುತ್ತದೆ.

ಕೊಡೆಯಿಂದ ಮಳೆ ನಿಲ್ಲಿಸಲಾಗದು. ಆದರೆ ಸಣ್ಣಸಣ್ಣ ಮಳೆಯ ನಡುವೆ ನಿಲ್ಲುವಂತಹ ಧೈರ್ಯದ ಆತ್ಮವಿಶ್ವಾಸ ಬರುತ್ತದೆ ಅಲ್ಲವೇ? ಕೊಡೆಯು ಒಂದು ಆತ್ಮ ವಿಶ್ವಾಸವಿದ್ದಂತೆ, ಕೊಡೆಗಳು ಇಲ್ಲದಿದ್ದರೆ ಏನಾಗುತ್ತಿತ್ತು ಊಹಿಸಲು ಸಾಧ್ಯವಿಲ್ಲ. ನಮ್ಮ ಅವಶ್ಯಕತೆ ಮುಗಿದೊಡನೆ ಮೂಲೆಗುಂಪು ಮಾಡಿ ಬಿಡುತ್ತೇವೆ. ಆದರೆ ಕೊಡೆಯೊಂದಿಗೆ ನಮ್ಮ ನೆನಪುಗಳು, ಅದರ ಸಹಾಯವನ್ನು ಅಷ್ಟು ಸುಲಭದಲ್ಲಿ ಮರೆಯುವುದಿಲ್ಲ. ಕೊಡೆಯೊಂದಿಗೆ ನಮ್ಮ ಕನವರಿಕೆಗಳು ಜೀವಂತವಾಗಿರಿಸಿದೆ ಕೊಡೆಗಳು ಅಂದರೆ ಅರಳಿ ನಿಂತ ಹೂವಂತೆ ಮಳೆ ಬಿಸಿಲಿನಿಂದ ಕಾಪಾಡುವ ಆಪ್ತ ರಕ್ಷಕ ಕಾಲದೊಂದಿಗೆ ಬದಲಾಗುತ್ತಾ ಸರ್ವರನ್ನೂ ಸೆಳೆಯುತ್ತಾ ಎಲ್ಲರೊಳಗೆ, ತಾನು ಒಬ್ಬ ಸದಸ್ಯನಾಗಿರುತ್ತದೆ.

ಮಕ್ಕಳನ್ನು ಆಕರ್ಷಿಸುತ್ತಿರುವುದೇ ಗೊಂಬೆಗಳ ಕೊಡೆಗಳು, ಕೊಡೆಯ ಮೇಲಿನ ಕೋಡು ಗೊಂಬೆ ಜತೆಗೆ ಬಾಬಿ, ಸ್ಪೈಡರ್‌ಮನ್, ಪ್ರಾಣಿ ಪಕ್ಷಿಗಳ ಚಿತ್ತಾರ, ಸೇರಿದಂತೆ ವೈವಿಧ್ಯಮಯ ಕೊಡೆಗಳು ಗಮನ ಸೆಳೆಯುತ್ತ ಮಳೆಗಾಲಕ್ಕೆ ಕಳೆ ಕಟ್ಟಿವೆ. ಆದರೆ ಕಪ್ಪು ಕೊಡೆ ಮಾತ್ರ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ, ಮಳೆಯಲ್ಲಿ ನೆನೆಯದಿರಲು ಕೊಡೆಯಿದ್ದರೆ ಸಾಕು ಎಂಬ ಸ್ವಭಾವ ಕೆಲವರದ್ದು. ಕೆಲವರು ಇರುವ ಕೊಡೆಗಳನ್ನು ಸಣ್ಣ-ಪುಟ್ಟ ರಿಪೇರಿ ಮಾಡಿ ಸರಿಪಡಿಸಿಕೊಂಡರೆ ಇನ್ನೂ ಕೆಲವರು ಹೊಸ ಕೊಡೆಗಳನ್ನು ಕೊಳ್ಳಲು ಮಾರುಕಟ್ಟೆಯ ಕಡೆ ಮುಖ ಮಾಡುತ್ತಿದ್ದಾರೆ. ಮಳೆಯನ್ನು ಲೆಕ್ಕಿಸದೆ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ಬಣ್ಣ ಬಣ್ಣದ ಕೊಡೆಗಳು ಜನರನ್ನು ಆಕರ್ಷಿಸುತ್ತಿವೆ. ಕೇವಲ ಕೊಡೆಗಳಲ್ಲದೇ ರೇನ್ ಕೋಟ್, ಜರ್ಕಿನ್‌ಗಳು ಗ್ರಾಹಕರ ಬೇಡಿಕೆಗೆ ತಕ್ಕಂತೆ ವಿವಿಧ ಬಣ್ಣದಲ್ಲಿ ಮಾರಾಟವಾಗುತ್ತಿವೆ.

ಶಾಲಾ- ಕಾಲೇಜುಗಳು ಆರಂಭವಾಗಿದ್ದು ವಿದ್ಯಾರ್ಥಿಗಳು ಮಳೆಯ ರಕ್ಷಣೆ ಪಡೆಯಲು ಕೊಡೆ, ರೈನ್ ಕೋಟ್‌ಗಳನ್ನು ಖರೀದಿಸುತ್ತಿದ್ದಾರೆ. ಕಳೆದ ಬಾರಿಗಿಂತ ಈ ಬಾರಿ ದರದಲ್ಲಿ ಹೆಚ್ಚಿನ ವ್ಯತ್ಯಾಸವಾಗದೆ ಕೊಡೆಗಳು ಸಾಮಾನ್ಯವಾಗಿ 150ರೂಗಳಿಂದ 250ರವರೆಗೆ ಲಭ್ಯವಾಗುತ್ತಿವೆ. ಅದರಲ್ಲೂ ಮಡಚಿ ಬ್ಯಾಗಿನಲ್ಲಿ ಇಡಬಹುದಾದ ಹಾಗೂ ವಿವಿಧ ವಿನ್ಯಾಸವುಳ್ಳ ಛತ್ರಿಗಳಿಗೆ ಹೆಚ್ಚಿನ ಬೇಡಿಕೆ ಇದ್ದು 300ರೂಗಳಿಂದ 600ರೂಗಳವರೆಗೆ ಸಿಗುತ್ತಿದ್ದು ರೈನ್‌ಕೋಟ್‌ಗಳು ಕೂಡ ಹೆಚ್ಚಾಗಿ ಮಾರಾಟವಾಗುತ್ತಿವೆ.

ಆಷಾಢ ಮಾಸದ ಜೋರು ಮಳೆ ಗಾಳಿಗೆ ಕೊಡೆಯನ್ನು ಬಿಡಿಸಲಾಗದೆ, ಆಗಾಗ ಈಚೆ ಮಗುಚಿಕೊಳ್ಳುತ್ತ, ಕೆಲವೊಮ್ಮೆ ತಲೆ ಕೆಳಗಾಗುವ ಕೊಡೆಯ ಕಡ್ಡಿ ಮುರಿಯದಂತೆ ಜೋಪಾನ ಮಾಡುವಾಗಲೆಲ್ಲ ಮೂರ್ನಾಲ್ಕು ತಿಂಗಳ ಕೊಡೆಯೊಂದಿಗೆ ಬಾಂಧವ್ಯ ಗಟ್ಟಿಯಾಗುತ್ತಲೇ ಹೋಗುತ್ತದೆ.

ಮಳೆಗಾಲ ಎಂದ ಕೂಡಲೇ ತಕ್ಷಣ ನೆನಪಾಗುವುದು ಕೊಡೆ ರಿಪೇರಿಯ ಮೈಸೂರು ಕೆಸರೆಯ 80 ವರ್ಷದ ಸ್ವಾಮಿನಾಥನ್. ನೆನಪು ಮೈಸೂರಿನ ಗಾಂಧಿ ವೃತದ ಬಳಿ ಕೊಡೆ ರಿಪೇರಿ ಮಾಡುತ್ತ ಬದುಕಿನ ಬಂಡಿ ಸಾಗಿಸಿದ್ದರು. ನಮ್ಮ ತಂದೆ ಸುಬ್ಬಯ್ಯ ಅವರಿಂದ ಬಂದ ಮೂಲ ಕಸುಬು 7 ವರ್ಷದ ಹುಡುಗನಾಗಿದ್ದಾಗಿನಿಂದ ಇಂದಿನವರೆಗೆ ಕೊಡೆ ರಿಪೇರಿ ಮಾಡುತ್ತಿದ್ದೇನೆ. ಎಷ್ಟೋ ಕೊಡೆಗಳಿಗೆ ಮರು ಜೀವ ನೀಡಿದ್ದೇನೆ, ಎಷ್ಟೇ ಕಿತ್ತು ಹೋಗಿರುವ ಕೊಡೆಗಳನ್ನು ರಿಪೇರಿ ಮಾಡಿ ಕೊಟ್ಟಿದ್ದೇನೆ. ಕೊಡೆಯ ಬಟ್ಟೆ ಹರದಿರುವುದನ್ನು ತ್ಯಾಪೆ ಹಾಕಿ ಹೊಲಿದು ಕೊಟ್ಟಿದ್ದೇನೆ. ಹಿಂದಿನ ಕಾಲದಲ್ಲಿ ಒಂದು ಕೊಡೆ ವ್ಯಾಪಾರ ಮಾಡಲು ಕಷ್ಟದ ಸಮಯವಾಗಿತ್ತು. ಈಗ ದುಡ್ಡಿಗೆ ಬೆಲೆಯಿಲ್ಲ, ನಾನಾ ರೀತಿಯ ಕೊಡೆಗಳು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗಳಿಗೆ ಲಭ್ಯವಾಗುತ್ತಿವೆ. ನಾವು ಕೊಡೆಗಳನ್ನು ರಿಪೇರಿ ಮಾಡಿಕೊಟ್ಟರೆ ನಮಗೆ ಸಿಗುವುದು ಕೇವಲ ಎರಡು ರೂಪಾಯಿ ಹೆಚ್ಚು ಅಂದರೆ ಹತ್ತು ರೂ.ಗಳು ಮಾತ್ರ ಹೆಚ್ಚಿಗೆ ಹಣ ಕೇಳಿದರೆ ಹೊಸ ಕೊಡೆ ಮಾರುಕಟ್ಟೆಯಲ್ಲಿ ದೊರಕುತ್ತದೆ ಎಂದು ಕಸಕ್ಕೆ ಬಿಸಾಕಿ ಹೋಗುತ್ತಾರೆ. ಈಗ ಯಾರು ಕೂಡ ಹೆಚ್ಚಿಗೆ ರಿಪೇರಿ ಮಾಡಿಸಲು ಬರುವುದಿಲ್ಲ. ಹಿಂದಿನ ಕಾಲದವರು ಹಳೆಯ ಕೊಡೆಗಳನ್ನು ಪ್ರೀತಿಯಿಂದ ಜೋಪಾನ ಮಾಡಿದವರು ಮಾತ್ರ ಸಣ್ಣ ಪುಟ್ಟ ರಿಪೇರಿಗೆ ಬರುತ್ತಾರೆ. ಬೆಳಗಿನಿಂದ ಸಂಜೆವರೆಗೆ ಮಳೆ ಗಾಳಿಯಲ್ಲಿ ಕುಳಿತು ಕೆಲಸ ಮಾಡಿದರೆ ಒಪ್ಪತಿನ ಹೊಟ್ಟೆಯ ಚೀಲ ತುಂಬುವುದು ಕಷ್ಟ ನನಗೂ ವಯಸ್ಸಾಗಿದೆ ಎಂದು ನೊಂದುಕೊಳ್ಳುತ್ತಾರೆ. ನಮ್ಮ ಕಸುಬಿನವರು ಗಾಂಧಿ ವೃತ್ತದಲ್ಲಿ 150 ಕುಟುಂಬದವರಿದ್ದೇವು ಎಲ್ಲರೂ ಜೀವನ ಸಾಗುತ್ತಿತ್ತು ಈಗ ನಾನು ಮಾತ್ರ ಒಬ್ಬನೇ ಉಳಿದಿರುವುದು ಎಂದು ಬೇಸರದಿಂದ ತಿಳಿಸುತ್ತಾರೆ. ■

ಕೊಡಗಿನಲ್ಲಿ ಮುಂದುವರೆದ ವರುಣನ ರೌದ್ರಾವತಾರ

• ಗಾಳಿ ಮಳೆಗೆ ಜನರ ಜೀವನ ಅಸ್ತವ್ಯಸ್ತ • ಕಾಲಿಟ್ಟಲ್ಲಿ ನೀರೇ ನೀರು

ಮಡಿಕೇರಿ,ಜು.9– ಕೊಡಗು ಜಿಲ್ಲೆಯಾದ್ಯಂತ ಮತ್ತೆ ಮಳೆ ಬಿರುಸು ಪಡೆದಿದ್ದು, ಅಲ್ಲಲ್ಲಿ ಹಾನಿಯಾದ ಬಗ್ಗೆ ವರದಿಯಾಗಿದೆ. ಶನಿವಾರ ಜಿಲ್ಲೆಯಲ್ಲಿ ಗಾಳಿ ಸಹಿತ ಎಡೆಬಿಡದೆ ಮಳೆ ಸುರಿದಿದ್ದು, ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮ ವ್ಯಾಪ್ತಿಯಲ್ಲಿ 143 ಮಿ.ಮೀ ಮಳೆಯಾಗಿದೆ. ಮಳೆಯ ರಭಸಕ್ಕೆ ಈ ಹಿಂದೆ ಪ್ರಾಕೃತಿಕ ವಿಕೋಪ ಘಟಿಸಿದ ಗ್ರಾಮಗಳಲ್ಲಿ ಮತ್ತೆ ವಿಕೋಪದ ಆತಂಕ ಮನೆ ಮಾಡಿದೆ.

ನಗರದ [illegible] ಒಂದಕ್ಕೆ ಈ ಹಿಂದೆ ಕಟ್ಟಲಾಗಿದ್ದ ಬೃಹತ್ ಕಾಂಕ್ರೀಟ್ ತಡೆಗೋಡೆ ಬಿರುಕು ಬಿಟ್ಟಿದ್ದು, ಅಪಾಯಕಾರಿ ಸ್ಥಿತಿ ತಲುಪಿದೆ. ಈಗಾಗಲೇ ಸುರಿಯುತ್ತಿರುವ ಮಳೆಗೆ ತಡೆಗೋಡೆ ಅರ್ಧ [illegible] ವಾಲಿದ್ದು, ಈ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ.





ಘಟನಾ ಸ್ಥಳಕ್ಕೆ ನಗರಸಭಾ ಆಯುಕ್ತ ರಾಮ್‌ದಾಸ್, ವಾರ್ಡ್ ಸದಸ್ಯ ಕೆ.ಎಸ್. ರಮೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮಳೆಯ ನೀರು ಬಿರುಕಿಗೆ ನುಗ್ಗದಂತೆ ಪ್ಲಾಸ್ಟಿಕ್ ಹೊದಿಕೆ ಅಳವಡಿಸಲಾಗಿದೆ.

ಮಡಿಕೇರಿ ತಾಲೂಕಿನ 1ನೇ ಮೊಣ್ಣಂಗೇರಿ ಬಳಿ ಮನೆಯೊಂದರ ಗೋಡೆ ಕುಸಿದು ಬಿದ್ದು ಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ಕರ್ಣಂಗೇರಿ ಗ್ರಾಮದ ರಾಜು ಪೈಲ್ವ ಎಂಬವರ ಜಮೀನು ಎಂಬುವರ ಮನೆ ಮೇಲೆ ಬರೆ ಕುಸಿದು ಬಿದ್ದು, ಗೋಡೆಗೆ ಹಾನಿಯಾಗಿದೆ. ಪಾಣಿಮಾಡ ಕೆ.ಭಾಗದಲ್ಲಿರುವ ಸುಂದರಿ ಎಂಬುವರ ಮನೆಯ ಮೇಲೆ ಕೂಡ ಬರೆ ಕುಸಿದು ಬಿದ್ದು 2 ಮನೆಗಳಿಗೆ ಹಾನಿಯಾಗಿದೆ. ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಮ್ಮತ್ತಿ ಹೋಬಳಿಯ ಚೆನ್ನಯ್ಯನಕೋಟೆ ಬಳಿಯ ದೈಯದಹಡ್ಲು ಹಾಡಿಯಲ್ಲಿ ಮನೆಯೊಂದರ ಮೇಲೆ ಮರ ಮುರಿದು ಬಿದ್ದು ಪಿ.ಎಸ್.ನಂಜ ಎಂಬುವರ ಮನೆಗೆ ತೀವ್ರ ಹಾನಿಯಾಗಿದೆ. ಈ ಕುಟುಂಬಕ್ಕೆ ಆಹಾರದ ಕಿಟ್ ನೀಡಲಾಗಿದ್ದು, ಮರ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆಯ ಮೇಲೆ 3 ಅಡಿ ನೀರು ಹರಿಯುತ್ತಿದ್ದು, ವಾಹನ ಸಂಚಾರ ಕಳೆದ 5 ದಿನಗಳಿಂದ ಬಂದ್ ಆಗಿದೆ. ಜನರು ಪ್ರವಾಹ ನೀರಿನಲ್ಲಿ ರಸ್ತೆ ದಾಟುತ್ತಿದ್ದಾರೆ. ಭಾಗಮಂಡಲ–ತಲಕಾವೇರಿ ರಸ್ತೆಯಲ್ಲಿ ಮರ ಮುರಿದು ಬಿದ್ದು ಕೆಲ ಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು. ಭಾಗಮಂಡಲ ವಲಯ ಅರಣ್ಯ ಇಲಾಖೆ ಸಿಬ್ಬಂದಿಗಳು ಮರ ತೆರವು ಮಾಡಿ ರಸ್ತೆ ವ್ಯವಸ್ಥೆ ಸುಗಮಗೊಳಿಸಿದರು.

ಅಧಿಕಾರಿಗಳ ಭೇಟಿ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮ ಪಂಚಾಯತಿಯ ತೋರ ಗ್ರಾಮಕ್ಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು. 2019ರಲ್ಲಿ ಭೂ ಕುಸಿತದಿಂದ 10 ಮಂದಿ ಜೀವ ಕಳೆದುಕೊಂಡಿದ್ದ ಸ್ಥಳಕ್ಕೆ ಖುದ್ದು ತೆರಳಿ ಪರಿಶೀಲಿಸಿದರು. ಅಲ್ಲದೆ ಈ ಹಿಂದಿನ ಘಟನೆಯ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದರು.

ಇದೇ ವೇಳೆ ತೋರಾ ಗ್ರಾಮದ ಬೆಟ್ಟದ ತಪ್ಪಲಿನಲ್ಲಿ ವಾಸವಿರುವ 20 ಕುಟುಂಬಗಳ ನಿವಾಸಿಗಳೊಂದಿಗೆ ಚರ್ಚೆ ನಡೆಸಿದರಲ್ಲದೇ, ಜನರ ಯೋಗ–ಕ್ಷೇಮ ವಿಚಾರಿಸಿದರು. ತಕ್ಷಣವೇ ಬೆಟ್ಟ ತಪ್ಪಲಿನ ನಿವಾಸಿಗಳನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಕೆದಮುಳ್ಳೂರು ಗ್ರಾ.ಪಂ.ನ ಪುತ್ತಮಕ್ಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭಿಸಿರುವ ಕಾಳಜಿ ಕೇಂದ್ರಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಸಂತ್ರಸ್ತರು ಕಾಳಜಿ ಕೇಂದ್ರಗಳಿಗೆ ಆಗಮಿಸಿದಾಗ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಿದರು. ಜೊತೆಗೆ ಸಣ್ಣ–ಪುಟ್ಟ ದುರಸ್ತಿಗಳನ್ನು ಸರಿಪಡಿಸಿ, ಕೂಡಲೇ ಕಾಳಜಿ ಕೇಂದ್ರವನ್ನು ಕಾರ್ಯಾರಂಭ ಮಾಡುವಂತೆ ನಿರ್ದೇಶನ ನೀಡಿದರು.

ಈ ವೇಳೆ ಹಿರಿಯ ಭೂ ವಿಜ್ಞಾನಿ ಶ್ರೀನಿವಾಸ್, ವಿರಾಜಪೇಟೆ ತಾ.ಪಂ. ಇಒ ಅಪ್ಪಣ್ಣ, ಹೋಬಳಿ ನೋಡಲ್ ಅಧಿಕಾರಿ, ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಮತ್ತು ಇತರರು ಹಾಜರಿದ್ದರು.

ಆರೆಂಜ್ ಅಲರ್ಟ್

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ವರುಣ ಅಬ್ಬರಿಸುತ್ತಿರುವ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗಿನ 8.30ರವರೆಗೆ ಮತ್ತೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಗಾಳಿ ಸಹಿತ ಮಳೆ ಸುರಿಯುತ್ತಿರುವ ಕಾರಣ ವಿದ್ಯುತ್ ಕಂಬಗಳು, ತಂತಿಗಳಿಗೆ ಹಾನಿಯಾಗಿದ್ದು, ಮಳೆಯಿಂದಾಗಿ ದುರಸ್ತಿ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ. ಗಾಳಿಗೆ ಮರಗಳು ಮುರಿದು ಬೀಳುತ್ತಿದ್ದು, ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ.



ಸಿದ್ದಾಪುರ ಚೆನ್ನಯ್ಯನಕೋಟೆ ಸುತ್ತಮುತ್ತಲು ಸುರಿದ ಮಳೆಗೆ ಮನೆ ಮೇಲೆ ಮರ ಬಿದ್ದು ಮಹಿಳೆಯೋರ್ವರಿಗೆ ಗಂಭೀರ ಗಾಯವಾಗಿವೆ.

ನಿಧನ

ಅಪ್ಪುಣ್ಣಿ ನಾಯರ್



ವಿರಾಜಪೇಟೆ,ಜು.9– ತಾಲೂಕು ಕಾವೇರಿ ನಿವೃತ್ತ ನೌಕರ, ವಿರಾಜಪೇಟೆ ಪಟ್ಟಣದ ಗಾಂಧಿನಗರ ನಿವಾಸಿ ಅಪ್ಪುಣ್ಣಿ ನಾಯರ್ [86] ಎಂಬುವರು ಶನಿವಾರ ಮುಂಜಾನೆ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ನಾಲ್ವರು ಪುತ್ರರು ಮತ್ತು ಮೂವರು ಪುತ್ರಿಯರು ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಸಾಮಾಜಿಕ ಜಾಲತಾಣದಲ್ಲಿ ಕಾವೇರಿ ಮಾತೆಗೆ ಅಪಮಾನ: ಪ್ರತಾಪ್‌ಸಿಂಹರಿಂದ ದೂರು ದಾಖಲು

ಮಡಿಕೇರಿ, ಜು.9–ಕಾವೇರಿ ಮಾತೆ ಬಗ್ಗೆ ಅವಹೇಳನಕಾರಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಿರಾಜಪೇಟೆಯ ಮಹಮ್ಮದ್ ಇಸ್ಹಾಕ್ ಎಂಬಾತನ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಂಸದ ಪ್ರತಾಪ್ ಸಿಂಹ ಕೊಡಗು ಜಿಲ್ಲಾ ಎಸ್ಪಿಯವರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.



ಈ ರೀತಿ ಪೋಸ್ಟ್ ಮಾಡುವ ಮೂಲಕ ಕೊಡಗಿನ ಜನತೆಯ ಮನಸ್ಸಿಗೆ ನೋವುಂಟು ಮಾಡಲಾಗುತ್ತಿದೆ. ಹಾಗೂ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲಾಗುತ್ತಿದೆ. ಹೀಗಾಗಿ ಈ ಪೋಸ್ಟ್ ಮಾಡಿರುವಾತನನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ತಮ್ಮ ದೂರಿನಲ್ಲಿ ಕೋರಿದ್ದಾರೆ. ಈ ಸಂಬಂಧ ಮಡಿಕೇರಿ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧಾರ್ಮಿಕ ಭಾವನೆಗೆ ಧಕ್ಕೆ: ಕಾನೂನು ಕ್ರಮಕ್ಕೆ ಒತ್ತಾಯ

ಪೊನ್ನಂಪೇಟೆ, ಜು.9– ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಬರಹಗಳೊಂದಿಗೆ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಸಮಾಜದ್ರೋಹಿ ಕೃತ್ಯಗಳ ಸಂಚನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಅದಕ್ಕೆ ಕಡಿವಾಣ ಹಾಕಬೇಕು ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷರೂ ಆಗಿರುವ ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ಒತ್ತಾಯಿಸಿದ್ದಾರೆ.



ಈ ಕುರಿತು ಶನಿವಾರದಂದು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಾಮಾಜಿಕ ಜಾಲತಾಣದಲ್ಲಿ ಕೊಡಗಿನ ಆರಾಧ್ಯ ದೈವ ಕಾವೇರಿ ಮಾತೆ ಮತ್ತು ಕೊಡವ ಜನಾಂಗದ ವಿರುದ್ಧ ಅವಹೇಳನಕಾರಿಯಾಗಿ ಚಿತ್ರಿಸಲಾಗಿದೆ. ಇದು ಕೋಮು ಭಾವನೆಯನ್ನು ಕೆರಳಿಸಿ ಜಿಲ್ಲೆಯಲ್ಲಿ ಅಶಾಂತಿ ಸೃಷ್ಟಿಸುವ ಪೂರ್ವ ನಿಯೋಜಿತ ಷಡ್ಯಂತ್ರದ ಭಾಗವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರತಿಯೊಂದು ಧರ್ಮ, ಜಾತಿ ಮತ್ತು ಅದರ ಆಚಾರ–ವಿಚಾರ –ಸಂಸ್ಕೃತಿಗಳ ಬಗ್ಗೆ ಆಯಾ ಧರ್ಮದವರಿಗೆ ಗೌರವ ಮತ್ತು ನಂಬಿಕೆ ಇರುತ್ತದೆ. ಆದ್ದರಿಂದ ಯಾವುದೇ ಧರ್ಮದವರ ಭಾವನೆಗೆ ಧಕ್ಕೆ ತರುವುದು ಸರಿಯಲ್ಲ. ಇದನ್ನು ಸಹಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಅವರು, ಇದೀಗ ಈ ಕಿಡಿಗೇಡಿತನ ಕೃತ್ಯದಿಂದಾಗಿ ಜಿಲ್ಲೆಯ ಜನರ ಧಾರ್ಮಿಕ ಭಾವನೆಯನ್ನು ಕೆರಳಿಸಿದಂತಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶಾಂತಿ ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಹೊಣೆಯಾಗಿದೆ ಎಂದು ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ರೀತಿಯಾಗಿ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಕೊಡಗಿನಲ್ಲಿ ಅಶಾಂತಿ ಸೃಷ್ಟಿಸುವುದರ ಹಿಂದೆ ಯಾವ ಶಕ್ತಿಗಳು ಕೆಲಸ ಮಾಡುತ್ತಿದೆ ಎಂಬ ಸತ್ಯಾಂಶವನ್ನು ಬಯಲಿಗೆಳೆದು ಜನತೆಗೆ ನೈಜತೆ ತಿಳಿಸುವ ಜವಾಬ್ದಾರಿ ಪೊಲೀಸ್ ಇಲಾಖೆಯ ಮೇಲಿದೆ. ಆದ್ದರಿಂದ ಅವಹೇಳನಕಾರಿ ಬರಹ ಪ್ರಕಟಿಸಿದ ವ್ಯಕ್ತಿಯನ್ನು ಕೂಡಲೇ ಪೊಲೀಸ್ ಇಲಾಖೆ ಪತ್ತೆ ಹಚ್ಚಬೇಕು. ನಿಷ್ಪಕ್ಷಪಾತವಾದ ಸೂಕ್ತ ತನಿಖೆಯ ಮೂಲಕ ಸಂಚಿನ ಹಿಂದೆ ಭಾಗಿಯಾದ ವರೆಲ್ಲರನ್ನೂ ಪತ್ತೆಹಚ್ಚಿ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಎ.ಎಸ್. ಪೊನ್ನಣ್ಣ ಪೊಲೀಸ್ ಇಲಾಖೆಯನ್ನು ಆಗ್ರಹಿಸಿದ್ದಾರೆ.

ಇಂದು ಜಿಲ್ಲಾ ಪ್ರವಾಸ

ಮಂಡ್ಯ, ಜು.9– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ(ಕೋಟೆ) ಅವರು ಜು.10ರಂದು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಮಂಡ್ಯ ಪ್ರವಾಸಿ ಮಂದಿರದಲ್ಲಿ ಪೌರಕಾರ್ಮಿಕರ ಕುಂದು ಕೊರತೆಗಳ ಕುರಿತು ಪೌರಕಾರ್ಮಿಕರು ಮತ್ತು ಮುಖಂಡರೊಂದಿಗೆ ಸಭೆಯಲ್ಲಿ ಭಾಗವಹಿಸುವರು. ಸಂಜೆ 4 ಗಂಟೆಗೆ ಮಂಡ್ಯದಿಂದ ನಿರ್ಗಮಿಸಿ 6.30ಕ್ಕೆ ಕೇಂದ್ರ ಸ್ಥಾನಕ್ಕೆ ತಲುಪುವರು ಎಂದು ಪ್ರಕಟಣೆ ತಿಳಿಸಿದೆ.

ಟೋಲ್ ತಡೆಗೋಡೆಗೆ ಮಿನಿ ಬಸ್ ಡಿಕ್ಕಿ: 10 ಮಂದಿಗೆ ಗಾಯ

ಮಳವಳ್ಳಿ, ಜು.9(ಮೋಹನ್‌ರಾಜ್)– ಚಾಲಕನ ನಿಯಂತ್ರಣ ತಪ್ಪಿ ಮಿನಿಬಸ್‌ವೊಂದು ಟೋಲ್ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸೇರಿ 10 ಮಂದಿಗೆ ಗಾಯಗೊಂಡಿರುವ ಘಟನೆ ತಾಲೂಕಿನ ಹೊಸಹಳ್ಳಿ ಕ್ರಾಸ್ ಬಳಿ ನಡೆದಿದೆ.

ಬೆಂಗಳೂರಿನ ರತ್ನಮ್ಮ(61), ಆಕಾಶ್(22), ರತ್ನಮ್ಮ(30), ಲಕ್ಷ್ಮೀಬಾಯಿ(50), ಶಿವಮ್ಮ(51), ಸುಪಿತ್ರಾ(27), ಲಕ್ಷ್ಮೀ(47), ಲಕ್ಷ್ಮೀಬಾಯಿ(27), ಶೋಭಾಬಾಯ್(39), ಮಂಜುಳಾ(40) ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದ ಮಿನಿಬಸ್ ಚಾಲಕನ ನಿಯಂತ್ರಣ ತಪ್ಪಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ನಿರ್ಮಾಣ ಮಾಡಲು ಹಾಕಲಾಗಿದ್ದ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬಸ್‌ನಲ್ಲಿದ್ದ 10 ಮಂದಿ ಗಾಯಗೊಂಡಿದ್ದು ಎಲ್ಲರನ್ನು ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ಸೇರಿಸಲಾಗಿದೆ. ಸ್ಥಳಕ್ಕೆ ಬೆಳಕವಾಡಿ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ.

ಯುವಶಕ್ತಿಯೇ ಭಾರತದ ಭವಿಷ್ಯ: ಕ್ರಿಶನ್ ಪಾಲ್ ಗುರ್ಜರ್

ಮಂಡ್ಯ, ಜು.9(ಮೋಹನ್‌ರಾಜ್)– ದೇಶದ ಶೇ. 65ರಷ್ಟು ಜನಸಂಖ್ಯೆ ಯುವ ಶಕ್ತಿಯಿಂದ ಕೂಡಿದೆ. ಯುವ ಶಕ್ತಿ ದೇಶದ ಮುಂದಿನ ಭವಿಷ್ಯ. ಪ್ರತಿಯೊಬ್ಬರೂ ದೇಶದ ಅಭಿವೃದ್ಧಿಯಲ್ಲಿ ಕೈಜೋಡಿಸಿ ದೇಶವನ್ನು 25 ವರ್ಷಗಳಲ್ಲಿ ವಿಶ್ವ ಗುರು ಮಾಡಬೇಕು ಎಂದು ಕೇಂದ್ರದ ವಿದ್ಯುತ್ ಮತ್ತು ಭಾರಿ ಕೈಗಾರಿಕೆಗಳ ರಾಜ್ಯ ಖಾತೆ ಸಚಿವ ಕ್ರಿಶನ್ ಪಾಲ್ ಗುರ್ಜರ್ ತಿಳಿಸಿದರು.



ನಗರದ ಅಂಬೇಡ್ಕರ್ ಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಕೈಯಲ್ಲಿರುತ್ತದೆ. ಅವರು ದೇಶದ ಬೆಳವಣಿಗೆಯ ಬಗ್ಗೆ ಇಂದೇ ಚಿಂತಿಸಬೇಕು. ನಮ್ಮ ದೇಶ ವಿಶ್ವದಲ್ಲೇ ಸರ್ವಶ್ರೇಷ್ಠ ಹಾಗೂ ಶಕ್ತಿಶಾಲಿಯಾಗಿ ಹೊರಹೊಮ್ಮಬೇಕು. ಇದಕ್ಕಾಗಿ ಉತ್ತಮ ನಾಯಕರನ್ನು ಆಯ್ಕೆಮಾಡಬೇಕು. ಉತ್ತಮ ನಾಯಕ ತನ್ನ ದೇಶಕ್ಕೆ ಮೊದಲ ಸ್ಥಾನ ನೀಡಬೇಕು ಎಂದರು.

ಸುನೀಲ್ ಕುಮಾರ್ ಎಂಬ ವಿದ್ಯಾರ್ಥಿ ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು, ತಂದೆ–ತಾಯಿ ಕಳೆದುಕೊಂಡ ಪ್ರತಿಯೊಬ್ಬ ಮಗುವಿಗೂ ದೊರಕಬೇಕು ಎಂದಾಗ ಸಚಿವರು ಪ್ರತಿಕ್ರಿಯಿಸಿ ಕೋವಿಡ್‌ನಿಂದ ತಂದೆ ಹಾಗೂ ತಾಯಿ ಇಬ್ಬರನ್ನೂ ಕಳೆದುಕೊಂಡವರಿಗೆ ಸರ್ಕಾರದಿಂದ ವಿದ್ಯಾಭ್ಯಾಸದ ವ್ಯವಸ್ಥೆ ಮಾಡಲಾಗಿದೆ ಎಂದರು.

ನಂಜುಂಡ ಎಂಬ ವಿಕಲಚೇತನ ವಿದ್ಯಾರ್ಥಿ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಮಾಡುವ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಲಿಪಿ ಹೊಂದಿರುವ ಪಠ್ಯಪುಸ್ತಕವನ್ನು ನೀಡಬೇಕು ಎಂದು ಕೋರಿದಾಗ ಸಚಿವರು ಪ್ರತಿಕ್ರಿಯಿಸಿ ಈ ವಿಷಯವನ್ನು ಸಂಬಂಧಿಸಿದ ಸಚಿವರ ಗಮನಕ್ಕೆ ತರಲಾಗುವುದು ಎಂದರು.

ಮಾಜಿ ಸಚಿವ ಬಿ.ಸೋಮಶೇಖರ್, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ಸಫಾಯಿ ಕರ್ಮಚಾರಿಗಳ ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ, ಡಿಸಿ ಎಸ್.ಅಶ್ವತಿ, ಜಿಪಂ ಸಿಇಓ ದಿವ್ಯಪ್ರಭು ಇತರರಿದ್ದರು.

ಎತ್ತಿನಗಾಡಿಗೆ ಕಾರು ಡಿಕ್ಕಿ: ಎತ್ತು ಸಾವು

ಭಾರತೀನಗರ, ಜು.9(ಅಣ್ಣೂರು ಸತೀಶ್)– ರಸ್ತೆ ಬದಿಯಲ್ಲಿ ನಿಂತಿದ್ದ ಎತ್ತಿನ ಗಾಡಿಗೆ ಮಹೇಂದ್ರ ಕಾರು ಡಿಕ್ಕಿ ಹೊಡೆದ ಪರಿಣಾಮ ಎತ್ತು ಸ್ಥಳದಲ್ಲೇ ಮೃತಪಟ್ಟು ಕಾರು ಜಖಂಗೊಂಡಿರುವ ಘಟನೆ ಸಮೀಪದ ಹನುಮಂತನಗರದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಮಾದರಹಳ್ಳಿ ಗ್ರಾಮದ ನಿವಾಸಿ ಅಭಿಷೇಕ್(23) ಇವರಿಗೆ ಸೇರಿದ ಎತ್ತಿನಗಾಡಿಗೆ ಕಾರು ಡಿಕ್ಕಿಯಾಗಿ ಎತ್ತು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಅಭಿಷೇಕ ಗಾಯಗೊಂಡಿದ್ದಾರೆ.

ವಿವರ: ಅಭಿಷೇಕ್ ಗ್ರಾಮದಿಂದ ಎತ್ತಿನಗಾಡಿಯಲ್ಲಿ ಕಬ್ಬು ತುಂಬಿಕೊಂಡು ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಬರುತ್ತಿದ್ದಾಗ ಹನುಮಂತನಗರದ ಬಳಿ ಗಾಡಿಯ ಟೈರ್ ಪಂಚರ್ ಆಗಿದ್ದರಿಂದ ಎತ್ತಿನಗಾಡಿಯನ್ನು ರಸ್ತೆಬದಿಯಲ್ಲಿ ನಿಲ್ಲಿಸಲಾಗಿತ್ತು. ಈ ವೇಳೆ ಹನುಮಂತನಗರದ ಕಡೆಯಿಂದ ಬಂದ ಮಹೇಂದ್ರ ಕಾರು ಚಾಲಕನ ನಿಯಂತ್ರಣ ತಪ್ಪಿ ಎತ್ತಿನ ಗಾಡಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಎತ್ತು ಸ್ಥಳದಲ್ಲೇ ಮೃತಪಟ್ಟಿದ್ದು ಕಾರು ಸಂಪೂರ್ಣ ಜಖಂಗೊಂಡಿದೆ.



ಅಭಿಷೇಕ್‌ಗೆ ತೀವ್ರವಾಗಿ ಗಾಯಗೊಂಡು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ.

ಕಾರಿನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ರೈತರು ಮೃತಪಟ್ಟಿರುವ ಎತ್ತನ್ನು ರಸ್ತೆಯಲ್ಲೇ ಇಟ್ಟು ಪರಿಹಾರಕ್ಕಾಗಿ ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಕೆ.ಎಂ.ದೊಡ್ಡಿ ಪೊಲೀಸರು ಭೇಟಿನೀಡಿ ಪರಿಶೀಲಿಸಿ ಕಾರನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿದ್ಯುತ್ ತಗುಲಿ ಗಂಭೀರ ಸ್ಥಿತಿಯಲ್ಲಿದ್ದ ರಾಷ್ಟ್ರೀಯ ಫುಟ್‌ಬಾಲ್ ಆಟಗಾರ ವಿಶ್ವಾಸ್ ಸಾವು

ಮಂಡ್ಯ,ಜು.9(ಮೋಹನ್‌ರಾಜ್)– ನಿರ್ಮಾಣ ಹಂತದಲ್ಲಿದ್ದ ಮನೆಗೆ ನೀರು ಹಾಕಲು ಮೋಟರ್ ಸ್ವಿಚ್ ಹಾಕುವ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ರಾಷ್ಟ್ರೀಯ ಫುಟ್‌ಬಾಲ್ ಆಟಗಾರ ವಿಶ್ವಾಸ್ (21) ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಸಾವನ್ನಪ್ಪಿದ್ದಾರೆ.



ನಗರದ ಗುತ್ತಲು ಬಡಾವಣೆಯ ನರಸಿಂಹಮೂರ್ತಿ ಹಾಗೂ ಶ್ಯಾಮಲಾ ದಂಪತಿ ಪುತ್ರನಾದ ವಿಶ್ವಾಸ್ ಕಳೆದ ಕೆಲ ದಿನಗಳ ಹಿಂದೆ ಮನೆಯ ಬಳಿ ಮೋಟರ್ ಸ್ವಿಚ್ ಹಾಕುವ ವೇಳೆ ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ನಗರದ ಪಿ ಇ ಎ ಸ್ ಕಾಲೇಜಿನಲ್ಲಿ ಬಿಕಾಂ ವ್ಯಾಸಂಗ ಮಾಡುತ್ತಿದ್ದ ವಿಶ್ವಾಸ್, ಕ್ರೀಡೆಯಲ್ಲಿ ಆಸಕ್ತಿ ಹೊಂದಿ ರಾಷ್ಟ್ರೀಯ ಫುಟ್‌ಬಾಲ್ ತಂಡಕ್ಕೆ ಹಲವು ಬಾರಿ ಆಯ್ಕೆಯಾಗಿ ಆಡಿದ್ದರು.

ಆರ್ಥಿಕವಾಗಿ ತೀವ್ರ ಹಿಂದುಳಿದ ಕುಟುಂಬದವರಾಗಿದ್ದ ವಿಶ್ವಾಸ್ ಮನೆಯವರು ಚಿಕಿತ್ಸೆ ಕೊಡಿಸಲು ಸಾಧ್ಯವಾಗದೇ ಪರದಾಡುತ್ತಿದ್ದ ಸಂದರ್ಭದಲ್ಲಿ ಶೇ.80ರಷ್ಟು ದೇಹ ಹಾನಿಗೊಳಗಾಗಿ, ಕೋಮಾ ಸ್ಥಿತಿಯಲ್ಲಿದ್ದ ವಿಶ್ವಾಸ್ ಚಿಕಿತ್ಸೆಗಾಗಿ ನಿತ್ಯ ಸಾವಿರ ರೂ. ಹಣ ಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ವಿಶ್ವಾಸ್ ಸಹಪಾಠಿಗಳು ಹಾಗೂ ಸ್ನೇಹಿತರು ಚಿಕಿತ್ಸೆಗಾಗಿ ಆರ್ಥಿಕ ನೆರವು ಕೋರಿದಾಗ ಜತೆಗೆ ಈ ವಿಚಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ವಿಶ್ವಾಸ್ ಸಹೋದರಿಯ ಅಕೌಂಟಿಗೆ ಹತ್ತು ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹವಾಗಿ, ಚಿಕಿತ್ಸೆಗೆ ಸಮರ್ಪಕ ಹಣ ದೊರೆತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ವಿಶ್ವಾಸ್ ಮೃತಪಟ್ಟಿದ್ದಾರೆ.

ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

- ನಡುರಸ್ತೆಯಲ್ಲೇ ಐವರು ದುಷ್ಕರ್ಮಿಗಳಿಂದ ಕೃತ್ಯ
- ಹಣ, ಮೊಬೈಲ್ ಕಿತ್ತುಕೊಂಡು ಪರಾರಿ

ಮಂಡ್ಯ, ಜು.9(ಮೋಹನ್‌ರಾಜ್)– ಅಪರಿಚಿತ ವ್ಯಕ್ತಿಯ ಮೇಲೆ ಐವರ ದುಷ್ಕರ್ಮಿಗಳ ತಂಡವೊಂದು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಶನಿವಾರ ಮಧ್ಯಾಹ್ನ ನಗರದ ಹೊರವಲಯದ ಗ್ರೀನ್ ಪ್ಯಾಲೇಸ್ ಮುಂಭಾಗದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನಡೆದಿದೆ.

ಕುಣಿಗಲ್ ಮೂಲದ ವ್ಯಕ್ತಿಯೊಬ್ಬ ದಾರಿಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದನ್ನು ಕಂಡು ಸ್ಥಳೀಯರು ವಿಚಾರಿಸಿದಾಗ ಕುಣಿಗಲ್‌ನಿಂದ ಬಂದಿದ್ದೇನೆ. ಐವರ ಗುಂಪೊಂದು ನನ್ನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ನನ್ನ ಬಳಿ ಇದ್ದ ಹಣ ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ತಿಳಿಸಿದ್ದಾನೆ.

ಅಪರಿಚಿತ ವ್ಯಕ್ತಿಯ ವಿಳಾಸ ಪತ್ತೆಯಾಗಿಲ್ಲ. ದುಷ್ಕರ್ಮಿಗಳು ತಲೆ ಹಾಗೂ ಬೆನ್ನಿನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿರುವುದರಿಂದ ಆತ ಗಂಭೀರವಾಗಿ ಗಾಯಗೊಂಡಿದ್ದು, ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಸ್ಥಳೀಯರು ಕೂಡಲೇ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಪೊಲೀಸರು ಆತನನ್ನು ರಕ್ಷಿಸಿ ಮಂಡ್ಯ ಮಿಮ್ಸ್‌ಗೆ ದಾಖಲಿಸಿದ್ದಾರೆ.

ವ್ಯಕ್ತಿಯ ಹೇಳಿಕೆ ಆಧಾರದ ಮೇಲೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಹಳ್ಳಕ್ಕೆ ಉರುಳಿದ ಕೆಎಸ್‌ಆರ್‌ಟಿಸಿ ಬಸ್

ಮಂಡ್ಯ, ಜು.9(ಮೋಹನ್‌ರಾಜ್)– ಏಕಾಏಕಿ ಅಡ್ಡಬಂದ ಟ್ರಾಕ್ಟರ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ನಿಯಂತ್ರಣ ತಪ್ಪಿ ಜಮೀನಿಗೆ ನುಗ್ಗಿದ ಕೆಎಸ್‌ಆರ್‌ಟಿಸಿ ಬಸ್ ಅಪಘಾತಕ್ಕೀಡಾಗಿದ್ದು, 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾದ ಘಟನೆ ದುದ್ದ ಬಳಿ ಸಂಭವಿಸಿದೆ.

ಮೇಲುಕೋಟೆಯಿಂದ ಮಂಡ್ಯದ ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಎದುರು ಬಂದ ಟ್ರಾಕ್ಟರ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಪಕ್ಕದಲಿದ್ದ ಹಳ್ಳಕ್ಕೆ ಬಿದ್ದಿದೆ. ಇದರಿಂದ ಬಸ್‌ನಲ್ಲಿದ್ದ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಶಿವಹಳ್ಳಿ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಜೆಪಿ ನಾಯಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ; ದಯಾನಿಧಿ

ದಾಖಲೆ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಸವಾಲು



ಚಾಮರಾಜನಗರ, ಜು.9(ಎಸ್‌ಎಸ್)– ಚಾಮುಲ್ ಅಧ್ಯಕ್ಷರ ಆಯ್ಕೆ ಚುನಾವಣಾ ಸಂದರ್ಭದಲ್ಲಿ ನಾನು ಪಕ್ಷದ ನಾಯಕರು ಹಾಗೂ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಆದರೂ ಸಹ ನನ್ನನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಅವಾಚ್ಯ ಶಬ್ದಗಳಿಂದ ನಿಂದಿಸಿದ ದಾಖಲೆ ತೋರ್ಪಡಿಸಿದರೆ ನಾನು ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದು ತಾಪಂ ಮಾಜಿ ಉಪಾಧ್ಯಕ್ಷರೂ ಆದ ಬಿಜೆಪಿ ಉಚ್ಚಾಟಿತ ಪಿ.ಎಸ್.ದಯಾನಿಧಿ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಹಿರಿಯರು ಹಾಗೂ ಅನುಭವಿಗಳಾದ ಹೆಚ್.ಎಸ್.ಬಸವರಾಜು ಅವರಿಗೆ ಕೊನೆ ಕ್ಷಣದಲ್ಲಿ ಚಾಮುಲ್ ಅಧ್ಯಕ್ಷ ಸ್ಥಾನ ತಪ್ಪಿತು. ಇದರಿಂದ ಕೋಪಗೊಂಡು ಈ ಬಗ್ಗೆ ನಮ್ಮ ಪಕ್ಷದ ಜಿಲ್ಲಾ ನಾಯಕರನ್ನು ವಿರುದ್ಧನಿಯಲ್ಲಿ ಪ್ರಶ್ನಿಸಿದೆ. ಆದರೆ ಯಾರೊಬ್ಬರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಪಕ್ಷಕ್ಕೆ ನಿಷ್ಠೆಯಿಂದಲೇ ಇದ್ದೇನೆ ಎಂದೂ ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಆದರೂ ಸಹ ನನ್ನನ್ನು ಪಕ್ಷದಿಂದ 6 ವರ್ಷದವರೆಗೆ ಉಚ್ಚಾಟಿಸಲಾಗಿದೆ ಈ ಬಗ್ಗೆ ನಾನು ಪಕ್ಷನಾಯಕರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ. ನ್ಯಾಯ ಕೇಳುತ್ತೇನೆ ಎಂದರು.

ಈ ಹಿಂದೆ ಸರ್ಕಾರಿ ಕಾರ್ಯಕ್ರಮ ದಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಟೀಕಿಸುತ್ತಿದ್ದರು. ಈ ವೇಳೆ ತಾಪಂ ಉಪಾಧ್ಯಕ್ಷನಾಗಿ ಕಾರ್ಯಕ್ರಮದಲ್ಲಿ ಹಾಜರಿದ್ದ ನಾನು ಇದನ್ನು ಬಹಿರಂಗವಾಗಿ ವಿರೋಧಿಸಿದೆ. ಈ ವೇಳೆ ಪೊಲೀಸರು ನನ್ನನ್ನು ಬಂಧಿಸಿದರು. ಇದಕ್ಕಾಗಿ ನನ್ನನ್ನು ಪಕ್ಷದ ನಾಯಕರು ಸಹ ಅಭಿನಂದಿಸಿದ್ದರು. ನಾನು ಮೊದಲಿನಿಂದಲೂ ಪಕ್ಷಕ್ಕೆ ನಿಷ್ಠೆಯಿಂದ ಇದ್ದೇನೆ. ಎಲ್ಲಾ ಚುನಾವಣೆಗಳಲ್ಲೂ ಪಕ್ಷ ಅಧಿಕೃತ ಅಭ್ಯರ್ಥಿಗಳ ಪರ ಕೆಲಸ ಮಾಡಿದ್ದೇನೆ. ಆದರೂ ಸಹ ನನ್ನ ಮೇಲೆ ಪಕ್ಷದ ಜಿಲ್ಲಾ ಸಮಿತಿಯವರು ಇಲ್ಲಸಲ್ಲದ ಆರೋಪಗಳನ್ನು ಹೊರಿಸಿದ್ದಾರೆ. ಈ ಆರೋಪಗಳನ್ನು ಸಮಿತಿಯ ಪದಾಧಿಕಾರಿಗಳು ಸಾಕ್ಷ್ಯಾಧಾರ ಸಮೇತ ಸಾಬೀತುಪಡಿಸಬೇಕು. ಧರ್ಮಸ್ಥಳ ಅಥವಾ ಮಹದೇಶ್ವರಬೆಟ್ಟಕ್ಕೆ ಬರಲು ನಾನು ಸಿದ್ಧನಿದ್ದೇನೆಂದು ದಯಾನಿಧಿ ಸವಾಲು ಹಾಕಿದರು.

ಚಾಮುಲ್ ಚುನಾವಣೆಯಲ್ಲಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಪಕ್ಷದ ಅನೇಕ ಮುಖಂಡರು ಸ್ಪರ್ಧಿಸಿದ್ದರು. ಇವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಚಾಮುಲ್ ಅಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿಗೆ 8 ಮತಗಳು ಬರಬೇಕಿತ್ತು. ಆದರೆ 7 ಮತಗಳು ಬಂದಿವೆ. ಅಡ್ಡಮತದಾನದ ಬಗ್ಗೆ ಚರ್ಚಿಸಿಲ್ಲ. ಪಕ್ಷಕ್ಕೆ ವಿರೋಧವಾಗಿ ನಡೆದುಕೊಂಡವರ ವಿರುದ್ಧ ಕ್ರಮ ಕೈಗೊಳ್ಳುವಾಗ ಪಕ್ಷಕ್ಕೆ ನಿಷ್ಠೆ ತೋರಿದ ನನ್ನ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಇದರ ಬದಲು ನನ್ನನ್ನು ಕರೆದು ಚರ್ಚಿಸಬಹುದಿತ್ತು. ಇಲ್ಲವೇ ನೋಟಿಸ್ ನೀಡಬಹುದಿತ್ತು. ಆದರೆ ಏಕಾಏಕಿ ಉಚ್ಚಾಟಿಸಿರುವುದು ಸರಿಯಲ್ಲ. ಇದರಿಂದ ನನಗೆ ಬಹಳ ಬೇಸರ ಆಗಿದೆ. ಪಕ್ಷ ನಿಷ್ಠೆಯೇ ನನಗೆ ಮುಳುವಾಯತೇ? ಎಂಬ ಪ್ರಶ್ನೆ ಕಾಡುತ್ತಿದೆ ಎಂದು ಪಿ.ಎಸ್. ದಯಾನಿಧಿ ಕಣ್ಣೀರು ಹಾಕಿದರು.

ನನಗೆ ನ್ಯಾ ಸಿಗುವ ತನಕ ಹೋರಾಟ ನಡೆಸುತ್ತೇನೆ ನನ್ನಂತಹ ನಿಷ್ಠಾವಂತ ಕಾರ್ಯಕರ್ತರಿಗೆ ಅನ್ಯಾಯ ಆಗಬಾರದು. ನನ್ನನ್ನ ಪಕ್ಷದಿಂದ ಉಚ್ಚಾಟಿಸಲಾಗಿದೆಯೇ ಹೊರತು ಜನರು ಉಚ್ಚಾಟಿಸಿಲ್ಲ. ಜನರೊಂದಿಗೆ ಪಕ್ಷದಲ್ಲಿದ್ದುಕೊಂಡು ಹೋರಾಟ ನಡೆಸುತ್ತೇವೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಬಿಜೆಪಿ ಗ್ರಾಮಾಂತರ ಮಂಡಲ ಮಾಜಿ ಅಧ್ಯಕ್ಷ ಜಿ.ಪ್ರಶಾಂತ್, ಗ್ರಾಮ ಪಂಚಾಯಿತಿ ಸದಸ್ಯ ಪ್ರವೀಣ್, ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಮಲ್ಲೇಶ್, ಬಿಜೆಪಿ ಮೋರ್ಚಾ ಸದಸ್ಯರಾದ ಮಧು, ಮಹೇಶ್, ರವಿನಾಯಕ್ ಸುದ್ದಿಗೋಷ್ಠಿಯಲ್ಲಿದ್ದರು.

ಬಿಜೆಪಿ ಜಿಲ್ಲಾ ಸಮಿತಿ ವಿಸರ್ಜಿಸಿ...

ಚಾಮರಾಜನಗರ: ಬಿಜೆಪಿ ಜಿಲ್ಲಾ ಸಮಿತಿಯನ್ನು ವಿಸರ್ಜಿಸುವಂತೆ ಪಕ್ಷದ ಗ್ರಾಮಾಂತರ ಮಂಡಲ ಮಾಜಿ ಅಧ್ಯಕ್ಷ ಜಿ.ಪ್ರಶಾಂತ್ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ಜಿಲ್ಲಾಧ್ಯಕ್ಷರಾದ ಸುಂದರ್, ಹಾಸನ ಜಿಲ್ಲಾ ಉಸ್ತುವಾರಿ ಜಿ.ನಿಜಗುಣಾರಾಧ್ಯ, ಪ್ರಧಾನ ಕಾರ್ಯದರ್ಶಿ ನಾರಾಯಣ ಪ್ರಸಾದ್ ಅವರಿಂದ ಜಿಲ್ಲೆಯಲ್ಲಿ ಪಕ್ಷ ಹಾಳಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಪಕ್ಷದ ಜಿಲ್ಲಾ ಕಚೇರಿಯಲ್ಲಿ ಕಾರ್ಯಕ್ರಮಗಳನ್ನು ನಡೆಸದೇ ನಿಜಗುಣ ರೆಸಾರ್ಟ್‌ನಲ್ಲಿ ನಡೆಸಲಾಗುತ್ತದೆ. ಈ ಬಗ್ಗೆ ಪ್ರಶ್ನಿಸಿದವರನ್ನು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದು ಕ್ರಮ ಕೈಗೊಳ್ಳಲಾಗುತ್ತದೆ. ಹೀಗಾಗಿ ಜಿಲ್ಲಾ ಸಮಿತಿ ವಿಸರ್ಜಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು. ಇದಕ್ಕಾಗಿ ಪ್ರತಿಭಟನೆ ಮಾಡುವ ಉದ್ದೇಶವೂ ಸಹ ನಮ್ಮದಾಗಿದೆ ಎಂದು ಪ್ರಶಾಂತ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿವೃತ್ತ ಯೋಧನಿಗೆ ತವರಲ್ಲಿ ಅದ್ಧೂರಿ ಸ್ವಾಗತ

ಚಾಮರಾಜನಗರ, ಜು.9–ಭಾರತೀಯ ಸೇನೆಯಲ್ಲಿ 21 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ಮರಳಿದ ಬೇವಿನತಾಳಪುರದ ವೀರಯೋಧ ಬಿ.ಎಂ. ಮಲ್ಲೇಶ್ ಅವರಿಗೆ ನಗರದ ರೈಲ್ವೆ ನಿಲ್ದಾಣದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ ಯುವ ಘಟಕ ಹಾಗೂ ಬೇವಿನತಾಳಪುರ ಗ್ರಾಮಸ್ಥರು, ಅಭಿಮಾನಿಗಳು ಅದ್ದೂರಿಯಾಗಿ ಸ್ವಾಗತಿಸಿದರು.



ಸನ್ಮಾನ ಸ್ವೀಕರಿಸಿದ ಬಿ.ಎಂ.ಮಲ್ಲೇಶ್ ಮಾತನಾಡಿ, ಬಿಎಸ್‌ಎಫ್‌ನಲ್ಲಿ 21 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಜಮ್ಮು ಕಾಶ್ಮೀರದಲ್ಲಿ 7, ರಾಜಸ್ತಾನದಲ್ಲಿ 5, ತ್ರಿಪುರದಲ್ಲಿ 4, ವೆಸ್ಟ್ ಬೆಂಗಾಲ್‌ನಲ್ಲಿ 6 ವರ್ಷ ಒಟ್ಟು 21 ವರ್ಷಗಳ ಕಾಲ ದೇಶ ಸೇವೆ ಸಲ್ಲಿಸಿ, ನಿವೃತ್ತಿಯಾಗಿ ತವರಿಗೆ ಮರಳಿದ್ದೇನೆ. ತವರಿನ ಜನರ ಅಭಿಮಾನ ತುಂಬಾ ಖುಷಿ ತಂದಿದೆ. ಎಲ್ಲರೂ ದೇಶಾಭಿಮಾನ ಬೆಳಸಿಕೊಳ್ಳಬೇಕು ಎಂದರು. ನಂತರ ನಗರದ ರೈಲ್ವೆ ನಿಲ್ದಾಣದಿಂದ ಅಲಂಕೃತ ಮಹೀಂದ್ರ ಜೀಪ್‌ನಲ್ಲಿ ಬಿ.ಎಂ. ಮಲ್ಲೇಶ್ ಅವರನ್ನು ಮರವಣಿಗೆಯಲ್ಲಿ ಬೇವಿನತಾಳಪುರಕ್ಕೆ ಕರೆದೊಯ್ಯಲಾಯಿತು. ಈ ವೇಳೆ ಮಾಜಿ ಯೋಧ ಪಿ.ಮಹದೇವಸ್ವಾಮಿ ಸಾಥ್ ನೀಡಿದರು.

ಭಾರತೀಯ ವಿದ್ಯಾರ್ಥಿ ಸಂಘದ ಸಂಯೋಜಕ ಪರ್ವತ್ ರಾಜ್, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಯುವ ಘಟಕ ಅಧ್ಯಕ್ಷ ವಿ.ಗುರುಪ್ರಸಾದ್, ರಂಗಸ್ವಾಮಿ, ರಾಜೇಶ್, ಮಹೇಶ್, ಕರ್ನಾಟಕ ಸೇನೆ ಅಧ್ಯಕ್ಷ ಮಿಂಚು ನಾಗೇಂದ್ರ, ಟೌನ್ ಅಧ್ಯಕ್ಷ ಮಂಜುನಾಥ್, ರುದ್ರ, ಹೈಟೆಕ್ ಶಿವು, ಪುಣಜನೂರು ಗಿರೀಶ್, ಹರಿಪ್ರಸಾದ್, ಹೊಸೂರು ಮಹೇಶ್, ನಿತೀಶ್, ಶರತ್, ಪ್ರಜ್ವಲ್, ರವಿ, ಸುನೀಲ್, ಮಹದೇವಸ್ವಾಮಿ, ಚೇತನ, ರಾಜೇಶ್, ಮಹೇಶ್, ಕಾರ್ತಿಕ್ ಇತರರು ಈ ಸಂದರ್ಭದಲ್ಲಿದ್ದರು.

ಮೀಟರ್ ಬಡ್ಡಿ ಕಿರುಕುಳ; ಯುವಕ ಆತ್ಮಹತ್ಯೆ

ಗುಂಡ್ಲುಪೇಟೆ,ಜು.9–ಮೀಟರ್ ಬಡ್ಡಿ ಕಿರುಕುಳಕ್ಕೆ ಹೆದರಿ ಯುವಕ ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ.



ಪಟ್ಟಣದ ನಿವಾಸಿ ಕಾರ್ತಿಕ್(32) ನೇಣಿಗೆ ಶರಣಾದ ಯುವಕ. ಈತ ದಿನಸಿ ಅಂಗಡಿ ವ್ಯಾಪಾರ ಮಾಡಿಕೊಂಡಿದ್ದ ಕಾರ್ತಿಕ್ ಮೀಟರ್ ಬಡ್ಡಿದಾರರಿಂದ ಶೇ.15ರಷ್ಟು ಬಡ್ಡಿಗೆ ಸಾಲ ಪಡೆದಿದ್ದರು. ಸಾಲದ ಹಣಕ್ಕಿಂತಲೂ ದುಪ್ಪಟ್ಟು ಬಡ್ಡಿ ಏರಿ ಹಣ ಕೊಡುವಂತೆ ಶುಕ್ರವಾರ ರಾತ್ರಿ ಮೃತ ಕಾರ್ತಿಕ್ ಮನೆಯ ಮುಂದೆ ಸಾಲ ನೀಡಿದವರು ಗಲಾಟೆ ಮಾಡಿದ್ದಾರೆ ಎನ್ನಲಾಗಿದೆ. ಇದರಿಂದ ಮನನೊಂದ ಕಾರ್ತಿಕ್ ಪ್ರದೀಪ್, ರವಿ, ಸುಭಾಷ್, ನಂದಿ ಸೇರಿದಂತೆ 18 ಮಂದಿಯ ಹೆಸರನ್ನು ಪಟ್ಟಿ ಮಾಡಿ ಡೆತ್ ನೋಟ್ ಬರೆದಿಟ್ಟು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಡೆತ್ ನೋಟ್ ಹಾಗೂ ಮೃತನ ಸಹೋದರರ ದೂರಿನ ಮೇರೆಗೆ ಪ್ರದೀಪ್, ರವಿ, ಸುಭಾಷ್, ನಂದಿ ಎಂಬ ನಾಲ್ವರ ವಿರುದ್ಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರದೀಪ್ ಎಂಬಾತನನ್ನು ಪೊಲೀಸರು ಬಂಧಿಸಿದ್ದು, ತಲೆ ಮರೆಸಿಕೊಂಡಿರು ಉಳಿದ ಮೂವರ ಬಂಧನಕ್ಕೂ ಪೊಲೀಸರು ಬಲೆ ಬೀಸಿದ್ದಾರೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ವಾರಸುದಾರರಿಗೆ ದೇಹ ಹಸ್ತಾಂತರಿಸಲಾಯಿತು.

ತೆರಿಗೆ ವಸೂಲಾತಿ ಅಭಿಯಾನ

ಯಳಂದೂರು, ಜು.9(ವಿ.ನಾಗರಾಜು)–ಯಳಂದೂರು ಪಪಂ ವ್ಯಾಪ್ತಿಯಲ್ಲಿ ಜು.11ರಿಂದ ತೆರಿಗೆ ವಸೂಲಾತಿ, ಸ್ವಚ್ಛ ಜಾಗೃತಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜು.11ರಿಂದ ಆ.26ರವರೆಗೆ ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲೂ ಆಯಾ ಸದಸ್ಯರ ಅಧ್ಯಕ್ಷತೆಯಲ್ಲಿ ವಾರ್ಡ್ ಮಟ್ಟದ ತೆರಿಗೆ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು 2022–23ನೇ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆ, ನೀರಿನ ತೆರಿಗೆ ಹಾಗೂ ಉದ್ದಿಮೆ ಪರವಾನಗಿ ತೆರಿಗೆಯನ್ನು 2023ರ ಮಾ.31ರವರೆಗೆ ಸ್ವೀಕೃತಿ ತಂತ್ರಾಂಶದ ಮೂಲಕ (ಓಟಿಸಿ) ಪಡೆದು ನೇರವಾಗಿ ನಿಗದಿ ಪಡಿಸಿರುವ ಬ್ಯಾಂಕ್ ಮುಖಾಂತರ ನಗದು, ಡಿಡಿ, ಚೆಕ್, ಆನ್‌ಲೈನ್ ಇ–ಪಾವತಿ ಮೂಲಕ ಸಂದಾಯ ಮಾಡಿ ಆರ್ಥಿಕ ವರ್ಷದಲ್ಲಿ ಬಾಕಿ ಇರುವ ತೆರಿಗೆ ಪಾವತಿಸಲು ಕೋರಲಾಗಿದೆ. ಅಲ್ಲದೆ ಅಭಿಯಾನ ಹಿನ್ನೆಲೆಯಲ್ಲಿ ಪಪಂ ಸಿಬ್ಬಂದಿ ಆಯಾ ವಾರ್ಡ್‌ಗಳಲ್ಲಿ ಹಾಜರಿರಲಿದ್ದು, ಸಾರ್ವಜನಿಕರು ತೆರಿಗೆ ಪಾವತಿಸುವ ಸ್ಥಳದಲ್ಲಿಯೇ ಬ್ಯಾಂಕ್ ಚಲನ್ ಪಡೆದು ಸಂಬಂಧಪಟ್ಟ ಬ್ಯಾಂಕ್‌ಗೆ ತೆರಿಗೆ ಪಾವತಿಸುವಂತೆ ಪಪಂ ಅಧ್ಯಕ್ಷೆ ಆರ್.ಪ್ರಭಾವತಿ ರಾಜಶೇಖರ್, ಉಪಾಧ್ಯಕ್ಷ ಎಸ್.ಲಕ್ಷ್ಮಿ, ಮುಖ್ಯಾಧಿಕಾರಿ ಮಲ್ಲೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಕಾಮಗಾರಿ ಬಹುತೇಕ ಪೂರ್ಣ; 23 ಕೆರೆಗಳಿಗೆ ಶೀಘ್ರ ನೀರು

ಮೈಸೂರು,ಜು.9(ಪಿಎಂ)– ಇಲವಾಲ ಸಮೀಪ ಆನಂದೂರು ಗ್ರಾಮದ ಬಳಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೆತ್ತಿಕೊಂಡಿರುವ ಈರಪ್ಪನಕೊಪ್ಪಲು ಏತ ನೀರಾವರಿ ಯೋಜನೆ (50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ) ಮತ್ತು ಮೈದನಹಳ್ಳಿ ಏತ ನೀರಾವರಿ ಯೋಜನೆ (20 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ) ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ತಲುಪಿವೆ.

ಶನಿವಾರ ಸ್ಥಳಕ್ಕೆ ಭೇಟಿ ನೀಡಿದ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಪರಿಶೀಲನೆ ನಡೆಸಿದರು. ಎರಡೂ ಯೋಜನೆಗಳ ಸಂಬಂಧ ತಲಾ ಒಂದೊಂದು ಪಂಪ್‌ಹೌಸ್ ಕಂ ಜಾಕ್‌ವೆಲ್ ನಿರ್ಮಿಸಲಾಗಿದೆ (ಅಕ್ಕಪಕ್ಕದಲ್ಲಿವೆ). ಇಲ್ಲಿನ ಕೆಆರ್‌ಎಸ್ ಹಿನ್ನೀರಿನಿಂದ ಹಲವು ಕೆರೆಗಳಿಗೆ ನೀರುಣಿಸುವ ಯೋಜನೆ ಇದಾಗಿದೆ.

ಈರಪ್ಪನಕೊಪ್ಪಲು ಏತ ನೀರಾವರಿ ಯೋಜನೆಯಿಂದ ಕರಕನಹಳ್ಳಿ, ಕರಕನಹಳ್ಳಿ ಕಟ್ಟೆ, ಈರಪ್ಪನಕೊಪ್ಪಲು ಕೆರೆ, ನಾಗವಾಲ ಕೆರೆ, ಹುಯಿಲಾಳು ಕೆರೆ, ಹುಯಿಲಾಳು ಕಟ್ಟೆ, ಬೊಮ್ಮೆನಹಳ್ಳಿ ಕೆರೆ, ಸಾಹುಕಾರಹುಂಡಿ ಕೆರೆ ಮತ್ತು ಕಟ್ಟೆ, ಜೆಟ್ಟಿಹುಂಡಿ ಕೆರೆ, ಶಂಕಾರಪುರ ಹೊಸಹಳ್ಳಿ ಕೆರೆ, ದಾಸನಕೊಪ್ಪಲು ಕೆರೆ, ಮರಟಿಕ್ಯಾತನಹಳ್ಳಿ ಕೆರೆ, ಕೇರ್ಗಳ್ಳಿ ಕೆರೆ, ಅಜ್ಜನಹುಂಡಿ ಕೆರೆ ಮತ್ತು ಲಿಂಗಾಂಬುದಿ ಕೆರೆಗಳಿಗೆ ನೀರು ಹರಿಯಲಿದೆ. ಅಂತೆಯೇ ಮೈದನಹಳ್ಳಿ ಏತ ನೀರಾವರಿ ಯೋಜನೆಯಿಂದ ಮೈದನಹಳ್ಳಿ ಕೆರೆ, ಮೇಗಳಾಪುರ ಕೆರೆ, ಇಲವಾಲ ಕೆರೆ, ಆನಂದೂರು ಕಟ್ಟೆ, ಯಲಚನಹಳ್ಳಿ ಕೆರೆ, ಚಿಕ್ಕನಹಳ್ಳಿ ಕೆರೆ ಮತ್ತು ಕೊಳದಕೆರೆ ಕಟ್ಟೆಗೆ ನೀರು ಲಭ್ಯವಾಗಲಿದೆ.

ಜಿಲ್ಲಾ ರೆವಿನ್ಯೂ ಟ್ರಿಬ್ಯೂನಲ್ ಸ್ಥಾಪನೆಗೆ ಕರ್ನಾಟಕ ಪ್ರಜಾ ಪಾರ್ಟಿ ಆಗ್ರಹ

ಎಸಿ, ಡಿಸಿಗಳಿಗೆ ಭೂಮಿ ಸಂಬಂಧ ಇರುವ ಅಧಿಕಾರ ರದ್ದುಪಡಿಸಲು ಒತ್ತಾಯ



ಮೈಸೂರು,ಜು.9(ಎಂಟಿವೈ)– ಪಿಟಿಸಿಎಲ್, ಆರ್‌ಆರ್‌ಟಿ, ಹಿರಿಯ ನಾಗರಿಕ ಕಾನೂನು ಸೇರಿದಂತೆ ವಿವಿಧ ಕಾಯ್ದೆಗಳಿಗೆ ಸಂಬಂಧಿಸಿದ ರೆವಿನ್ಯೂ ಪ್ರಕರಣಗಳ ತೀರ್ಮಾನದ ಹಕ್ಕಿನ ಪ್ರಕರಣಗಳಿಗೆ ಎಸಿ, ಡಿಸಿಗಳಿಗೆ ನೀಡಿರುವ ಅಧಿಕಾರ ರದ್ದುಪಡಿಸಿ, ಜಿಲ್ಲಾ ರೆವಿನ್ಯೂ ಟ್ರಿಬ್ಯೂನಲ್ ಸ್ಥಾಪಿಸಬೇಕೆಂದು ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಆಗ್ರಹಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶೇ.75ರಷ್ಟು ಮಂದಿ ಕೃಷಿಕರಾಗಿದ್ದು, ಅವರೆಲ್ಲ ಒಂದಲ್ಲಾ ಒಂದು ಕಾರಣಕ್ಕಾಗಿ ಜಮೀನಿಗೆ ಸಂಬಂಧಿಸಿದ ರೆವಿನ್ಯೂ ದಾಖಲೆ ಸರಿಪಡಿಸಿಕೊಳ್ಳಲು ತಾಲೂಕು ಕಚೇರಿ, ಉಪ ವಿಭಾಗಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಗಳಲ್ಲಿ ಆರ್‌ಆರ್‌ಟಿ, ಎಲ್‌ಎನ್‌ಡಿ, ಹಿರಿಯ ನಾಗರಿಕರ ಕಾನೂನು, ಪಿಟಿಸಿಎಲ್ ಹಾಗೂ ಇನ್ನಿತರ ಕಾಯ್ದೆಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ. ಆದರೆ ಇಂತಹ ಪ್ರಕರಣ ದಾಖಲಿಸಿದವರಿಗೆ ಸೂಕ್ತ ನ್ಯಾಯ ದೊರಕುತ್ತಿಲ್ಲ. ಅಲ್ಲದೆ ಪ್ರಕರಣ ಬೇಗ ಇತ್ಯರ್ಥವಾಗುತ್ತಿಲ್ಲ. ಇದರಿಂದ ಸಾಕಷ್ಟು ಮಂದಿ ಯಾತನೆ ಅನುಭವಿಸುತ್ತಿದ್ದಾರೆ ಎಂದು ವಿಷಾದಿಸಿದರು. ಇಂತಹ ಕಾಯ್ದೆಗಳಿಗೆ ಸಂಬಂಧಿಸಿದ ಸಾವಿರಾರು ಪ್ರಕರಣಗಳು ಬಾಕಿ ಉಳಿದುಕೊಂಡಿದ್ದು, ಹಲವೆಡೆ ಭ್ರಷ್ಟಾಚಾರ ನಡೆಯುತ್ತಿರುವ ಆರೋಪವಿದೆ. ಜೊತೆಗೆ ಕಾಲ ವಿಳಂಬವೂ ಆಗುತ್ತಿದೆ. ಹೀಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಜಿಲ್ಲಾ ರೆವಿನ್ಯೂ ಟ್ರಿಬ್ಯೂನಲ್ ರಚಿಸಿ, ಹಿರಿಯ ಅನುಭವಿ ನ್ಯಾಯವಾದಿಗಳು, ಇಲ್ಲವೇ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ ಪದಾಧಿಕಾರಿಗಳಾದ ಎಸ್. ಪರಶುರಾಂ, ಎನ್. ಹರೀಶ್, ಎ.ಜಿ. ರಾಮಚಂದ್ರ, ತೇಜಸ್ವಿ ಪಾಟೀಲ್ ಇದ್ದರು.

ಸ್ನೇಹಿತೆಯ ತಂದೆಗೆ ಕೋವಿಡ್ ಚಿಕಿತ್ಸೆಗೆಂದು ಹಣ ಪಡೆದು ವಂಚನೆ

ಮೈಸೂರು, ಜು.9–ವಿದ್ಯಾರ್ಥಿಯೋರ್ವ ಸ್ನೇಹಿತೆಯ ತಂದೆಗೆ ಕೋವಿಡ್ ಸೋಂಕು ತಗುಲಿದ್ದು, ಚಿಕಿತ್ಸೆಗೆಂದು 5.39 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಖಾಸಗಿ ಕಾಲೇಜಿನಲ್ಲಿ ಎಂಸಿಎ ವ್ಯಾಸಂಗ ಮಾಡುತ್ತಿದ್ದ ರಾಮನಗರ ಮೂಲದ ಬಿ.ಲಕ್ಷ್ಮೀಧರ ಎಂಬಾತ ಮೈಸೂರಿನ ಮುರಳಿ ಕೃಷ್ಣ ಅಲ್ಲಪರ್ತಿ(31) ಎಂಬುವರಿಗೆ ವಂಚನೆ ಎಸಗಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿವರ: ಮುರಳಿ ಕೃಷ್ಣ ಅವರು ಲಲಿತ ಮಹಲ್ ನಗರದಲ್ಲಿರುವ ತುಷ್ಟಿ ಬಿಲ್ಡಿಂಗ್‌ನಲ್ಲಿ ವಾಸವಿದ್ದು, 2018ರಲ್ಲಿ ಇಲ್ಲಿನ ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಲಕ್ಷ್ಮೀಧರ ಸಹ ಅದೇ ಬಿಲ್ಡಿಂಗ್‌ನಲ್ಲಿ ವಾಸವಿದ್ದ. ಈ ಹಿನ್ನೆಲೆಯಲ್ಲಿ ಪರಿಚಯವಾಗಿದ್ದ ಆತ 2021ರ ಮೇ ತಿಂಗಳಿನಲ್ಲಿ ತನ್ನ ಸ್ನೇಹಿತೆ ಪ್ರಿಯಾ ಎಂಬಾಕೆಯ ತಂದೆ ಕೋವಿಡ್ ಸೋಂಕಿನಿಂದ ಬಳಲುತ್ತಿದ್ದು, ಚಿಕಿತ್ಸೆಗಾಗಿ ಹಣ ಸಾಲ ನೀಡುವಂತೆ ಕೇಳಿದ್ದ. ಆತ ನೀಡಿದ ಶ್ರೀನಿಧಿ ಕೆ.ಚಕ್ಲಿ ಎಂಬ ಹೆಸರಿನ ಗೂಗಲ್ ಪೇ ಮತ್ತು ಫೋನ್ ಪೇ ಅಕೌಂಟ್‌ಗೆ ಮುರಳಿ ಕೃಷ್ಣ ಅವರು 'ಹಂತ ಹಂತವಾಗಿ ಒಟ್ಟು 5,39,519 ರೂ.ಗಳನ್ನು ವರ್ಗಾವಣೆ ಮಾಡಿದ್ದರು. ಆದರೆ ನಿಗದಿತ ಸಮಯದಲ್ಲಿ ಹಣ ವಾಪಸ್ ನೀಡದ ಆತ, ತನ್ನ ಭೂಮಿ ಮಾರಾಟ ಮಾಡಿ 2021ರ ಜೂನ್ ಅಂತ್ಯದೊಳಗೆ ಹಣ ಕೊಡುವುದಾಗಿ ಹೇಳಿದ್ದ. ಆದರೂ ಹಣ ನೀಡದಿದ್ದಾಗ ಮುರಳಿ ಕೃಷ್ಣ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಠಾಣೆಗೆ ಹಾಜರಾದ ಆತ 3 ಕಂತುಗಳಲ್ಲಿ 2021ರ ಅಕ್ಟೋಬರ್ 3ರೊಳಗೆ ಹಣ ವಾಪಸ್ ನೀಡುವುದಾಗಿ ತಿಳಿಸಿದ್ದನಾದರೂ, ಹಣ ನೀಡದೆ ವಂಚಿಸಿದ್ದ. ಈ ಸಂಬಂಧ ಮುರಳಿ ಕೃಷ್ಣ ಮೈಸೂರಿನ 4ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ಆಲನಹಳ್ಳಿ ಠಾಣೆ ಪೊಲೀಸರು ಲಕ್ಷ್ಮೀಧರ್ ವಿರುದ್ಧ ಭಾರತೀಯ ದಂಡ ಸಂಹಿತೆ 406, 420, 465, 463ರಿಂದ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹಿಂದೂಗಳ ಹತ್ಯೆ ಖಂಡಿಸಿ ಪ್ರತಿಭಟನೆ



ಮೈಸೂರು,ಜು.9(ಪಿಎಂ)– ದೇಶದಲ್ಲಿ ನಡೆದಿರುವ ಹಿಂದೂಗಳ ಹತ್ಯೆ ಖಂಡಿಸಿ ಹಾಗೂ ಇಂತಹ ಪ್ರಕರಣಗಳ ಸಂಬಂಧ ಶೀಘ್ರ ನ್ಯಾಯಾಲಯದ ಮೂಲಕ ವಿಚಾರಣೆ ಪೂರ್ಣಗೊಳಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹಿಸಿ ಅಂತಾರಾಷ್ಟ್ರೀಯ ಹಿಂದೂ ಪರಿಷದ್ ರಾಷ್ಟ್ರೀಯ ಭಜರಂಗ ದಳದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ದೇಶದಲ್ಲಿ ಹಿಂದೂ ಧರ್ಮೀಯರನ್ನು ಗುರಿಯಾಗಿಸಿಕೊಂಡು ನಿರಂತರ ದೌರ್ಜನ್ಯ ನಡೆಯುತ್ತಿದೆ. ಹತ್ಯೆ ಮತ್ತು ಹಲ್ಲೆಗಳ ಮೂಲಕ ಹಿಂದೂ ಸಮುದಾಯ ಭಯಭೀತಿಯಲ್ಲಿ ಬದುಕುವಂತಹ ವಾತಾವರಣ ಸೃಷ್ಟಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದುಗಳ ಆಸ್ತಿಪಾಸ್ತಿ ಹಾಳು ಮಾಡುವ ಮೂಲಕ ನಿರಂತರ ದೌರ್ಜನ್ಯ ನಡೆಸಲಾಗುತ್ತಿದೆ. ಇದೇ ಶಕ್ತಿಗಳು ದೇಶದ ಭದ್ರತೆ ಮತ್ತು ಸುರಕ್ಷತೆಗೆ ಕಂಟಕವಾಗುತ್ತಿವೆ. ಇಂತಹ ಶಕ್ತಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಕೆ.ಲೋಕೇಶ್, ರಾಜ್ಯ ಸಂಚಾಲಕ ಶಂಭುನಾಥ್, ಮುಖಂಡರಾದ ಮನೋಹರ ರೆಡ್ಡಿ, ಶ್ರೀಕಾಂತ್ ಮತ್ತಿತರರು ಪ್ರತಿಭಟಂಯಲ್ಲಿ ಪಾಲ್ಗೊಂಡಿದ್ದರು.

ರೊಚ್ಚಿಗೆದ್ದ ಶ್ರೀಲಂಕಾ ಜನ: ಅಕ್ಷರಶಃ ಲಂಕಾ ದಹನ

● ಅಧ್ಯಕ್ಷರ ನಿವಾಸದಲ್ಲಿ ಜನರ ಅಟ್ಟಹಾಸ; ಅಧ್ಯಕ್ಷ ರಾಜಪಕ್ಸೆ ಪರಾರಿ ● ಪ್ರಧಾನಿ ವಿಕ್ರಮ ಸಿಂಘೆ ರಾಜೀನಾಮೆ; ಮನೆಗೆ ಬೆಂಕಿ






ಕೊಲಂಬೋ,ಜು.9–ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ತಾರಕಕ್ಕೇರಿದ್ದು, ತೀವ್ರ ಸಮಸ್ಯೆಗೆ ಸಿಲುಕಿರುವ ಜನರ ಆಕ್ರೋಶದ ಕಟ್ಟೆ ಒಡೆದಿದ್ದು, ರಾಷ್ಟ್ರದ ಅಧ್ಯಕ್ಷ ಗೋಟಾಬಯ ರಾಜಪಕ್ಷೆ ವಿರುದ್ಧ ಸಿಡಿದೆದ್ದಿದ್ದಾರೆ. ಅವರ ಅಧಿಕೃತ ನಿವಾಸಕ್ಕೆ ಸಾವಿರಾರು ಪ್ರತಿಭಟನಾಕಾರರು ನುಗ್ಗಿದ್ದು, ಅಧ್ಯಕ್ಷ ರಾಜಪಕ್ಷೆ ತಮ್ಮ ನಿವಾಸದಿಂದ ಪಲಾಯನಗೈದಿದ್ದಾರೆ. ಮತ್ತೊಂದೆಡೆ ಶ್ರೀಲಂಕಾ ಪ್ರಧಾನಿ ರನಿಲ್ ವಿಕ್ರಮ ಸಿಂಘೆ ರಾಜೀನಾಮೆ ನೀಡಿದ್ದಾರೆ.

ರಾಜಕೀಯ ಪರಿಸ್ಥಿತಿ ಹದಗೆಟ್ಟ ಹಿನ್ನೆಲೆಯಲ್ಲಿ ಸರ್ವಪಕ್ಷ ಸರ್ಕಾರಕ್ಕೆ ದಾರಿ ಮಾಡಿಕೊಡುವ ನಿಟ್ಟಿನಲ್ಲಿ ತಾವು ರಾಜೀನಾಮೆ ನೀಡಿರುವುದಾಗಿ ಅವರು ತಿಳಿಸಿದ್ದಾರೆ. ಇದಕ್ಕೂ ಮುನ್ನ ವಿಕ್ರಮ ಸಿಂಘೆ ರಾಜಕೀಯ ಬಿಕ್ಕಟ್ಟು ಪರಿಹಾರಕ್ಕಾಗಿ ಸರ್ವಪಕ್ಷ ಸಭೆ ಕರೆದಿದ್ದರು. ಆದರೆ ಈ ಸಭೆಯನ್ನು ಪ್ರತಿಪಕ್ಷ ಎಸ್‌ಜೆಬಿ ಬಹಿಷ್ಕರಿಸಿತು.

ಸಾವಿರಾರು ಪ್ರತಿಭಟನಾಕಾರರು ಅಧ್ಯಕ್ಷರ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕಲಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಅಧ್ಯಕ್ಷ ಗೋಟಾಬಯ ರಾಜಪಕ್ಷೆ ಹಾಗೂ ಕುಟುಂಬದವರನ್ನು ರಕ್ಷಣಾ ಇಲಾಖೆ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಮತ್ತು ಜಲ ಫಿರಂಗಿಗಳನ್ನು ಬಳಸಿದ್ದು, ಅಧ್ಯಕ್ಷರ ನಿವಾಸಕ್ಕೆ ಪ್ರತಿಭಟನಾಕಾರರು ಪ್ರವೇಶಿಸದಂತೆ ಗುಂಡು ಹಾರಿಸಿದ್ದಾರೆ. ಈ ವೇಳೆ ಕನಿಷ್ಠ 30 ಮಂದಿ ಗಾಯಗೊಂಡು ಕೊಲಂಬೋದ ರಾಷ್ಟ್ರೀಯ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ಮುರಿದು ಪ್ರತಿಭಟನಾಕಾರರು ಅಧ್ಯಕ್ಷರ



ರನಿಲ್ ವಿಕ್ರಮ ಸಿಂಘೆ



ಗೋಟಾಬಯ ರಾಜಪಕ್ಷೆ

ನಿವಾಸವನ್ನು ಪ್ರವೇಶಿಸಿದ್ದಾರೆ. ಶ್ರೀಲಂಕಾ ಅಧ್ಯಕ್ಷರ ನಿವಾಸಕ್ಕೆ ಪ್ರತಿಭಟನಾಕಾರರೊಂದಿಗೆ ಪ್ರವೇಶಿಸಿದ ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಸನತ್ ಜಯಸೂರ್ಯ, ವಿಫಲ ನಾಯಕರನ್ನು ಹೊರ ಹಾಕಲು ಈ ರೀತಿ ಒಂದು ದೇಶವೇ ಒಂದಾಗಿರುವುದನ್ನು ನಾನು ನೋಡಿಲ್ಲ. ಯಾವಾಗಲೂ ಶ್ರೀಲಂಕಾ ಜನರೊಂದಿಗೆ ನಾನಿರುತ್ತೇನೆ. ಶೀಘ್ರದಲ್ಲೇ ದೇಶದ ಜನತೆ ವಿಜಯೋತ್ಸವ ಆಚರಿಸುತ್ತಾರೆ ಎಂದ ಅವರು, ಯಾವುದೇ ಕಾರಣಕ್ಕೂ ಕಾನೂನು ಉಲ್ಲಂಘನೆಯಾಗದಂತೆ ಪ್ರತಿಭಟನೆ ಮುಂದುವರೆಯಬೇಕು ಎಂದು ಹೇಳಿದರು.

ಪ್ರತಿಭಟನಾ ಕಾವು ಏರುತ್ತಿದ್ದಂತೆಯೇ ಪೊಲೀಸರು ಕೊಲಂಬೋ ಸೇರಿದಂತೆ ಪಶ್ಚಿಮ ಪ್ರಾಂತ್ಯದ ಏಳು ವಲಯಗಳಲ್ಲಿ ಹೇರಿದ್ದ ಕರ್ಫ್ಯೂವನ್ನು ಹಿಂತೆಗೆದುಕೊಂಡರು. ಇದಕ್ಕೂ ಮುನ್ನ ಕರ್ಫ್ಯೂ ವಿಧಿಸಿದ್ದ ಪೊಲೀಸರ ವಿರುದ್ಧ ಶ್ರೀಲಂಕಾ ವಕೀಲರ ಸಂಘ ಕಿಡಿಕಾರಿತ್ತು. ಪೊಲೀಸರ ಕ್ರಮ ಮಾನವ ಹಕ್ಕುಗಳ ಉಲ್ಲಂಘನೆ ಎಂದು ಆರೋಪಿಸಿತ್ತು.

ಶ್ರೀಲಂಕಾ ತೀವ್ರ ಆರ್ಥಿಕ ದುಃಸ್ಥಿತಿಯನ್ನು ಎದುರಿಸುತ್ತಿದೆ. ವಿದೇಶಿ ವಿನಿಮಯದ ಕೊರತೆಯಿಂದ ಬಳಲುತ್ತಿದೆ. ಇಂಧನ ಮತ್ತು ಇತರ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಹಣ ಪಾವತಿಸಲು ಸಾಧ್ಯವಾಗದೇ ಸರ್ಕಾರ ಹೆಣಗಾಡುತ್ತಿದೆ. ಹೀಗಾಗಿ ನಾಗರಿಕರ ಮೂಲಭೂತ ಅಗತ್ಯಗಳನ್ನು ಪೂರೈಸಲು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಬದುಕು ತೀರಾ ದುಸ್ತರವಾಗಿರುವ ಕಾರಣ ಹಲವಾರು ನಾಗರಿಕರು ದೇಶದಿಂದ ವಲಸೆ ಹೋಗಲು ಪ್ರಯತ್ನಿಸುತ್ತಿದ್ದು, ಅಂತಹವರನ್ನು ರಕ್ಷಣಾ ಪಡೆ ಬಂಧಿಸಿದೆ. ಇಂತಹ ದುಃಸ್ಥಿತಿಯಲ್ಲಿ ಸಹನೆಯ ಕಟ್ಟೆ ಒಡೆದು ನಾಗರಿಕರು ಅಧ್ಯಕ್ಷ ಗೋಟಾಬಯ ರಾಜಪಕ್ಷೆ ರಾಜೀನಾಮೆಗೆ ಒತ್ತಾಯಿಸಿ ಅವರ ನಿವಾಸಕ್ಕೆ ನುಗ್ಗಿದ್ದಾರೆ. ಅವರ ಅಡುಗೆ ಮನೆಯಲ್ಲಿ ದಾಂಧಲೆ ನಡೆಸಿದ್ದಾರೆ. ಮಹಿಳೆಯೊಬ್ಬರು ಅಧ್ಯಕ್ಷರ ಕುರ್ಚಿಯಲ್ಲಿ ಕುಳಿತು ದರ್ಬಾರ್ ನಡೆಸಿದ್ದಾರೆ. ಅಧ್ಯಕ್ಷರ ಖಾಸಗಿ ಈಜುಕೊಳದಲ್ಲಿ ಜನ ಮನಸ್ಸೋ ಇಚ್ಛೆ ಈಜಿದ್ದಾರೆ. ಅಧ್ಯಕ್ಷರ ಬೆಡ್ ರೂಂನಲ್ಲಿ ಅಟ್ಟಹಾಸ ಮೆರೆದಿದ್ದಾರೆ. ಮತ್ತೊಂದೆಡೆ ಪ್ರಧಾನಿ ವಿಕ್ರಮ ಸಿಂಘೆ ಮನೆಗೆ ಬೆಂಕಿ ಹಚ್ಚಿದ್ದಾರೆ.

ನಾಳೆ ರಾಷ್ಟ್ರಮಟ್ಟದ ಸಮ್ಮೇಳನ

ಮೈಸೂರು: ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ 'ಬೋಧನೆ, ಕಲಿಕೆ ಮತ್ತು ಮೌಲ್ಯ ಮಾಪನ' ಕುರಿತು ಎರಡು ದಿನಗಳ ರಾಷ್ಟ್ರ ಮಟ್ಟದ ಆನ್‌ಲೈನ್ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ. ಜು.11 ರಂದು ಬೆಳಗ್ಗೆ 10.30ಕ್ಕೆ ಯುಜಿಸಿ ಮಾಜಿ ಅಧ್ಯಕ್ಷ ವೇದ್ ಪ್ರಕಾಶ್ ಉದ್ಘಾಟಿಸಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ. ವಿಜಯೇಂದ್ರಕುಮಾರ್ ಭಾಗವಹಿಸಲಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಸವಿತಾ ಸಮಾಜದ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಿದೆ. ಸಮಾಜದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಜು.19ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೊ. 9845636754, 9448245978

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರಿಗೆ ಹುಟ್ಟುಹಬ್ಬದ ಸಂಭ್ರಮ: ಹಲವರಿಂದ ಶುಭಾಶಯ





ಮೈಸೂರು,ಜು.9–ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರ ಹುಟ್ಟುಹಬ್ಬ ಆಚರಿಸಲಾಯಿತು.

ಶ್ರೀ ನಂಜುಂಡೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ, ತುಲಾಭಾರ ಹಾಗೂ 101 ಇಡುಗಾಯಿ ಒಡೆಯುವ ಮೂಲಕ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಕೆ.ಮಹದೇವ್, ಹೆಚ್.ಪಿ.ಮಂಜುನಾಥ್, ಕಾಂಗ್ರೆಸ್ ಮುಖಂಡ ಕೆಮರೀಗೌಡ, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ, ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ಪಾಲಿಕೆ ಸದಸ್ಯ ಎಸ್.ಬಿ.ಎಂ.ಮಂಜು, ಸಿ.ಜೆ.ದ್ವಾರಕೀಶ್, ಕೆ.ವಿ.ಮಲ್ಲೇಶ್ ಮತ್ತಿತರರು ಕೇಕ್ ಕತ್ತರಿಸಿ ಅಭಿನಂದಿಸಿದರು. ಬಳಿಕ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಪರಿಷತ್ ಸದಸ್ಯನಾದ ಬಳಿಕ ಮೊದಲ ಹುಟ್ಟುಹಬ್ಬ ಇದಾಗಿದೆ. ನಾನು ಹುಟ್ಟಿದ ದಿನಾಂಕ ನಿಖರವಾಗಿ ಗೊತ್ತಿಲ್ಲ. ಆದರೂ ಸ್ನೇಹಿತರೂ, ಹಿತೈಷಿಗಳೂ, ಕುಟುಂಬದವರೂ ಹುಟ್ಟುಹಬ್ಬ ಆಚರಿಸುತ್ತಿರುವುದು ಸಂತಸ ತಂದಿದೆ. ಎಲ್ಲರಿಗೂ ಧನ್ಯವಾದ ತಿಳಿಸಿದರು.

ಜು.29ರಿಂದ ಕೆಆರ್‌ಎಸ್ ಹಿನ್ನೀರಿನಲ್ಲಿ ಹಾಯಿದೋಣಿ ಪಂದ್ಯಾವಳಿ

ಮೈಸೂರು, ಜು.9(ಎಂಕೆ)– ಕೆ.ಆರ್.ಸಾಗರ ಅಣೆಕಟ್ಟೆ ಹಿನ್ನೀರಿನಲ್ಲಿ ಜು.29ರಿಂದ ಆ.4ರವರೆಗೆ 'ವೈಎಐ ಯೂತ್ ಚಾಂಪಿಯನ್ ಶಿಪ್–2022'(ಹಾಯಿದೋಣಿ ಪಂದ್ಯಾವಳಿ) ನಡೆಯಲಿದೆ.

ರಾಯಲ್ ಮೈಸೂರು ಸೇಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ) ವತಿಯಿಂದ ಹಾಯಿ ದೋಣಿ ಪಂದ್ಯಾವಳಿ ಆಯೋಜಿಸಲಾಗುತ್ತಿದ್ದು, ವಿವಿಧ ವಿಭಾಗಗಳಿಂದ 160 ಮಂದಿ ಸೇಲಿಂಗ್ ಪಟುಗಳು ಭಾಗವಹಿಸಲಿದ್ದಾರೆ. 'ಐಎಲ್‌ಸಿಎ 4/7', 'ಆರ್‌ಎಸ್–ಒನ್' 'ಆಪ್ಟಿಮಿಸ್ಟ್' ಹಾಗೂ 'ಆಪ್ಟಿಮಿಸ್ಟ್ ಗ್ರೀನ್ ಫ್ಲೀಟ್' ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ಸೇಲಿಂಗ್ ಪಟುಗಳು ಜು.21ರೊಳಗೆ ನೋಂದಣಿ ಮಾಡಿಕೊಳ್ಳಬೇಕಾಗಿದೆ.

ರಾಷ್ಟ್ರೀಯ ಜೂನಿಯರ್ ರ್‍ಯಾಂಕಿಂಗ್ ಹಾಯಿದೋಣಿ ಪಂದ್ಯಾವಳಿ ಇದಾಗಿದ್ದು, 16ರಿಂದ 20 ವರ್ಷದೊಳಗಿನ ಬಾಲಕರು ಹಾಗೂ ಬಾಲಕಿಯರು ಭಾಗವಹಿಸಬಹುದು. 'ವೈಎಐ ಯೂತ್ ಚಾಂಪಿಯನ್ ಶಿಪ್–2022'ನಲ್ಲಿ ವಿಜೇತರು ನಂತರ ಏಷ್ಯನ್ ಗೇಮ್ಸ್, ಯುರೋಪಿಯನ್ ಗೇಮ್ಸ್ ಹಾಗೂ ಒಲಿಂಪಿಕ್ಸ್‌ಗೂ ಅರ್ಹತೆ ಪಡೆಯಲಿದ್ದಾರೆ.



ನೂತನ ಕಚೇರಿ ಉದ್ಘಾಟನೆ...

ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ರಾಯಲ್ ಮೈಸೂರು ಸೇಲಿಂಗ್ ಕ್ಲಬ್(ಆರ್‌ಎಂಎಸ್‌ಸಿ)ನ ನೂತನ ಕಚೇರಿಯನ್ನು ಶನಿವಾರ ಉದ್ಘಾಟಿಸಲಾಯಿತು.

ಹೈಕೋರ್ಟ್ ನ್ಯಾಯಮೂರ್ತಿ ದೇವಿದಾಸ್ ಹಾಗೂ ಉದ್ಯಮಿ ಆರ್.ಗುರು ನೂತನ ಕಚೇರಿಯನ್ನು ಉದ್ಘಾಟಿಸಿದರು. ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ರಾಯಲ್ ಮೈಸೂರು ಸೇಲಿಂಗ್ ಕ್ಲಬ್ ಮುಖ್ಯಸ್ಥ ಕ್ಯಾಪ್ಟನ್ ಅರವಿಂದ ಶರ್ಮಾ, ಅಧ್ಯಕ್ಷ ಅಜಯ್ ಕುಮಾರ್, ಉಪಾಧ್ಯಕ್ಷ ಮಹೇಂದ್ರ ಪಟ್ವಾರಿ ಉಪಸ್ಥಿತರಿದ್ದರು.



ಕೆಆರ್‌ಎಸ್ ಹಿನ್ನೀರಿನಲ್ಲಿ 7 ದಿನಗಳ ಕಾಲ 'ವೈಎಐ ಯೂತ್ ಚಾಂಪಿಯನ್ ಶಿಪ್' ನಡೆಯಲಿದ್ದು, ಮೊದಲ ದಿನವಾದ ಜು.29 ರಂದು ನೋಂದಣಿ ಹಾಗೂ ಉದ್ಘಾಟನಾ ಸಮಾರಂಭ ನಡೆಯಲಿದೆ. ಜು.30ರಂದು ಪಂದ್ಯಾವಳಿಯ ರೂಪುರೇಷೆಯ ಕುರಿತು ಮಾಹಿತಿ ನೀಡಲಾಗುವುದು. ಜು.31 ರಿಂದ ಆ.3 ಸ್ಪರ್ಧೆಗಳು ನಡೆಯಲಿವೆ. ಅಂತಿಮ ದಿನವಾದ ಆ.4ರಂದು ಅಂತಿಮ ಹಂತದ ಸ್ಪರ್ಧೆಗಳು, ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ.

ಪೌರಕಾರ್ಮಿಕ ನಾಪತ್ತೆ

ಮೈಸೂರು, ಜು.9– ಪೌರಕಾರ್ಮಿಕ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಮಾರ್ (32) ಎಂಬಾತ ಜೂ.15ರ ಮಧ್ಯಾಹ್ನ ತಮ್ಮ ಸುಜುಕಿ ಆಕ್ಸೆಸ್ (ಕೆಎ–55ಡಬ್ಲ್ಯು–9369) ವಾಹನದೊಂದಿಗೆ ಮನೆಯಿಂದ ಹೋದವರು ಪುನಃ ಮನೆಗೆ ವಾಪಸ್ ಬಂದಿರುವುದಿಲ್ಲ ಎಂದು ಅವರ ತಾಯಿ ಜು.6 ರಂದು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ಕೇಂದ್ರ, ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ ಅಭಿವೃದ್ಧಿ ಮರೀಚಿಕೆ

● ಆಮ್ ಆದ್ಮಿ ಮುಖಂಡ ಮುಖ್ಯಮಂತ್ರಿ ಚಂದ್ರು ಟೀಕೆ ● ಬಿಜೆಪಿಯದ್ದು ಸರ್ವಾಧಿಕಾರದ ನೀತಿ ● ಧರ್ಮಾಧಾರಿತ ಆಡಳಿತ ಅಪಾಯಕಾರಿ

ಮೈಸೂರು,ಜು.9(ಎಸ್‌ಬಿಡಿ)–ಕೇಂದ್ರ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ ಸಾಕಷ್ಟು ಅಭಿವೃದ್ಧಿಯಾಗುತ್ತದೆ ಎನ್ನುವುದನ್ನು ಬಿಜೆಪಿ ಸುಳ್ಳು ಮಾಡಿದೆ ಎಂದು ಆಮ್ ಆದ್ಮಿ ಪಕ್ಷದ ಸಾರ್ವಜನಿಕ ಸಂಪರ್ಕ ವಿಭಾಗದ ಮುಖ್ಯಸ್ಥ ಮುಖ್ಯಮಂತ್ರಿ ಚಂದ್ರು ಹೇಳಿದರು.

ಮೈಸೂರಿನ ನಂಜರಾಜ್ ಬಹದ್ದೂರ್ ಛತ್ರದಲ್ಲಿ ಶನಿವಾರ ಆಯೋಜಿಸಿದ್ದ ಆಮ್ ಆದ್ಮಿ ಪಕ್ಷದ ಜಿಲ್ಲಾ ಕಾರ್ಯಕರ್ತರ ಸಮಾವೇಶ ಹಾಗೂ ಗ್ರಾಮ ಸಂಪರ್ಕ ಅಭಿಯಾನದಲ್ಲಿ ಮಾತನಾಡಿದ ಅವರು, ಕರ್ನಾಟದಲ್ಲಿ ಬಿಜೆಪಿ ಸರ್ಕಾರವಿದ್ದರೂ ಯಾವುದೇ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ ಎಂದು ಟೀಕಿಸಿದರು.

ಬಿಜೆಪಿ ಸರ್ಕಾರ ಅಭಿವೃದ್ಧಿ ಕಾರ್ಯಗಳ ಮರೆತು ಜನರ ಧಾರ್ಮಿಕ ಭಾವನೆ, ಆಚರಣೆಗಳನ್ನು ಮುನ್ನೆಲೆಗೆ ತಂದು ಧರ್ಮಾಧಾರಿತ ಆಡಳಿತ ನಡೆಸುವ ಪ್ರಯತ್ನ ನಡೆಸಿದೆ. ಸರ್ವಾಧಿಕಾರಿ ಧೋರಣೆ ಮತ್ತು ಅಹಂಕಾರದ ನೀತಿಗಳಿಂದ ಜನ ಸಾಮಾನ್ಯರ ನೆಮ್ಮದಿ ಹಾಳಾಗಿದೆ. ಹೇಳಿದ್ದೆಲ್ಲವನ್ನೂ ಸತ್ಯ ಎಂದು ನಂಬಬೇಕೆಂಬ ಹಿಟ್ಲರ್ ಮನಃಸ್ಥಿತಿ ಪ್ರದರ್ಶನವಾಗುತ್ತಿದೆ. ನಮ್ಮ ದೇಶ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿದ್ದರೂ ಆಹಾರ, ನೀರು, ರಸ್ತೆ, ಆರೋಗ್ಯ ಮತ್ತು ಶಿಕ್ಷಣದಂತಹ ಕನಿಷ್ಠ ಮೂಲ ಸೌಕರ್ಯಗಳಿಲ್ಲದೆ ಎಷ್ಟೋ ಜನ ಸಂಕಷ್ಟದಲ್ಲಿದ್ದಾರೆ. ರಾಜ್ಯದಲ್ಲಿ 10.46 ಲಕ್ಷ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎನ್ನುವುದನ್ನೂ ತಿಳಿದೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಶಿಕ್ಷಣ ಸಚಿವರೇ ಶೂ ಮತ್ತು ಸೈಕಲ್‌ಗಾಗಿ ಮಕ್ಕಳು ಶಾಲೆಗೆ ಬರುವುದಿಲ್ಲ ಎಂದು ಉಡಾಫೆ ತೋರಿದರೆ ಶಿಕ್ಷಣದ ಗತಿಯೇನು? ಎಂದು ಆತಂಕ ವ್ಯಕ್ತಪಡಿಸಿದರು.



ದೆಹಲಿಯಲ್ಲಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಸರ್ಕಾರ ಕಡಿಮೆ ಅವಧಿಯಲ್ಲೇ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿ ಮಾಡಿದೆ. ಖಾಸಗಿ ಶಾಲೆಗಳು ಹಂತಹಂತವಾಗಿ ಮುಚ್ಚುವಂತೆ ಅಲ್ಲಿನ ಸರ್ಕಾರಿ ಶಾಲಾ–ಕಾಲೇಜುಗಳ ಅಭಿವೃದ್ಧಿಯಾಗಿವೆ. ಸರ್ಕಾರಿ ಶಾಲೆಗಳಲ್ಲಿನ ವ್ಯವಸ್ಥೆಯನ್ನು ನೇರವಾಗಿ ಕಂಡು ಆಶ್ಚರ್ಯಗೊಂಡಿದ್ದೇನೆ. ಮೊಹಲ್ಲಾ ಕ್ಲಿನಿಕ್‌ಗಳ ಮೂಲಕ ಉಚಿತ ಆರೋಗ್ಯ ಹಾಗೂ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗಿದೆ. ಇದೆಲ್ಲಾ ದೆಹಲಿಯಲ್ಲಿ ಸಾಧ್ಯವಾಗಿರುವಾಗ ಲಕ್ಷ ಲಕ್ಷ ಕೋಟಿ ಬಜೆಟ್ ಹೊಂದಿರುವ ಕರ್ನಾಟಕದಲ್ಲಿ ಏಕೆ ಸಾಧ್ಯವಾಗುವುದಿಲ್ಲ?.

ಪಂಜಾಬ್ ರಾಜ್ಯದ ಜನರೂ ಬಿಜೆಪಿ ಮತ್ತು ಕಾಂಗ್ರೆಸ್ ತಿರಸ್ಕರಿಸಿ ಆಮ್ ಆದ್ಮಿ ಪಕ್ಷಕ್ಕೆ ಅಧಿಕಾರ ನೀಡಿದ್ದಾರೆ. ಆದರೆ ಜೆಸಿಬಿ ಪಕ್ಷಗಳು(ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ) ಅಧಿಕಾರ ಮತ್ತು ಭ್ರಷ್ಟಾಚಾರದಿಂದ ರಾಜ್ಯದ ಖಜಾನೆ ಬರಿದಾಗಿಸುತ್ತಿರುವುದು ವಿಷಾದನೀಯ ಎಂದರು.

ರೋಹಿತ್ ಚಕ್ರತೀರ್ಥ ಎಂಬ ಅನರ್ಹ ವ್ಯಕ್ತಿಗೆ ಪಠ್ಯ ಪರಿಷ್ಕರಣೆಯಂತಹ ಜವಾಬ್ದಾರಿ ನೀಡಿದ್ದು ದೊಡ್ಡ ತಪ್ಪು. ಪಠ್ಯದಲ್ಲಿ ಮಹಾನ್ ವ್ಯಕ್ತಿಗಳ ಮಾಹಿತಿಯನ್ನು ತಿರುಚಲಾಗಿದೆ. ಅಂಬೇಡ್ಕರ್ ಅವರ ಪಠ್ಯಭಾಗದಲ್ಲಿ ಸಂವಿಧಾನ ಶಿಲ್ಪಿ ಎಂಬ ಪದವನ್ನು ಕೈ ಬಿಟ್ಟಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಅವರು ಕೇಂದ್ರದ ಕಪಿಮುಷ್ಠಿಯಲ್ಲಿದ್ದಾರೆ. ರಾಜ್ಯದ ಹಿತದೃಷ್ಟಿಯಲ್ಲಿ ಸ್ವಂತವಾಗಿ ಯಾವುದೇ ನಿರ್ಧಾರ ಕೈಗೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಎಲ್ಲದಕ್ಕೂ ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಮತ್ತು ಯಡಿಯೂರಪ್ಪರ ಅಪ್ಪಣೆ ಪಡೆಯುವಂತಾಗಿದೆ ಎಂದು ವ್ಯಂಗ್ಯವಾಡಿದರು. ಕಾರ್ಯಕ್ರಮದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ, ಜಂಟಿ ಕಾರ್ಯದರ್ಶಿ ದರ್ಶನ್ ಜೈನ್, ಪಕ್ಷದ ಜಿಲ್ಲಾ ಅಧ್ಯಕ್ಷೆ ಮಾಳವಿಕ ಗುಬ್ಬಿವಾಣಿ, ಜಿಲ್ಲಾ ನಾಯಕಿ ಧರ್ಮಶ್ರೀ, ಜಿಲ್ಲಾ ಮಾಧ್ಯಮ ಸಂಯೋಜಕ ಜಿ.ಆರ್.ವಿದ್ಯಾರಣ್ಯ, ಅಬ್ದುಲ್ ರಜಾಕ್, ರಂಗಯ್ಯ, ಶಿವು, ರವಿಚಂದ್ರ, ಕಿರಣ್ ಕಲ್ಯಾಣಿ, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಕೇವಲ 2 ಅಡಿ ಬಾಕಿ

ಹೀಗಾಗಿ ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಕಳೆದ ನಾಲ್ಕು ದಿನದಿಂದಲೂ ನೀರಾವರಿ ಇಲಾಖೆ ಅಧಿಕಾರಿಗಳು ಸೂಚನೆ ನೀಡುತ್ತಲೇ ಇದ್ದಾರೆ. ಪ್ರವಾಹ ಪರಿಸ್ಥಿತಿ ಎದುರಿಸಲು ಕಂದಾಯ ಇಲಾಖೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಈ ಸಂಬಂಧ ಮಂಡ್ಯ ಜಿಲ್ಲಾಧಿಕಾರಿಗಳು ಸಭೆಗಳನ್ನು ನಡೆಸಿ ಸೂಕ್ತ ನಿರ್ದೇಶನ ನೀಡಿದ್ದಾರೆ. ಕಂದಾಯ ಇಲಾಖಾಧಿಕಾರಿಗಳು, ಗ್ರಾಮ ಪಂಚಾಯ್ತಿ ಪಿಡಿಓಗಳು ಯಾವುದೇ ಪರಿಸ್ಥಿತಿ ಎದುರಿಸಲು ದಿನದ 24 ಗಂಟೆ ಸನ್ನದ್ಧವಾಗಿರುವಂತೆ ಸೂಚಿಸಲಾಗಿದೆ. ನದಿ ಪಾತ್ರದ ಗ್ರಾಮಗಳಲ್ಲಿ ಗ್ರಾಮ ಪಂಚಾಯ್ತಿಗಳ ಮೂಲಕ ಎಚ್ಚರಿಕೆ ಸಂದೇಶಗಳನ್ನು ರವಾನಿಸಲಾಗಿದೆ. ಪೊಲೀಸ್ ಮತ್ತು ಅಗ್ನಿಶಾಮಕ ದಳ ಕೂಡ ಸನ್ನದ್ಧವಾಗಿದೆ. ಪ್ರವಾಹದಿಂದ ಅನಾಹುತ ಸಂಭವಿಸಿದರೆ ಬಳಸಲು ಅನುವಾಗುವಂತೆ ದೋಣಿಗಳನ್ನು ಹಾಗೂ ನುರಿತ ಈಜುಗಾರರನ್ನು ಸಜ್ಜುಗೊಳಿಸಲಾಗಿದೆ.

ತಾತ್ಕಾಲಿಕ ಬಂದ್

ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದ ಹಿನ್ನೆಲೆಯಲ್ಲಿ ಹಾಗೂ ಯಾವುದೇ ಸಂದರ್ಭದಲ್ಲೂ ಅಣೆಕಟ್ಟೆಯಿಂದ ಇನ್ನು ಅಧಿಕ ನೀರು ನದಿಗೆ ಬಿಡುವ ಸಾಧ್ಯತೆ ಇರುವುದರಿಂದ ಪ್ರವಾಸಿಗರ ಹಿತದೃಷ್ಟಿಯಿಂದ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸುವಂತೆ ಸೂಚನೆ ನೀಡಲಾಗಿದೆ. ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ವಿ.ಕರಿಕಾಳನ್ ಸೂಚನೆ ಮೇರೆಗೆ ಬೆಳಗಿನಿಂದಲೇ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ಎಲ್ಲಾ ದೋಣಿಗಳನ್ನು ಸುರಕ್ಷಿತ ಸ್ಥಳದಲ್ಲಿ ಕಟ್ಟಿ ಹಾಕಲಾಗಿದ್ದು, ಮಳೆ ಹಾಗೂ ನದಿಯಲ್ಲಿ ನೀರಿನ ಪ್ರಮಾಣ ಕುಗ್ಗುವವರೆಗೂ ದೋಣಿಯಾನ ಆರಂಭಿಸದಂತೆ ಸೂಚನೆ ನೀಡಲಾಗಿದೆ. ಆದರೆ ರಂಗನತಿಟ್ಟು ಉದ್ಯಾನವನಕ್ಕೆ ಭೇಟಿ ನೀಡಬಹುದಾಗಿದೆ. ಬ್ಯಾಟರಿ ಚಾಲಿತ ವಾಹನದಲ್ಲಿ ಪಕ್ಷಿಧಾಮವನ್ನು ಪ್ರದಕ್ಷಿಣೆ ಹಾಕಬಹುದಾಗಿದೆ. ಅಣೆಕಟ್ಟೆಯಿಂದ 60 ಸಾವಿರ ಕ್ಯೂಸೆಕ್‌ಗಿಂತ ಹೆಚ್ಚಿನ ಪ್ರಮಾಣದ ನೀರು ನದಿಗೆ ಬಿಟ್ಟರೆ ಮಾತ್ರ, ಪಕ್ಷಿಧಾಮಕ್ಕೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗುತ್ತದೆ.

ಹೈ ಅಲಾರ್ಟ್‌ಗೆ ಸೂಚನೆ: ರಂಗನತಿಟ್ಟು ಪಕ್ಷಿಧಾಮದ ಬಳಿ ನದಿಯಲ್ಲಿ ನೀರಿನ ಸ್ಥಿತಿಗತಿ ಪರಿಶೀಲಿಸುವಂತೆ ಆರ್‌ಎಫ್‌ಓ ಸಂತೋಷ್ ಹೂಗಾರ್, ಡಿಆರ್‌ಎಫ್‌ಓ ಎಂ.ಪುಟ್ಟಮಾದೇಗೌಡ ಸೇರಿದಂತೆ ಪಕ್ಷಿಧಾಮದ ಸಿಬ್ಬಂದಿ ಸೂಚನೆ ನೀಡಲಾಗಿದೆ. ಯಾವುದೇ ಕಾರಣಕ್ಕೂ ಪ್ರವಾಸಿಗರು ನದಿ ದಡದ ಬಳಿ ಹೋಗದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ದಿನದ 24 ಗಂಟೆಯೂ ನದಿಯಲ್ಲಿ ಹರಿಯುವ ನೀರಿನ ಪ್ರಮಾಣದ ಮೇಲೆ ಕಣ್ಣಿಟ್ಟಿರುವಂತೆ ಸೂಚನೆ ನೀಡಲಾಗಿದೆ.

ಕನ್ನ ಹಾಕುತ್ತಾರೆ ಹುಷಾರ್...

ಅವರ ಖಾತೆಯಿಂದ 4.40 ಲಕ್ಷ ರೂ. ಕಡಿತಗೊಂಡಿದೆ. ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ಯಾದವಗಿರಿ ನಿವಾಸಿ ವತ್ಸಲ್ ಚಾರಿ (80) ಎಂಬುವರ ಮೊಬೈಲ್‌ಗೆ ವಿದ್ಯುತ್ ಬಿಲ್ ಅಪ್ ಡೇಟ್ ಮಾಡಬೇಕು. ಇಲ್ಲದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ ಎಂದು ಸಂದೇಶ ಬಂದಿತ್ತು. ನಂತರ ಅವರ ವಾಟ್ಸಾಪ್‌ಗೆ ಲಿಂಕ್ ವೊಂದನ್ನು ಕಳುಹಿಸಿದ್ದು, ಲಿಂಕ್ ಮೇಲೆ ಕ್ಲಿಕ್ ಮಾಡುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆ ಯಿಂದ 2,74, 920 ರೂ. ಕಡಿತಗೊಂಡಿದೆ.

ವೈದ್ಯರಿಗೆ ವಂಚನೆ: ಮೈಸೂರಿನ ಬನ್ನೂರು ರಸ್ತೆಯಲ್ಲಿ ವಾಸವಿರುವ ವೈದ್ಯ ಡಾ. ಜಿ.ರಾಜ್‌ಕ'ುಮಾರ್ ಎಂಬುವರಿಗೆ ಕ್ರೆಡಿಟ್ ಬಸ್ ಲೋನ್ ಆ್ಯಪ್‌ನಿಂದ ವಾಟ್ಸಾಪ್ ಮೂಲಕ ಕರೆ ಬಂದಿದ್ದು, ನೀವು ಲೋನ್ ತೆಗೆದುಕೊಂಡು ಮರುಪಾವತಿ ಮಾಡಿಲ್ಲ ಎಂದು ತೊಂದರೆ ಕೊಡಲಾಗುತ್ತಿತ್ತು. ನಂತರ ಅವರ ಫೇಸ್‌ಬುಕ್ ಮತ್ತು ವಾಟ್ಸಾಪ್ ಖಾತೆಗಳನ್ನು ಹ್ಯಾಕ್ ಮಾಡಿ ಅದರಲ್ಲಿದ್ದ ಫೋಟೋ ಗಳನ್ನು ಡೌನ್‌ಲೋಡ್ ಮಾಡಿಕೊಂಡು, ಎಡಿಟ್ ಮಾಡಿ ಅವರ ಕಾಂಟಾಕ್ಟ್ ಲಿಸ್ಟ್‌ನಲ್ಲಿರುವವರಿಗೆ ಕಳುಹಿಸುವ ಮೂಲಕ ಬ್ಲಾಕ್‌ಮೇಲ್ ಮಾಡಿ 98 ಸಾವಿರ ರೂ.ಗಳನ್ನು ಪಡೆದು ವಂಚಿಸ ಲಾಗಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಹೆದ್ದಾರಿಯಲ್ಲಿ ಸುಲಿಗೆ

ಕೇಳಿದ್ದಾನೆ. ತನ್ನ ಕಾರು ಯಾರಿಗೂ ಗುದ್ದಿಲ್ಲ ಎಂದು ಚಂದ್ರಶೇಖರ್ ಹೇಳಿದಾಗ ಚಾಕು ತೋರಿಸಿ, ಹಣ ನೀಡಬೇಕು, ಇಲ್ಲದಿದ್ದರೆ ತಿವಿಯುವುದಾಗಿ ಬೆದರಿಸಿದ್ದಾನೆ. ಆಗ ಚಂದ್ರಶೇಖರ್ ತನ್ನ ಬಳಿ 5 ಸಾವಿರ ರೂ. ಮಾತ್ರ ಇದೆ ಎಂದು ಕೊಟ್ಟಿದ್ದಾರೆ. ಆದರೆ ಪಕ್ಕದಲ್ಲೇ ಎಟಿಎಂ ಇದೆ. ಡ್ರಾ ಮಾಡಿಕೊಡಿ ಎಂದು ಆತ ಒತ್ತಾಯಿಸಿದ್ದಾನೆ. ತನ್ನ ಬಳಿ ಎಟಿಎಂ ಕಾರ್ಡ್ ಇಲ್ಲ ಎಂದು ಹೇಳಿದಾಗ ಅವರನ್ನು ಕಾರಿನಿಂದ ಇಳಿಸಿ ಮೈಸೂರು-ಬೆಂಗಳೂರು ರಸ್ತೆ ಪಕ್ಕದಲ್ಲಿರುವ ಬೀಡಾ ಅಂಗಡಿ ಬಳಿ ಕರೆದೊಯ್ದು, ಸುತ್ತಲೂ ನಮ್ಮ ಕಡೆಯವರಿದ್ದಾರೆ. ಹಣ ಕೊಡದಿದ್ದರೆ ಮುಗಿಸಿ ಬಿಡುತ್ತೇನೆ ಎಂದು ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಬೇರೆ ದಾರಿ ಕಾಣದ ಚಂದ್ರಶೇಖರ್ ತನ್ನ ಸ್ನೇಹಿತ ಸುರೇಶ್ ಅವರ ಪತ್ನಿಯ ಅಕೌಂಟ್ ಮತ್ತು ಸಹೋದರ ಮೋಹನ್ ರಾಜ್ ಅವರ ಅಕೌಂಟ್‌ನಿಂದ ತನ್ನ ಗೂಗಲ್ ಪೇಗೆ ಹಣ ವರ್ಗಾವಣೆ ಮಾಡಿಸಿಕೊಂಡು ಸುಲಿಗೆಕೋರ ತಿಳಿಸಿದ ಮೊಬೈಲ್ ಸಂಖ್ಯೆ 9916792308ಗೆ ಗೂಗಲ್ ಪೇ ಮಾಡಿದ್ದಾರೆ. ಈ ಸಂಬಂಧ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡ್ಯ ಪೂರ್ವ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಬ್ಬರ ದಾರುಣ ಸಾವು

ಮೇಲಕ್ಕೆತ್ತಿ ಗುಂಡಿಗೆ ಇಳಿಸುವ ವೇಳೆ ಕಂಬದ ಮೇಲೆ ಅಳವಡಿಸಿದ್ದ ಕಬ್ಬಿಣದ ಪೈಪಿಗೆ ವಿದ್ಯುತ್ ತಂತಿ ತಗುಲಿದೆ ಎನ್ನಲಾಗಿದ್ದು, ಈ ವೇಳೆ ಗುಂಡಿಯೊಳಗೆ ಸಮರ್ಪಕವಾಗಿ ಇಳಿಸುವ ಸಲುವಾಗಿ ಉಮೇಶ ಮತ್ತು ಶಂಕರಾಚಾರಿ ಕಂಬವನ್ನು ಮುಟ್ಟಿದಾಗ ವಿದ್ಯುತ್ ಸ್ಪರ್ಶವಾಗಿ ಇಬ್ಬರೂ ಗುಂಡಿಯೊಳಗೆ ಬಿದ್ದು ಸಾವನ್ನಪ್ಪಿದ್ದಾರೆ.

ವಿದ್ಯುತ್ ಕಂಬ ಬದಲಾಯಿಸುವ ಕೆಲಸದ ಬಗ್ಗೆ ವಿದ್ಯುತ್ ಇಲಾಖೆ ಅಧಿಕಾರಿಗಳಿಗೆ ಯಾವುದೇ ಮಾಹಿತಿ ಇರದ ಕಾರಣ ಈ ಮಾರ್ಗದಲ್ಲಿ ವಿದ್ಯುತ್ ಕಡಿತಗೊಳಿಸದೇ ಇದ್ದದ್ದೇ ಈ ಅವಘಡಕ್ಕೆ ಕಾರಣ ಎಂದು ಹೇಳಲಾಗಿದೆ.

ಈ ಸಂಬಂಧ ಮೃತ ಉಮೇಶ್‌ಕುಮಾರ್ ತಂದೆ ಗೋವಿಂದ ನೀಡಿದ ದೂರಿನ ಮೇರೆಗೆ ಪಿಕೆಕೆಆರ್ ಕ್ರಶರ್ ಮಾಲೀಕ ಕೃಷ್ಣರಾಜು, ಕ್ರೇನ್ ಮಾಲೀಕ, ಜೆಸಿಬಿ ಮಾಲೀಕ ಮತ್ತು ಮಂಡ್ಯ ವಿಭಾಗದ ಕೆಇಬಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಕೆಆರ್‌ಎಸ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ರೈತರ ಬಾವಿ ಬತ್ತದಿರಲಿ

ಅಡಿಗಳಿಗೆ ನೀರು ದೊರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಅಂತರ್ಜಲ ಪುನಶ್ಚೇತನಕ್ಕಾಗಿ ನೀರಾವರಿ ಯೋಜನೆಗಳಿಗೆ ರಾಜ್ಯದಲ್ಲಿ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ಚಾಮರಾಜನಗರ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ ತಾಲೂಕುಗಳ ಕೆರೆಗಳಿಗೆ ಕಬಿನಿ ಜಲಾಶಯದಿಂದ ನೀರು ತುಂಬಿಸಲು 200 ಕೋಟಿ ರೂ. ವೆಚ್ಚದ ಯೋಜನೆ ಸಂಬಂಧ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಗೊಂಡಿದೆ ಎಂದರು. ತುಮಕೂರು ಜಿಲ್ಲೆಯಲ್ಲಿ ಮೂರು ಮತ್ತು ಬೆಳಗಾವಿಯಲ್ಲಿ ಆರೇಳು ನೀರಾವರಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಹರಿಯುವ ನೀರಿಗೆ ಸಂಬಂಧಿಸಿದಂತೆ ಬ್ರಿಡ್ಜ್ ಕಮ್ ಬ್ಯಾರಿಯರ್ ಮಾದರಿಯಲ್ಲಿ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಇದಲ್ಲದೇ ಬೆಂಗಳೂರಿನ ಸೀವೇಜ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್‌ನಿಂದ ಶುದ್ಧೀಕರಿಸಿದ ನೀರನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗೆ ತುಂಬಿಸುವ ಯೋಜನೆ ಕೈಗೆತ್ತಿಕೊಂಡಿದ್ದು, ಇದರ 2ನೇ ಹಂತದ ಯೋಜನೆಯ ಕಾಮಗಾರಿ ಮುಂದುವರೆದಿದೆ. ಅಲ್ಲದೆ, ನೆಲಮಂಗಲ, ತುಮಕೂರು ಭಾಗದ ಕೆರೆಗಳಿಗೆ ವೃಷಭಾವತಿ ವ್ಯಾಲಿಯಿಂದ ನೀರು ತುಂಬಿಸಲು 800 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಚೆಕ್‌ಡ್ಯಾಂಗೆ ಹಣದ ಕೊರತೆಯಿಲ್ಲ: ನರೇಗಾ ಯೋಜನೆಯಡಿ ಚೆಕ್‌ಡ್ಯಾಂ ನಿರ್ಮಾಣಕ್ಕಾಗಿ ಪ್ರತಿ ಗ್ರಾಪಂನಲ್ಲಿ 40ರಿಂದ 45 ಲಕ್ಷ ರೂ. ಅನುದಾನವಿದೆ. ಅದನ್ನು ಬಳಕೆ ಮಾಡಿದರೆ ಸರ್ಕಾರ ಮತ್ತಷ್ಟು ಅನುದಾನ ಬಿಡುಗಡೆ ಮಾಡಲಿದೆ. ಹಳ್ಳಕೊಳ್ಳಗಳಿಗೆ ಚೆಕ್‌ಡ್ಯಾಂ ನಿರ್ಮಾಣ ಮಾಡುವ ಹೊಣೆಯನ್ನು ಸಣ್ಣ ನೀರಾವರಿ ಇಲಾಖೆ ಹೊಂದಿದ್ದು, ಹೊಲ-ಗದ್ದೆ ವ್ಯಾಪ್ತಿಯಲ್ಲಿ ಕೃಷಿ ಇಲಾಖೆ ಚೆಕ್‌ಡ್ಯಾಂ ನಿರ್ಮಾಣ ಮಾಡಲಿದೆ ಎಂದು ಜೆ.ಸಿ.ಮಾಧುಸ್ವಾಮಿ ತಿಳಿಸಿದರು. ರೈತರು 1,800ರಿಂದ 2 ಸಾವಿರ ರೂ. ಪಾವತಿಸಿದರೆ, 30 ಸಾವಿರ ರೂ. ಬೆಲೆಬಾಳುವ ತುಂತುರು ನೀರಾವರಿ ಪದ್ಧತಿಗೆ ಬಳಕೆ ಮಾಡುವ ಸ್ಪ್ರಿಂಕ್ಲರ್‌ಗಳನ್ನು ನೀಡಲಾಗುತ್ತದೆ. ಅಲ್ಲದೆ ಹನಿ ನೀರಾವರಿ ಸಾಧನಗಳಿಗೂ ಸಬ್ಸಿಡಿ ನೀಡಲಾಗುತ್ತದೆ ಎಂದರು. ಮೇಕೆದಾಟು ಹೊರತಾಗಿ ಬೇರೆ ಡ್ಯಾಂ ನಿರ್ಮಿಸುವ ಚಿಂತನೆ ಸರ್ಕಾರದಲ್ಲಿ ಇಲ್ಲ. ಬಗರ್‌ಹುಕುಂ ಸಾಗುವಳಿದಾರರಿಗೆ ಜಮೀನು ನೀಡುವ ಸಂಬಂಧ ಈಗಾಗಲೇ ಮೂರು ಬಾರಿ ಅರ್ಜಿ ಸ್ವೀಕರಿಸಿ ಪ್ರಕ್ರಿಯೆ ನಡೆಸಲಾಗಿದೆ. 2002ರ ಹಿಂದೆ ಜಮೀನಿಗೆ ಅರ್ಜಿ ಹಾಕಿಕೊಂಡಿದ್ದವರು ಮತ್ತೆ ಅರ್ಜಿ ಸಲ್ಲಿಕೆಗೆ ಇನ್ನು ಒಂದು ವರ್ಷ ಸಮಯಾವಕಾಶ ನೀಡಲಾಗಿದೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು. ಮಾಜಿ ಶಾಸಕ ವಾಸು, ಹಿರಿಯ ವಕೀಲ ಚಂದ್ರಮೌಳಿ, ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ ಮೃತ್ಯುಂಜಯಸ್ವಾಮಿ, ಎರಡೂ ಏತ ನೀರಾವರಿ ಯೋಜನೆಗಳ ಗುತ್ತಿಗೆದಾರ ಕೆ.ಬಿ.ಕುಮಾರ್ ಮತ್ತಿತರರು ಹಾಜರಿದ್ದರು.

ನೀರಾವರಿ ಯೋಜನೆ ವಿಸ್ತರಿಸಿ

ಏತ ನೀರಾವರಿ ಯೋಜನೆ ಕಾಮಗಾರಿ ಕೈಗೊಳ್ಳುವುದು. ದಡದಕಲ್ಲಹಳ್ಳಿ ಮತ್ತು ಇತರ 8 ಕೆರೆಗಳಿಗೆ ನೀರು ತುಂಬಿಸಲು ಯಾಚೇಗೌಡನಹಳ್ಳಿ ಗ್ರಾಮದ ಬಳಿ ಹೊಸದಾಗಿ 50 ಕೋಟಿ ವೆಚ್ಚದಲ್ಲಿ ಏತ ನೀರಾವರಿ ಯೋಜನೆ ಕಾಮಗಾರಿ ಕೈಗೊಳ್ಳುವುದು. ಎಡಹಳ್ಳಿ ಮತ್ತು ಆನಂದೂರು ಮೂಲ ಏತ ನೀರಾವರಿ ಯೋಜನೆಗಳನ್ನು ತಲಾ 10 ಕೋಟಿ ರೂ. ವೆಚ್ಚದಲ್ಲಿ ಪುನರುಜ್ಜೀವಗೊಳಿಸುವ ಕಾಮಗಾರಿ ಕೈಗೊಳ್ಳಬೇಕೆಂದು ಮನವಿಯಲ್ಲಿ ಕೋರಲಾಗಿದೆ.

ಡಾ.ಮೈಲಹಳ್ಳಿ ರೇವಣ್ಣ ಅವರ ಅಭಿನಂದನಾ ಸಮಾರಂಭ

ಅಸ್ಪೃಶ್ಯರು ಉನ್ನತ ಹುದ್ದೆಗೇರಿದಾಗ ಸಹಿಸದೇ ಸಹೋದ್ಯೋಗಿಗಳು ಕೆಲಸ ಬಿಟ್ಟಿದ್ದನ್ನು ಕಂಡಿದ್ದೇನೆ

● ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಷಾದ ● 'ಕಾಲುದಾರಿಯ ಮೈಲುಗಲ್ಲು' ಅಭಿನಂದನಾ ಗ್ರಂಥ ಬಿಡುಗಡೆ

ಮೈಸೂರು,ಜು.9(ಪಿಎಂ)-ಅಸ್ಪೃಶ್ಯ ಸಮುದಾಯದವರು ಉನ್ನತ ಹುದ್ದೆಗೇರಿದಾಗ, ಸಹಿಸದೇ ಸಹೋದ್ಯೋಗಿಗಳು ಕೆಲಸ ಬಿಟ್ಟಿದ್ದನ್ನು ಕಂಡಿದ್ದೇನೆ ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಷಾದಿಸಿದರು.


ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಡಾ.ಮೈಲಹಳ್ಳಿ ರೇವಣ್ಣ ಅವರ ಅಭಿನಂದನಾ ಸಮಿತಿ ಮತ್ತು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಮೈಲಹಳ್ಳಿ ರೇವಣ್ಣ ಅವರ ಅಭಿನಂದನಾ ಸಮಾರಂಭದಲ್ಲಿ ಕಾಲುದಾರಿಯ ಮೈಲುಗಲ್ಲು ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಯಾವ ಜಾತಿ ವ್ಯವಸ್ಥೆಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವೋ ಅಲ್ಲಿಯೇ ನಿಂತು, ಜಾನಪದ ವಿದ್ವಾಂಸ ಡಾ.ಮೈಲಹಳ್ಳಿ ರೇವಣ್ಣ ಸಾಧಿಸಿ ತೋರಿಸಿದವರು. ಜಾನಪದ ಸಂಗ್ರಹದ ಜೊತೆಗೆ ಹೆಚ್ಚಿನ ಶ್ರಮ ಅಪೇಕ್ಷಿಸುವ ಅಭಿಜಾತ ಸಾಹಿತ್ಯಕ್ಕೆ ಆಕರಗಳನ್ನು ಸಂಪಾದಿಸಿಕೊಟ್ಟಿದ್ದಾರೆ.

ಪ್ರಾರಂಭದಲ್ಲಿ ರೇವಣ್ಣ ಅವರ ಬೆಳವಣಿಗೆ ಸಹಿಸದೆ ಹಲವು ಸಹೋದ್ಯೋಗಿಗಳು ಕೆಲಸ ಬಿಟ್ಟರು. ವಿದ್ವತ್, ವಿನಯ, ಕಾರ್ಯಶ್ರದ್ಧೆಯಿಂದ ಘಟಾನುಘಟಿ ವಿದ್ವಾಂಸರ ಮನಸ್ಸನ್ನು ಗೆದ್ದ ರೇವಣ್ಣ, ಕಲ್ಲು ಬಂಡೆಗಳ ನಡುವೆ ಮರವಾಗಿ ನಿಂತರು ಎಂದು ಶ್ಲಾಘಿಸಿದರು. ರೇವಣ್ಣನವರು ಮೈಸೂರು ವಿವಿಯ ಡಾ.ಬಾಬು ಜಗಜೀವನ್ ರಾಮ್ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕರಾಗಿ ಜನತೆಗೆ ಬಾಬೂಜಿ ಚಿಂತನೆಗಳನ್ನು ಕೊಂಡೊಯ್ದರು. ಕಾಲುದಾರಿಯಲ್ಲಿ ರೇವಣ್ಣ ತಲುಪಿದ ಗುರಿ ಎಲ್ಲರಿಗೂ ಸ್ಫೂರ್ತಿ. ಅಭಿನಂದನಾ ಗ್ರಂಥಗಳು ಗ್ರಂಥಾಲಯಕ್ಕೆ ಭಾರ ಎಂಬ ಮಾತಿದೆ. ಆದರೆ ಸಾಮಾಜಿಕ ಅರಿವು, ಬಂಧುತ್ವ ಪರಿಕಲ್ಪನೆಯನ್ನು ರೇವಣ್ಣ ಅಭಿನಂದನಾ ಗ್ರಂಥವು ಕೊಡುವ ಮೂಲಕ ಗ್ರಂಥಾಲಯದಲ್ಲಿರುವ ಅರ್ಹ ಗ್ರಂಥವಾಗಿದೆ ಎಂದು ಹೇಳಿದರು.

ಜಾನಪದ ವಿದ್ವಾಂಸ ಡಾ.ಕೆ.ಆರ್.ದುರ್ಗಾದಾಸ್ ಮಾತನಾಡಿ, ಸ್ವಾತಂತ್ರ್ಯ ಬಂದ ದಿನಗಳಲ್ಲೂ ದಲಿತ ಸಮುದಾಯದ ಮಕ್ಕಳು ಶಾಲೆಗೆ ಹೋಗುವುದು ಕಷ್ಟಕರವಾಗಿತ್ತು. ಅಂದಿನ ಮೇಷ್ಟ್ರುಗಳು ದಲಿತ ಮಕ್ಕಳನ್ನು ನೆಲದಲ್ಲಿ ಇಲ್ಲವೇ ಬೇರೆ ಸಾಲಿನಲ್ಲಿ ಕೂರಿಸುತ್ತಿದ್ದರು. ಸಣ್ಣ ತಪ್ಪಿಗೆ ದೊಡ್ಡ ಬೆತ್ತದ ಏಟು ತಿನ್ನಬೇಕಿತ್ತು. ಬೆತ್ತದ ಏಟಿಗೆ ಹೆದರಿ ಶಾಲೆ ಬಿಟ್ಟವರು ಜೀತಕ್ಕೆ ಹೋಗುವ ದಿನಗಳವು. ಆದರೆ ರೇವಣ್ಣ ಅಂತಹ ಸಂಕಷ್ಟಗಳನ್ನು ಎದುರಿಸಿ ನಾಡಿಗೆ ಜಾನಪದ ಸಾಹಿತ್ಯ ಸಂಗ್ರಹಿಸಿಕೊಡುವ ಮಟ್ಟಕ್ಕೆ ಬೆಳೆದರು ಎಂದು ಪ್ರಶಂಸಿಸಿದರು.

ಕೃತಿ ಕುರಿತು ಮಾತನಾಡಿದ ಜಾನಪದ ವಿದ್ವಾಂಸ ಡಾ.ಮೀರಾಸಾಬಿಹಳ್ಳಿ ಶಿವಣ್ಣ, ಚಿತ್ರದುರ್ಗ ಜಿಲ್ಲೆಯ ಮಾದಾರ ಜಾನಪದ ಸಾಹಿತ್ಯ ಸಂಗ್ರಹದಲ್ಲಿ ರೇವಣ್ಣ ಅವರ ಕೊಡುಗೆ ಅನನ್ಯ. ಸಾವಿರಾರು ವರ್ಷದ ಪರಂಪರೆ ದಾಖಲಿಸಿದ ಜಾನಪದ ಸಾಹಿತ್ಯದ ಭಿತ್ತಿಯನ್ನು ಹೊಸ ತಲೆಮಾರಿಗೆ ವರ್ಗಾಯಿಸಿದ್ದಾರೆ. ಸಾಧನೆಯ ಹೂವೊಂದು ಬೀರುವ ಪರಿಮಳದಂತೆ ಇವರ ಅಭಿನಂದನಾ ಗ್ರಂಥ ಮೂಡಿಬಂದಿದೆ ಎಂದು ನುಡಿದರು. ಜಾನಪದ ವಿದ್ವಾಂಸ ಡಾ.ಡಿ.ಕೆ.ರಾಜೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್, ಮುಖಂಡ ಶಾ.ಮಂ.ಕೃಷ್ಣರಾಯ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಮೈಲಹಳ್ಳಿ ರೇವಣ್ಣ ಅವರ ಅಭಿನಂದನಾ ಸಮಾರಂಭದಲ್ಲಿ 'ಕಾಲುದಾರಿಯ ಮೈಲುಗಲ್ಲು' ಅಭಿನಂದನಾ ಗ್ರಂಥವನ್ನು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಬಿಡುಗಡೆ ಮಾಡಿದರು.

ಜು.11ರಿಂದ ಮೈಸೂರು-ಉದಯಪುರ 'ಹಮ್ ಸಫರ್ ವೀಕ್ಲಿ ಎಕ್ಸ್‌ಪ್ರೆಸ್' ರೈಲು ಸಂಚಾರ

ಮೈಸೂರು, ಜು.9(ಎಸ್‌ಬಿಡಿ)-ಮೈಸೂರು-ಉದಯಪುರ ನಡುವಿನ 'ಹಮ್ ಸಫರ್ ವೀಕ್ಲಿ ಎಕ್ಸ್‌ಪ್ರೆಸ್' ರೈಲು ಸಂಚಾರ ಜು.11ರಿಂದ ಪುನಾರಂಭವಾಗಲಿದೆ.



ಕೋವಿಡ್ ನಂತರ ಹಂತ ಹಂತವಾಗಿ ರೈಲು ಸಂಚಾರ ಪುನಾರಂಭಗೊಳಿಸಿದ್ದು, ಇದೀಗ ವಾಯುವ್ಯ ರೈಲ್ವೆ ವಲಯ 'ಹಮ್ ಸಫರ್ ವೀಕ್ಲಿ ಎಕ್ಸ್‌ಪ್ರೆಸ್' ರೈಲನ್ನು ಸಂಚಾರಕ್ಕೆ ಸಜ್ಜುಗೊಳಿಸಿದೆ. ರಾಜಸ್ತಾನದ ಉದಯಪುರ ಸಿಟಿಯಿಂದ ಜುಲೈ 11ರಿಂದ ಪ್ರತಿ ಸೋಮವಾರ ರಾತ್ರಿ 09:15ಕ್ಕೆ ಹೊರಡುವ ಈ ರೈಲು(19667) ಚಿತ್ತೋಡಗಢ, ಮಂದಸೌರ್, ರತ್ಲಾಮ್, ವಡೋದರಾ, ಸೂರತ್, ವಸಯಿ ರೋಡ, ಪುಣೆ, ಮೀರಜ್, ಬೆಳಗಾವಿ, ಹುಬ್ಬಳ್ಳಿ, ದಾವಣಗೆರೆ, ಬೆಂಗಳೂರು ಮತ್ತು ಮಂಡ್ಯ ಮಾರ್ಗವಾಗಿ ಬುಧವಾರ ಸಂಜೆ 4.35ಕ್ಕೆ ಮೈಸೂರು ನಿಲ್ದಾಣಕ್ಕೆ ಆಗಮಿಸಲಿದೆ. ಜು.14ರಿಂದ ಪ್ರತಿ ಗುರುವಾರ ಬೆಳಗ್ಗೆ 10ಕ್ಕೆ ಈ ರೈಲು(19668) ವಾಪಸ್ಸು ಹೊರಟು ಅದೇ ಮಾರ್ಗದಲ್ಲಿ ಸಂಚರಿಸಿ ಶನಿವಾರ ನಸುಕಿನ ಜಾವ 3:35ಕ್ಕೆ ಉದಯಪುರ ಸಿಟಿ ನಿಲ್ದಾಣ ತಲುಪಲಿದೆ. ಈ ರೈಲುಗಳು ಹದಿನಾರು 3ನೇ ದರ್ಜೆ ಹವಾ ನಿಯಂತ್ರಿತ ಬೋಗಿಗಳು, ಒಂದು- ದ್ವಿತೀಯ ದರ್ಜೆಯ ಸ್ಲೀಪರ್ ಬೋಗಿ, 1 ಹವಾ ನಿಯಂತ್ರಿತ ಅಡುಗೆ ಬೋಗಿ (ಪ್ಯಾಂಟ್ರಿ ಕಾರ್) ಹಾಗೂ 2 ಸಾಮಾನ್ಯ ದ್ವಿತೀಯ ದರ್ಜೆಯ ಲಗೇಜ್ ಕಮ್ ಬ್ರೇಕ್ ವ್ಯಾನ್/ ಜನರೇಟರ್‌ಗಳು ಸೇರಿ ಒಟ್ಟು 20 ಬೋಗಿಗಳನ್ನು ಒಳಗೊಂಡಿವೆ. ಪ್ರಯಾಣಿಕರು ರೈಲ್ವೆ ನಿಲ್ದಾಣ ಹಾಗೂ ಪ್ರಯಾಣದ ವೇಳೆ ಕೋವಿಡ್-19 ಮಾರ್ಗಸೂಚಿ ಅನುಸರಿಸುವಂತೆ ನೈಋತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ ಹೆಗಡೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷಗಾದಿಗೆ ಮಲ್ಲಿಕಾರ್ಜುನ ಖರ್ಗೆ

ರಾಜ್ಯ ನಾಯಕರಿಗೆ ರಾಹುಲ್ ಗಾಂಧಿ ಸುಳಿವು

ಬೆಂಗಳೂರು, ಜು.9(ಕೆಎಂಶಿ)-ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಕಾಂಗ್ರೆಸ್‌ನ ಅಧಿನಾಯಕ ರಾಹುಲ್‌ಗಾಂಧಿ ಅವರೇ ರಾಜ್ಯ ನಾಯಕರಿಗೆ ಖರ್ಗೆ ಅವರು ಉನ್ನತ ಸ್ಥಾನಕ್ಕೇರಲಿದ್ದಾರೆ ಎಂದು ತಿಳಿಸಿದ್ದಾರೆ. ಮುಂಬರುವ ವಿಧಾನಸಭೆ ಚುನಾವಣೆಯ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಯಾರಾಗಬೇಕೆಂಬ ಗೊಂದಲ ನಿವಾರಿಸಲು ರಾಹುಲ್ ಅವರು ಇತ್ತೀಚೆಗೆ ದೆಹಲಿಯಲ್ಲಿ ರಾಜ್ಯ ನಾಯಕರೊಟ್ಟಿಗೆ ಸಮಾಲೋಚನೆ ನಡೆಸಿದ್ದರು. ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಲ್ಲದೆ ಎಐಸಿಸಿಯ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಂದೀಪ್‌ಸಿಂಗ್ ಸುರ್ಜೆವಾಲ್ ಅವರ ಸಮ್ಮುಖದಲ್ಲೇ ಖರ್ಗೆಯವರು ದೊಡ್ಡ ಸ್ಥಾನಕ್ಕೇರಲಿದ್ದಾರೆ ಎಂದು ರಾಹುಲ್ ತಿಳಿಸಿದ್ದಾರೆ. ಖರ್ಗೆ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಅವರು ಬಹಳ ಎತ್ತರಕ್ಕೇರಿದ್ದಾರೆ. ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕಾಗಿ ಕರ್ನಾಟಕಕ್ಕೆ ಕಳುಹಿಸುವುದಿಲ್ಲ. ನಿಮಗೆ ಅವರ ಬಗ್ಗೆ ಚಿಂತನೆ ಬೇಡ ಎಂದು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಲ್ಲಿ ಸ್ಪಷ್ಟಪಡಿಸಿದ್ದಾರೆ.



ಹಿಂದೂಗಳು ಒಗ್ಗಟ್ಟಾದರೆ ಮಾತ್ರ ದೇವಾಲಯಗಳ ಉಳಿಸಲು ಸಾಧ್ಯ

ಲೇಖಕ ಸಂದೀಪ್ ಬಾಲಕೃಷ್ಣ ಅಭಿಮತ

ಮೈಸೂರು, ಜು.9(ಎಂಕೆ)-ಹಿಂದೂ ಸಮಾಜ ದೇವಾಲಯಗಳ ಕೇಂದ್ರವಾಗಿದ್ದು, ಎಲ್ಲರೂ ತಮ್ಮ ವೈಯಕ್ತಿಕ ಸ್ವಾರ್ಥಗಳನ್ನು ಬಿಟ್ಟು ಒಂದುಗೂಡಿದರಷ್ಟೇ ದೇವಾಲಯಗಳನ್ನು ಉಳಿಸಲು ಸಾಧ್ಯ ಎಂದು ಲೇಖಕ ಸಂದೀಪ್ ಬಾಲಕೃಷ್ಣ ಅಭಿಪ್ರಾಯಪಟ್ಟರು.



ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಜನಜಾಗರಣ ಟ್ರಸ್ಟ್ ಹಾಗೂ ಮಂಥನ ಮೈಸೂರು ವತಿಯಿಂದ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಹಿಂದೂ ದೇವಾ ಯಲಗಳನ್ನು ಮರು ಪಡೆಯುವುದು; 360 ಡಿಗ್ರಿ ಚಿಂತನೆ' ಕುರಿತು ಮಾತನಾಡಿದ ಅವರು, ಹಿಂದೂ ಸಮಾಜವನ್ನು ಒಂದು ಕುಟುಂಬದಂತೆ ಭಾವಿಸಿ, ಕುಟುಂಬಸ್ಥರೆಲ್ಲರೂ ಮನೆಗಾಗಿ ದುಡಿಯು ವಂತೆ ಸಮಾಜದ ಎಲ್ಲರೂ ದೇವಾಲಯಗಳ ಉಳಿವಿಗಾಗಿ ಶ್ರಮಿಸಬೇಕು ಎಂದರು. ದೇಶದ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಹಿಂದೂ ದೇವಾಲಯಗಳನ್ನು ಪ್ರಮುಖವಾಗಿ ಪೋಷಣೆ ಮಾಡಲಾಗಿದೆ. ರಾಜಾಶ್ರಯದಲ್ಲಿ ಹಲವಾರು ದೇವಾಲಯಗಳ ನಿರ್ಮಾಣದ ಜೊತೆಗೆ ಅವುಗಳನ್ನು ಕಾಪಾಡಿಕೊಂಡು ಬರಲಾಗಿದೆ. ಈ ಮೂಲಕ ಹಿಂದೂ ಸಮಾಜವನ್ನು ಒಂದುಗೂಡಿಸುವ ಕೆಲಸವೂ ಆಗುತ್ತಿತ್ತು. ಹಿಂದೂ ಸಮಾಜ ಎಲ್ಲಾ ಜಾತಿ-ಸಮುದಾಯದವರು ದೇವಾಲಯಗಳನ್ನು ಶ್ರದ್ಧಾ-ಭಕ್ತಿಯಿಂದ ಕಾಣುತ್ತಿದ್ದರು. ಅಲ್ಲದೆ ಅವುಗಳನ್ನು ಉಳಿಸಿಕೊಳ್ಳುವತ್ತಾ ಶ್ರಮಿಸುತ್ತಿದ್ದರು. ಆದರೆ ಕಾಲ ಬದಲಾದಂತೆ ಹಿಂದೂ ಸಮಾಜದಲ್ಲಾದ ಬದಲಾವಣೆಗಳಿಂದ ಹಲವಾರು ದೇವಾಲಯಗಳು ನಾಶವಾಗಿವೆ ಎಂದು ತಿಳಿಸಿದರು. ಸರ್ಕಾರ ಹಾಗೂ ಹಿಂದೂ ಸಮಾಜದ ಎಲ್ಲರೂ ಒಂದಾದರೆ ಮಾತ್ರವೇ ಭಕ್ತಿ ಕೇಂದ್ರಗಳಾದ ದೇವಾಲಯಗಳನ್ನು ಕಾಪಾಡಲು ಸಾಧ್ಯ. ಆದ್ದರಿಂದ ಹಿಂದೂ ಸಮಾಜದ ಪ್ರತಿಯೊಬ್ಬರು ದೇವಾಲಯಗಳನ್ನು ಉಳಿಸುವತ್ತಾ ಚಿಂತಿಸಬೇಕು. ದೇವಾಲಯಗಳ ಸಂರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಜನಜಾಗರಣ ಟ್ರಸ್ಟ್ ಹಾಗೂ ಮಂಥನ ಮೈಸೂರು ಸಂಘಟನೆ ಸೇರಿದಂತೆ ಹಿಂದೂಪರ ಸಂಘಟನೆಗಳೊಂದಿಗೆ ಕೈ ಜೋಡಿಸುವಂತೆ ಮನವಿ ಮಾಡಿದರು. ಈ ವೇಳೆ ವಿಜಯ ವಿಠಲ ಶಾಲೆಯ ಕಾರ್ಯದರ್ಶಿ ವಾಸುದೇವ್ ಭಟ್ ಉಪಸ್ಥಿತರಿದ್ದರು.

ಟಿ20: ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಸರಣಿ ಜಯ

ಬರ್ಮಿಂಗ್‌ಹ್ಯಾಮ್, ಜು.9- ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ 49 ರನ್‌ಗಳ ಜಯ ಸಾಧಿಸಿದೆ. ಈ ಮೂಲಕ 3 ಪಂದ್ಯಗಳ ಟಿ20 ಸರಣಿಯನ್ನು ಇನ್ನೂ ಒಂದು ಪಂದ್ಯ ಬಾಕಿ ಉಳಿದಿರುವಂತೆಯೇ 2-0 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.



ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು. ತಂಡದ ಪರ ರೋಹಿತ್ ಶರ್ಮಾ 31, ರಿಷಬ್ ಪಂತ್ 26, ಸೂರ್ಯಕುಮಾರ್ ಯಾದವ್ 15, ಹಾರ್ದಿಕ್ ಪಾಂಡ್ಯ, ದಿನೇಶ್ ಕಾರ್ತಿಕ್ ತಲಾ 12, ರವೀಂದ್ರ ಜಡೇಜಾ 46, ಹರ್ಷಲ್ ಪಟೇಲ್ 13 ರನ್ ಗಳಿಸಿದರು. ಇಂಗ್ಲೆಂಡ್ ಪರ ಕ್ರಿಸ್ ಜೋರ್ಡಾನ್ 4, ರಿಚರ್ಡ್ ಗ್ಲಿಸನ್ 3 ವಿಕೆಟ್ ಗಳಿಸಿದರು.

ನಂತರ 171 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 17 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಡೇವಿಡ್ ಮಲಾನ್ 19, ಲಿಯಾಮ್ ಲಿವಿಂಗ್‌ಸ್ಟೋನ್ 15, ಮೊಯಿನ್ ಅಲಿ 35, ಡೇವಿಡ್ ವಿಲ್ಲಿ 33 ರನ್ ಗಳಿಸಿದರು. ಭಾರತದ ಪರ ಭುವನೇಶ್ವರ್ ಕುಮಾರ್ 3, ಬೂಮ್ರಾ, ಯಜುವೇಂದ್ರ ಚಹಲ್ ತಲಾ 2, ಹಾರ್ದಿಕ್ ಪಾಂಡ್ಯ, ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಭುವನೇಶ್ವರ್ ಕುಮಾರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹೃದಯ, ಚರ್ಮ ಉಚಿತ ತಪಾಸಣಾ ಶಿಬಿರ

ಮೈಸೂರು, ಜು. 9- ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದಿಂದ ಜು. 12 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಹೃದಯ, ಚರ್ಮ ಉಚಿತ ತಪಾಸಣೆ, ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

ಡಿಡಿಪಿಯು ಕಚೇರಿಗೆ ಶಾಖಾಧಿಕಾರಿಗಳ ವ್ಯವಸ್ಥೆ

ಮೈಸೂರು, ಜು.9(ಎಸ್‌ಪಿಎನ್)-ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಹಂತದ ಡಿಡಿಪಿಯು ಕಚೇರಿಗಳನ್ನು ಬಲಪಡಿಸುವ ದೃಷ್ಟಿಯಿಂದ 30 ಕಚೇರಿ ಅಧೀಕ್ಷಕ ಹುದ್ದೆಗಳನ್ನು ಶಾಖಾಧಿಕಾರಿಗಳನ್ನಾಗಿ ಪರಿವರ್ತಿಸಿ ಶಿಕ್ಷಣ ಇಲಾಖೆಯ (ಪದವಿ ಪೂರ್ವ ಶಿಕ್ಷಾ) ಅಧೀನ ಕಾರ್ಯದರ್ಶಿ ಎಸ್.ಎನ್.ಪದ್ಮಿನಿ ಆದೇಶಿಸಿದ್ದಾರೆ. ಹಿರಿಯ ಅಧಿಕಾರಿಗಳ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಪರಿಶೀಲಿಸಿ ರಾಜ್ಯದ ಎಲ್ಲಾ ಡಿಡಿಪಿಯು ಕಚೇರಿಗಳಲ್ಲಿ 30 ಅಧೀಕ್ಷಕರ ಹುದ್ದೆಗಳಿದ್ದು, ಈ ಹುದ್ದೆಗಳನ್ನು ಶಾಖಾಧಿಕಾರಿ ಹುದ್ದೆಗಳಾಗಿ ಪರಿವರ್ತಿಸಲು 3 ಷರತ್ತು ಗಳನ್ನು ವಿಧಿಸಿ ಮೇಲ್ದರ್ಜೆಗೇರಿಸಲು ಅನುಮತಿ ನೀಡಿದೆ ಎಂದು ತಿಳಿಸಿದ್ದಾರೆ.

ಪ್ರೊ.ಮುಜಾಫರ್ ಅಸ್ಸಾದಿ ಶಿಫಾರಸ್ಸಿನಂತೆ ಪರಿಹಾರ ಪ್ಯಾಕೇಜ್ ನೀಡದಿದ್ದಲ್ಲಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ

● ಹೆಚ್.ಡಿ.ಕೋಟೆ ಬುಡಕಟ್ಟು ಕೃಷಿಕರ ಸಂಘ ಎಚ್ಚರಿಕೆ ● ಆಗಸ್ಟ್‌ವರೆಗೆ ಗಡುವು ● ಬೇಡಿಕೆ ಈಡೇರದಿದ್ದರೆ ಬೆಂಗಳೂರಿಗೆ ಕಾಲ್ನಡಿಗೆ ಜಾಥಾ

ಮೈಸೂರು,ಜು.9(ಎಂಟಿವೈ)- ರಾಜ್ಯ ಸರ್ಕಾರ ಆಗಸ್ಟ್ ಅಂತ್ಯದೊಳಗೆ ಪ್ರೊ. ಮುಜ್ಹಾಫರ್ ಅಸ್ಸಾದಿ ವರದಿ ಶಿಫಾರಸ್ಸಿನಂತೆ ಆದಿವಾಸಿಗಳಿಗೆ ಪುನರ್ವಸತಿ ಪರಿಹಾರ ಪ್ಯಾಕೇಜ್ ನೀಡಿ, ಬೇಡಿಕೆ ಈಡೇರಿಸದಿದ್ದರೆ ಮೈಸೂರಿಂದ ಕಾಲ್ನಡಿಗೆಯಲ್ಲಿ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ ಎಂದು ಹೆಚ್.ಡಿ. ಕೋಟೆಯ ಬುಡಕಟ್ಟು ಕೃಷಿಕರ ಸಂಘದ ಸಂಯೋಜಕ ವಿಜಯ್‌ಕುಮಾರ್ ಆದಿವಾಸಿ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದ ಅರಣ್ಯ ಪ್ರದೇಶಗಳಾದ ನಾಗರಹೊಳೆ, ಬಂಡೀಪುರ ಸೇರಿದಂತೆ ವಿವಿಧ ಅರಣ್ಯ ಪ್ರದೇಶದಲ್ಲಿ ಐದಾರು ತಲೆಮಾರುಗಳಿಂದ ವಾಸಿಸುತ್ತಿದ್ದ ಮೂಲ ಬುಡಕಟ್ಟು ಜನರಿಗೆ ಸರ್ಕಾರ ಪುನರ್ವಸತಿ ಸೌಲಭ್ಯ ನೀಡುವುದಾಗಿ ಭರವಸೆ ನೀಡಿ, ಕಾಡಿಂದ ಹೊರಗೆ ತಂದು ಬಿಟ್ಟಿದ್ದಾರೆ. ಆದರೆ, ನೀಡಿದ ಭರವಸೆಯಂತೆ ಸೌಲಭ್ಯ ನೀಡಿಲ್ಲ. ಇದರಿಂದ ಬುಡಕಟ್ಟು ಸಮುದಾಯದ ಜನರು ಪರದಾಡುವಂತಾಗಿದೆ. ಆದಿವಾಸಿಗಳ ಹಿತಕಾಯುವ ನಿಟ್ಟಿನಲ್ಲಿ ಪ್ರೊ.ಮುಜ್ಹಾಫರ್ ಅಸ್ಸಾದಿ ನೇತೃತ್ವದ ಸಮಿತಿ ಸಮಗ್ರ ತನಿಖೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು ಆದರೆ ಇದುವರೆಗೂ ಆದಿವಾಸಿಗಳಿಗೆ ಸವಲತ್ತು ನೀಡದೆ ವಂಚಿಸಲಾಗುತ್ತಿದೆ ಎಂದು ವಿಷಾದಿಸಿದರು.

ಅರಣ್ಯ ಇಲಾಖೆ ಅಧಿಕಾರಿಗಳು ಈ ಹಿಂದೆ ಅರಣ್ಯದ ಆದಿವಾಸಿ ಸಮುದಾಯಗಳನ್ನು ಎತ್ತಂಗಡಿ ಮಾಡಿದ್ದಾರೆ. ಜೊತೆಗೆ ಅಣೆಕಟ್ಟುಗಳ ನಿರ್ಮಾಣದಿಂದಲೂ ಆದಿವಾಸಿಗಳು ಬಾಧಿತರಾಗಿದ್ದಾರೆ. ಆದರೆ ಇವರಿಗೆ ಪುನರ್ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸದೇ ಇವರ ಪರಿಸ್ಥಿತಿ ಅತಂತ್ರವಾಗಿದೆ. ಈ ಕುರಿತು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ ಬಳಿಕ ಪ್ರೊ.ಮುಜಾಫರ್ ಅಸ್ಸಾದಿ ವರದಿಯಂತೆ ಪುನರ್ವಸತಿ ಕಾರ್ಯಕ್ರಮ ಜಾರಿಗೊಳಿಸಬೇಕು. ಆದಿವಾಸಿ ಕುಟುಂಬಕ್ಕೆ 15 ಲಕ್ಷ ರೂ. ಪ್ಯಾಕೇಜ್ ನೀಡಬೇಕು. ಹಾಡಿಗಳಲ್ಲಿ ಮೂಲಸೌಕರ್ಯ ಕಲ್ಪಿಸಬೇಕು. ಇದಕ್ಕಾಗಿ ಬಜೆಟ್ ಪ್ಯಾಕೇಜ್ ಮಂಜೂರು ಮಾಡಿ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ಹಾಡಿಗಳಿಂದ ಮುಖ್ಯಮಂತ್ರಿಗಳ ನಿವಾಸಕ್ಕೆ ಜಾಥಾ ತೆರಳಿ ಮುತ್ತಿಗೆ ಹಾಕಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ರಾಜು, ಪದಾಧಿಕಾರಿಗಳಾದ ಸ್ವಾಮಿ, ಕುಂಟು ಕರಿಯ, ರಾಜು, ಸ್ವಾಮಿ ಇದ್ದರು.

ಪಿಯು ಉಪನ್ಯಾಸಕರ ಅವೈಜ್ಞಾನಿಕ ಕಡ್ಡಾಯ ವರ್ಗಾವಣೆ ರದ್ದಿಗೆ ಆಗ್ರಹ

ಮೈಸೂರು, ಜು.9(ಎಸ್‌ಬಿಡಿ)-ಪದವಿಪೂರ್ವ ಕಾಲೇಜು ಉಪನ್ಯಾಸಕರ ಅವೈಜ್ಞಾನಿಕ ಕಡ್ಡಾಯ ವರ್ಗಾವಣೆಯನ್ನು ರದ್ದುಪಡಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆ ವರ್ಗಾವಣೆ ಮಾರ್ಗಸೂಚಿ ಉಲ್ಲಂಘಿಸಿ ಜು.7ರಂದು ಕೌನ್ಸಲಿಂಗ್ ಮೂಲಕ ರಾಜ್ಯಾದ್ಯಂತ ಕಡ್ಡಾಯ ವರ್ಗಾವಣೆ ಮಾಡಿದ್ದು, ಇದರಿಂದ ಬಹಳಷ್ಟು ಉಪನ್ಯಾಸಕರಿಗೆ ಅನ್ಯಾಯವಾಗಿದೆ. ಮೈಸೂರು ನಗರ ಮತ್ತು ತಾಲೂಕು ವ್ಯಾಪ್ತಿಯಲ್ಲಿ ವಿವಿಧ ವಿಷಯಗಳ ಸುಮಾರು 21 ಉಪನ್ಯಾಸಕರ ಹುದ್ದೆ ಖಾಲಿ ಇದ್ದರೂ ಆ ಬಗ್ಗೆ ಕೌನ್ಸಿಲಿಂಗ್‌ನಲ್ಲಿ ಪ್ರದರ್ಶಿಸಿಲ್ಲ. ಈ ಬಗ್ಗೆ ಉಪನ್ಯಾಸಕರು ಆಕ್ಷೇಪಣೆ ವ್ಯಕ್ತಪಡಿಸಿದ್ದರೂ ಸಮಂಜಸ ಸ್ಪಷ್ಟನೆ ನೀಡದೆ ಬೇರೆ ಸ್ಥಳಗಳಿಗೆ ವರ್ಗಾವಣೆ ಪಡೆಯಲು ಒತ್ತಡ ಹೇರಿರುವುದು ಖಂಡನೀಯ. ಇಂತಹ ಘಟನೆಗಳು ರಾಜ್ಯದೆಲ್ಲೆಡೆ ನಡೆದಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೌನ್ಸಿಲಿಂಗ್ ಹಿಂದಿನ ದಿನ ರಾತ್ರಿ ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿಗೆ ಹುಬ್ಬಳ್ಳಿಯಿಂದ ನಾಲ್ಕು ವಿಜ್ಞಾನ ವಿಭಾಗದ(ಪಿಸಿಎಂಬಿ) ಹುದ್ದೆಗಳನ್ನು ಸ್ಥಳಾಂತರಿಸಿ, ಕೌನ್ಸಿಲಿಂಗನಲ್ಲಿ ಗಣಿತ ಮತ್ತು ರಸಾಯನಶಾಸ್ತ್ರ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. ಗಣಿತಶಾಸ್ತ್ರದ ಒಂದು ಹುದ್ದೆ ಹೆಚ್ಚುವರಿ ಎಂದು ಗುರುತಿಸಲಾಗಿತ್ತಾದರೂ ಹುಬ್ಬಳಿಯಿಂದ ಮತ್ತೊಂದು ಹುದ್ದೆ ಸ್ಥಳಾಂತಿಸಿರುವುದು ಏಕೆ?. ಇದರ ಹಿಂದೆ ಯಾರ ಪ್ರಭಾವವಿದೆ?. ಮೈಸೂರಿನ ನಿಜಾಮಿಯ ಪದವಿಪೂರ್ವ ಕಾಲೇಜು ಮತ್ತು ನಂಜನಗೂಡು ತಾಲೂಕು ಹುಲ್ಲಹಳ್ಳಿ ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿ 3 ವರ್ಷಗಳಾಗಿದ್ದು, ಈವರೆಗೂ ಒಂದು ಹುದ್ದೆಯನ್ನೂ ಮಂಜೂರು ಮಾಡಿಲ್ಲ. ಇದು ಸರ್ಕಾರದ ನಿರ್ಲಕ್ಷತೆಗೆ ಜ್ವಲಂತ ಸಾಕ್ಷಿ ಎಂದು ತಿಳಿಸಿದ್ದಾರೆ.

ಕಳೆದ 4 ವರ್ಷಗಳಿಂದ ಸಾಮಾನ್ಯ ಮತ್ತು ವಿಶೇಷ ಉಪನ್ಯಾಸಕರ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸದೇ ಇರುವುದು ದುರದೃಷ್ಟಕರ ಸಂಗತಿ. ಉಪನ್ಯಾಸಕರು ಮಾನಸಿಕ ತೊಳಲಾಟದಿಂದ ಆಸಕ್ತಿಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೂ ತೊಂದರೆಯಾಗಿದೆ. ಹಾಗಾಗಿ ಅವೈಜ್ಞಾನಿಕ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ಮಾಡಿರುವುದನ್ನು ತಕ್ಷಣವೇ ರದ್ದುಪಡಿಸಿ, ಇದರಲ್ಲಿನ ವೈಫಲ್ಯಗಳನ್ನು ಸರಿಪಡಿಸಿಕೊಂಡು ಮಾರ್ಗಸೂಚಿಯನ್ವಯ ನಿರಂತರವಾಗಿ ವರ್ಗಾವಣೆ ಪ್ರಕ್ರಿಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಹಾಗೂ ಪದವಿ ಪೂರ್ವ ಶಿಕ್ಷಾ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಮೈಸೂರು ಮಿತ್ರ

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ

ಕಬಿನಿಯಿಂದ 10 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಜಲಾಶಯ ಭರ್ತಿಗೆ ಇನ್ನು ಕೇವಲ 3 ಅಡಿ ಬಾಕಿ


ಹೆಚ್.ಡಿ.ಕೋಟೆ, ಜು.9(ಮಂಜು)– ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದಿಂದ 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದು ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್ ತಿಳಿಸಿದ್ದಾರೆ.

ಕೇರಳದಲ್ಲಿ ಕಳೆದ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣ ದಲ್ಲಿ ನೀರು ಹರಿದು ಬರುತ್ತಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಕಬಿನಿ ಜಲಾಶಯದ 4 ಕ್ರಸ್ಟ್ ಗೇಟ್‌ಗಳ ಮೂಲಕ 5 ಸಾವಿರ ಕ್ಯೂಸೆಕ್ ನೀರು ಹಾಗೂ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್ (ವಿದ್ಯುತ್ ಉತ್ಪಾದನಾ ಘಟಕ)ನಿಂದ 5 ಸಾವಿರ ಕ್ಯೂಸೆಕ್ ಸೇರಿದಂತೆ ಒಟ್ಟು 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದು ತಿಳಿಸಿದರು.

ಒಟ್ಟು 2284 ಗರಿಷ್ಠ ಮಟ್ಟದ ಕಬಿನಿ ಜಲಾಶಯದಲ್ಲಿ ಪ್ರಸ್ತುತ 2281 ಅಡಿಗಳಷ್ಟು ನೀರು ಶೇಖರಣೆಯಾಗಿದ್ದು, ಜಲಾಶಯ ಭರ್ತಿಗೆ ಇನ್ನು 3 ಅಡಿ ಬಾಕಿ ಇದೆ. ಜಲಾಶಯಕ್ಕೆ 15 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಕೇರಳದ ವೈನಾಡಿನಲ್ಲಿ ಇದೇ ರೀತಿ ಮಳೆ ಮುಂದುವರೆದರೆ ಜಲಾಶಯ ಬಹುಬೇಗ ಭರ್ತಿಯಾಗಲಿದೆ ಎಂದ ಅವರು, ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2276 ಅಡಿ ನೀರು ಸಂಗ್ರಹವಾಗಿತ್ತು. ಅಲ್ಲದೇ 1492 ಕ್ಯೂಸೆಕ್ಸ್ ಒಳಹರಿವು, 700 ಸಾವಿರ ಕ್ಯೂಸೆಕ್ಸ್ ಹೊರ ಹರಿವಿತ್ತು ಎಂದರು.

ಕೇರಳದ ವೈನಾಡಿನಲ್ಲಿ ಇನ್ನೂ ಹೆಚ್ಚು ಮಳೆಯಾಗುವ ಬಗ್ಗೆ ಮಾಹಿತಿ ಹಿನ್ನೆಲೆಯಲ್ಲಿ ಹೊರ ಹರಿವನ್ನು ಜಾಸ್ತಿ ಮಾಡುವ ಸಾಧ್ಯತೆಗಳಿದೆ. ಆದ್ದರಿಂದ ನದಿ ಪಾತ್ರದ ಜನ, ಜಾನುವಾರುಗಳು, ಮೀನುಗಾರರು, ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಜನಾರ್ಧನ್ ಅವರು ಮನವಿ ಮಾಡಿದ್ದಾರೆ.

ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ನದಿಗೆ ನೀರು ಹರಿಸಲಾಗುತ್ತಿದ್ದು, ಇಂದಿನಿಂದ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಲ್ಲಿ 25 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಅಲ್ಲದೇ ಜಲಾಶಯದಲ್ಲಿ ನೀರಿನ ಮಟ್ಟ ಜಾಸ್ತಿ ಆಗುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳ ತಂಡ ಕಬಿನಿ ಜಲಾಶಯದಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದರು.



ಕಬಿನಿ ಜಲಾಶಯದ ನೀರಿನ ಮಟ್ಟ

ಗರಿಷ್ಠ ಮಟ್ಟ	2284 ಅಡಿ
ಇಂದಿನ ಮಟ್ಟ	2281 ಅಡಿ
ಒಳಹರಿವು	15,000 ಕ್ಯೂಸೆಕ್
ಹೊರಹರಿವು	10,000 ಕ್ಯೂಸೆಕ್

ಹುಲಿ ಹೆಜ್ಜೆ ಗುರುತು ಪತ್ತೆ : ಆತಂಕದಲ್ಲಿ ಜನತೆ

ಹನಗೋಡು, ಜು.9(ಮಹೇಶ್)– ಸಿಂಡೇನಹಳ್ಳಿ, ಅಬ್ಬೂರು ಮತ್ತು ಹನಗೋಡು ಗ್ರಾಮಗಳ ಸುತ್ತಮುತ್ತ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಈ ಭಾಗದ ಜನತೆ ಆತಂಕಕ್ಕೆ ಒಳಗಾಗಿದ್ದಾರೆ.

ಕಳೆದ ಒಂದು ವಾರದಿಂದ ಹುಲಿ ಈ ಭಾಗದಲ್ಲಿ ಸಂಚರಿಸುತ್ತಿದ್ದು, ಇಲ್ಲಿನ ಹಾರಂಗಿ ಕಾಲುವೆ ಬಳಿ ಇರುವ ಗ್ರಾಮದ ಚಂದ್ರು ಅವರ ಜಮೀನಿನಲ್ಲಿ ಶನಿವಾರ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಸಿದ್ದಯ್ಯನಕೆರೆ ಹಾರಂಗಿ ಕಾಲುವೆ, ಮತ್ತಿಗೋಡು ಹುಣಸೂರು ಅರಣ್ಯ ವಲಯದಿಂದ ಹುಲಿ ಬರುತ್ತಿರಬಹುದು ಎಂದು ರೈತರು ಶಂಕಿಸಿದ್ದಾರೆ.

ಬೆಳಗಿನ ಜಾವ ಜಮೀನುಗಳಿಗೆ ತೆರಳಿ ಕೃಷಿ ಚಟುವಟಿಕೆಯಲ್ಲಿ ತೊಡಗುತ್ತಿದ್ದೆವು. ಹುಲಿ ಹೆಜ್ಜೆ ಗುರುತು ಕಾಣಿಸಿಕೊಂಡಿರುವುದರಿಂದ ಜಮೀನುಗಳಿಗೆ ಹೋಗಲು ಮತ್ತು ಜಾನುವಾರು ಮೇಯಿಸಲು ರೈತರು ಹೆದರುತ್ತಿದ್ದಾರೆ. ಶೀಘ್ರ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆ ಹಿಡಿಯಬೇಕು ಎಂದು ರೈತ ಮುಖಂಡರೂ ಆದ ಗ್ರಾಪಂ ಸದಸ್ಯ ಹೆಚ್.ಪಿ.ಶಿವಣ್ಣ ಒತ್ತಾಯಿಸಿದ್ದಾರೆ.

ಚಲಿಸುತ್ತಿದ್ದ ಸಾರಿಗೆ ಬಸ್ ಫುಟ್‌ಬೋರ್ಡ್ ಕುಸಿದು

ನಾಲ್ವರು ವಿದ್ಯಾರ್ಥಿನಿಯರಿಗೆ ಗಾಯ; ಸಾರ್ವಜನಿಕರಿಂದ ಪ್ರತಿಭಟನೆ

ನಂಜನಗೂಡು, ಜು.9(ಸುದರ್ಶನ್, ಮೋಹನ್)– ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಫುಟ್‌ಬೋರ್ಡ್ ಕುಸಿದ ಪರಿಣಾಮ ನಾಲ್ವರು ವಿದ್ಯಾರ್ಥಿನಿಯರು ಗಾಯಗೊಂಡಿರುವ ಘಟನೆ ತಾಲೂಕಿನ ವಳಗೆರೆ ಗ್ರಾಮದ ಬಳಿ ಶನಿವಾರ ನಡೆದಿದೆ.

ವಳಗೆರೆ ಗ್ರಾಮದ ಗುರುಸ್ವಾಮಿ ಎಂಬುವರ ಪುತ್ರಿ ಹಾಗೂ ನಗರದ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ರೇಖಾ(20) ತೀವ್ರ ಗಾಯಗೊಂಡಿದ್ದು, ಉಳಿದಂತೆ ಕಾವ್ಯ, ಬಿಂದು, ಕಾವೇರಿ ಎಂಬ ವಿದ್ಯಾರ್ಥಿನಿಯರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ವಿವರ: ತಾಲೂಕಿನ ಬಳ್ಳೂರುಹುಂಡಿ ಗ್ರಾಮದಿಂದ ಹುರ, ವಳಗೆರೆ ಗ್ರಾಮಗಳ ಮಾರ್ಗವಾಗಿ ನಂಜನಗೂಡಿಗೆ ಆಗಮಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಫುಟ್‌ಬೋರ್ಡ್ ವಳಗೆರೆ ಗ್ರಾಮದ ಬಳಿ ಮುರಿದು ಬಿದ್ದಿದ್ದು, ಈ ವೇಳೆ ಫುಟ್‌ಬೋರ್ಡ್‌ನಲ್ಲಿ ನಿಂತು ಪ್ರಯಾಣಿಸುತ್ತಿದ್ದ ನಾಲ್ವರು ವಿದ್ಯಾರ್ಥಿನಿಯರು ಕುಸಿದು ಬಿದ್ದಿದ್ದಾರೆ.



ತಕ್ಷಣ ವಿದ್ಯಾರ್ಥಿಗಳ ನೆರವಿಗೆ ಬಂದ ಸಹ ಪ್ರಯಾಣಿಕರು ಅವರನ್ನು ರಕ್ಷಿಸಿ ನಡೆಯಬಹುದಾಗಿದ್ದ ಭಾರೀ ಅನಾಹುತ ತಪ್ಪಿಸಿದರು. ಈ ವೇಳೆ ತೀವ್ರ ಗಾಯಗೊಂಡ ರೇಖಾಳನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದಂತೆ ಸಣ್ಣಮಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾದ ವಿದ್ಯಾರ್ಥಿನಿಯರಾದ ಕಾವ್ಯ, ಬಿಂದು, ಕಾವೇರಿ ಎಂಬುವರಿಗೆ ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು.

ಪ್ರತಿಭಟನೆ: ಘಟನೆಯಿಂದ ಉದ್ರಿಕ್ತಗೊಂಡ ಗ್ರಾಮಸ್ಥರು ವಳಗೆರೆ ಗ್ರಾಮದ ಬಳಿ ರಸ್ತೆ ತಡೆ ನಡೆಸಿ, ಸಂಸ್ಥೆಯ ವಿಭಾಗಾಧಿಕಾರಿ ಸ್ಥಳಕ್ಕ ಭೇಟಿ ನೀಡಬೇಕು ಎಂದು ಒತ್ತಾಯಿಸಿ ರಸ್ತೆ ತಡೆ ನಡೆಸಿ, ಸಾರಿಗೆ ಡಿಪೋ ಮ್ಯಾನೇಜರ್ ಶಂಕರ್‌ಗೆ ದಿಗ್ಬಂಧನ ವಿಧಿಸಿ, ರಾಜ್ಯ ಸಾರಿಗೆ ಸಂಸ್ಥೆ ವಿರುದ್ಧ ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖಂಡ ವಳಗೆರೆ ಪುಟ್ಟಸ್ವಾಮಿ ಮಾತನಾಡಿ, ಮಲ್ಕುಂಡಿ, ಹುರ, ಬಳ್ಳೂರು ಹುಂಡಿ, ಅಂಬಳೆ, ಹಗಿನವಾಳು, ವಳಗೆರೆ ಮಾರ್ಗವಾಗಿ ಹೆಚ್ಚಿನ ಬಸ್ ಸೌಲಭ್ಯವಿಲ್ಲದ್ದರಿಂದ ಗ್ರಾಮಗಳಿಂದ ನಗರದ ಶಾಲೆಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಮಿತಿಗಿಂತ ಹೆಚ್ಚಿನ ಪ್ರಯಾಣಿಕರನ್ನು ತುಂಬಿಕೊಂಡಿದ್ದರಿಂದ ಬಸ್‌ನ ತಳ ಕಳಚಿ ಬಿದ್ದು ಅಪಘಾತ ಸಂಭವಿಸಿದೆ. ಸಾರಿಗೆ ಸಂಸ್ಥೆ ಈ ಮಾರ್ಗವಾಗಿ ಸುಸ್ಥಿತಿಯಲ್ಲಿರುವ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ ನಂಜನಗೂಡು ಬಸ್ ಡಿಪೋ ಮ್ಯಾನೇಜರ್ ಶಂಕರ್ ಮಾತನಾಡಿ, ಸಿಬ್ಬಂದಿ ಕೊರತೆಯಿಂದ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರಲಿಲ್ಲ. ಈ ಮಾರ್ಗವಾಗಿ ಬೆಳಗಿನ ಸಮಯ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಲಾಗುವುದು. ಗಾಯಗೊಂಡು ಆಸ್ಪತ್ರೆ ಸೇರಿರುವ ವಿದ್ಯಾರ್ಥಿನಿಯ ಚಿಕಿತ್ಸೆ ವೆಚ್ಚವನ್ನು ಸಂಸ್ಥೆಯಿಂದ ಭರಿಸಲಾಗುವುದು ಎಂದರು.

ಬಸ್ ನಿಲ್ದಾಣ ದುರಸ್ತಿ, ಮೂಲ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ

ಪಿರಿಯಾಪಟ್ಟಣ, ಜು.9– ಪಟ್ಟಣದ ಬಸ್ ನಿಲ್ದಾಣ ದುರಸ್ತಿ, ಮೂಲ ಸೌಕರ್ಯಕ್ಕೆ ಆಗ್ರಹಿಸಿ ತಾಲೂಕು ಕರ್ನಾಟಕ ಕಾವಲು ಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಪಟ್ಟಣದ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ಕಾರ್ಯಕರ್ತರು ನಿಲ್ದಾಣದ ದುಸ್ಥಿತಿ ಹಾಗೂ ಅಸ್ವಚ್ಛತೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಕಾವಲು ಪಡೆ ತಾಲೂಕು ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ಸುಮಾರು 40 ವರ್ಷಗಳ ಹಿಂದೆ ನಿರ್ಮಾಣಗೊಂಡ ಈ ಬಸ್ ನಿಲ್ದಾಣ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ. ಅಲ್ಲದೇ ಸಮರ್ಪಕ ನಿರ್ವಹಣೆ ಇಲ್ಲದೇ ನಿಲ್ದಾಣದ ಎದುರು ಗಿಡಗಂಟಿ ಬೆಳೆದಿದೆ. ಪ್ರಯಾಣಿಕರ ಆಸನಗಳು ಮುರಿದು ಬಿದ್ದಿವೆ. ನಿಲ್ದಾಣದ ಮೇಲ್ಛಾವಣಿ ಶಿಥಿಲಗೊಂಡು ಮಳೆ ನೀರಿನಿಂದ ಸೋರುತ್ತಿದೆ. ಸಂಜೆ ನಂತರ ಬಸ್ಸುಗಳು ನಿಲ್ದಾಣದ ಒಳಗೆ ಬರದೆ ಮಹಿಳೆಯರು, ಮಕ್ಕಳು, ಪ್ರಯಾಣಿಕರು ರಸ್ತೆ ಬದಿಯಲ್ಲಿ ನಿಂತು ಕಾಯುವ ಪರಿಸ್ಥಿತಿ ಎದುರಾಗಿದೆ ನಿಲ್ದಾಣದ ಒಳಗಿರುವ ಹೋಟೆಲ್ ತ್ಯಾಜ್ಯದಿಂದ ಒಳಚರಂಡಿ ತುಂಬಿದೆ ಶೌಚಾಲಯದ ನಿರ್ವಹಣೆ ಇಲ್ಲದೇ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಕೂಡಲೇ ಸಂಬಂಧಪಟ್ಟವರು ಅವ್ಯವಸ್ಥೆ ಸರಿಪಡಿಸಿ ಸೌಕರ್ಯ ಕಲ್ಪಿಸದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿ, ನಿಲ್ದಾಣದ ನಿಯಂತ್ರಣಾಧಿಕಾರಿ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಕಾವಲು ಪಡೆ ಉಪಾಧ್ಯಕ್ಷ ಬಿ.ಎಸ್.ಮೋಹನ್, ನಗರಾಧ್ಯಕ್ಷ ಎ.ಜೆ.ಫ್ರಾನ್ಸಿಸ್, ಕಾರ್ಯದರ್ಶಿ ಟಿ.ಜೆ.ಯೋಗೇಶ್, ಸಹ ಕಾರ್ಯದರ್ಶಿ ಪುರುಷೋತ್ತಮ್, ಗೌರವಾಧ್ಯಕ್ಷ ಯೋಗೇಶ್, ಸಂಚಾಲಕ ಪದ್ಮನಾಭ, ಖಜಾಂಚಿ ಸತೀಶ್, ಸದಸ್ಯರಾದ ಮುನಿಸ್ವಾಮಿ, ಕುಮಾರ, ನಾಗೇಶ್ ಸೇರಿದಂತೆ ಇನ್ನಿತರರಿದ್ದರು.

ವಿದ್ಯುತ್ ಸ್ಪರ್ಶ: ಸಲಗ ಸಾವು

ಮೈಸೂರು, ಜು.9– ವಿದ್ಯುತ್ ಸ್ಪರ್ಶದಿಂದ ಕಾಡಾನೆ ಮೃತಪಟ್ಟಿರುವ ಘಟನೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ನಂಜನಗೂಡು ತಾಲೂಕಿನ ಹೆಡಿಯಾಲ ಉಪ ವಿಭಾಗದ ಮೊಳೆಯೂರು ವಲಯದಲ್ಲಿ ನಡೆದಿದೆ.

ಕಾಡಿನಿಂದ ಆಹಾರ ಅರಸಿ ನಾಡಿನತ್ತ ಬಂದ 25 ವರ್ಷದ ಸಲಗ ಹೀರೆಹಳ್ಳಿ ಗ್ರಾಮದ ಜಮೀನಿವೊಂದರಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದೆ ಎನ್ನಲಾಗಿದೆ. ವಿಷಯ ತಿಳಿದು ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಮೇಶ್ ಕುಮಾರ್, ಹೆಡಿಯಾಲ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್, ಸಿಪಿಐ ಆನಂದ್, ಸೆಸ್ಕ್ ಎಇಇ ಕಿರಣ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಜಮೀನು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಪಶು ವೈದ್ಯಾಧಿಕಾರಿ ಡಾ.ವಾಸಿಂ ಮಿರ್ಜಾ ಆನೆಯ ಮರಣೋತ್ತರ ಪರೀಕ್ಷೆ ನಡೆಸಿ, ಸ್ಥಳದಲ್ಲೇ ಕಳೇಬರವನ್ನು ಜೆಸಿಬಿ ಸಹಾಯದಿಂದ ಗುಂಡಿ ತೆಗೆದು ಹೂಳಲಾಯಿತು.

ಮಹಿಳೆಯರು ಸ್ವಂತ ಉದ್ಯಮ ಪ್ರಾರಂಭಿಸಲು ಮುಂದಾಗಿ

ತಿ.ನರಸೀಪುರ, ಜು.9(ಎಸ್‌ಕೆ)– ಮಹಿಳೆಯರು ಸ್ವಂತ ಉದ್ಯಮ ಪ್ರಾರಂಭಿಸುವ ನಿಟ್ಟಿನಲ್ಲಿ ಸಾಗಬೇಕು ಎಂದು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ತಾಲೂಕಿನ ವರುಣಾ ವ್ಯಾಪ್ತಿಯ ಹುಣಸೂರು ಗ್ರಾಮದಲ್ಲಿ ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ 2021–22ನೇ ಸಾಲಿನ ಕ್ರಿಯಾ ಯೋಜನೆಯಂತೆ 30 ಮಂದಿ ಫಲಾನುಭವಿಗಳಿಗೆ ತರಬೇತಿ ಶಿಬಿರ, ಸಮಾಜ ಕಲ್ಯಾಣ ಇಲಾಖೆ ಅನುದಾನದಡಿ ಲಿಡ್ಕರ್ ತರಬೇತಿ ಫಲಾನುಭವಿಗಳಿಗೆ ಯಂತ್ರೋಪಕರಣ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಗಳು ಉದ್ಯೋಗ ಸೃಷ್ಟಿಸುವಲ್ಲಿ ಹಾಗೂ ಸಮಸ್ಯೆ ನಿವಾರಣೆ ಮಾಡಲು ವಿಫಲವಾಗಿವೆ. ಕೋವಿಡ್ ವೇಳೆ ಅನೇಕ ಸಣ್ಣ, ಮಧ್ಯಮ ಕೈಗಾರಿಕೋದ್ಯಮಗಳು ಮುಚ್ಚಿವೆ. ಕಾರ್ಮಿಕರು, ನೌಕರರು ಬೀದಿಗೆ ಬೀಳುವಂತಾಯಿತು. ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ತುಂಬುವಲ್ಲಿ ಕೂಡ ವೈಫಲ್ಯ ಕಂಡಿದೆ ಎಂದು ಆರೋಪಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಜ್ಯೋತಿ ಕಾಂತರಾಜು, ಉಪಾಧ್ಯಕ್ಷ ನಾಗರಾಜು, ಗುರುಮಲ್ಲೇಶ್ವರ ದಾಸೋಹ ಮಠದ ಗುರುಸ್ವಾಮೀಜಿ, ಗ್ರಾಪಂ ಸದಸ್ಯರಾದ ಶಿವರಾಜು, ಮಹದೇವಸ್ವಾಮಿ, ಭಾಗ್ಯಕೃಷ್ಣ, ಮಹೇಶ್‌ಚಾರಿ, ಚಂದ್ರಮ್ಮ, ಪಾಪನಾಯಕ, ಸರೋಜಮ್ಮ, ಮುತ್ತಯ್ಯ, ಗಿರೀಶ್,



ಬಿ.ಮಹದೇವಸ್ವಾಮಿ, ನಾಗರಾಜು, ಬ್ಲಾಕ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಮಾಜಿ ತಾಪಂ ಉಪಾಧ್ಯಕ್ಷ ಬಿ.ಮರಯ್ಯ, ಗುತ್ತಿಗೆದಾರರಾದ ಮಂಟೆಲಿಂಗಪ್ಪ, ನಾಗರಾಜು, ಬಾಬು ಜಗಜೀವನರಾಂ ಅಭಿವೃದ್ಧಿ ನಿಗಮದ ಅಧಿಕಾರಿ ಜಯರಾಮ್, ಚೇತನ್, ಮುಖಂಡರಾದ ಮಹೇಶ್, ರಮೇಶ್, ಅಮಾವಾಸ್ಯೆ ಲಿಂಗರಾಜು, ಚಿನ್ನಬುದ್ಧಿ, ಸೋಮಣ್ಣನಾಯಕ, ನಾಗರಾಜು, ಕುಪ್ಯ ಭಾಗ್ಯಮ್ಮ, ವಸಂತ, ಮಸ್ರೂರ್ ಅಹ್ಮದ್, ಕೆನರಾ ಬ್ಯಾಂಕ್ ವ್ಯವಸ್ಥಾಪಕ ವಿನಯ್ ಕುಮಾರ್, ರಮೇಶ್, ಎಂ.ಸಿ. ಹುಂಡಿ ಶಿವು, ಕಿರಗಸೂರು ಕಾಂತರಾಜು, ಸಂಜೀವಿನಿ ವಲಯ ಸುನಂದ, ಪಿಡಿಒ ಸೌಮ್ಯಲತಾ, ಮಹದೇವಣ್ಣ, ನಂಜುಂಡ, ಪುಟ್ಟರಾಜು, ವೆಂಕಟೇಶ್, ನಂಜುಂಡಸ್ವಾಮಿ ಮತ್ತಿತರರಿದ್ದರು.

ಕನ್ಹಯ್ಯಲಾಲ್ ಹತ್ಯೆ ಖಂಡಿಸಿ ಹುಣಸೂರಲ್ಲಿ ಪ್ರತಿಭಟನೆ

ಹುಣಸೂರು, ಜು.9(ಕೆಕೆ)– ರಾಜಸ್ಥಾನದ ಉದಯಪುರದಲ್ಲಿ ಕನ್ಹಯ್ಯಲಾಲ್ ಹತ್ಯೆ ಖಂಡಿಸಿ ನಗರದ ಸಂಕಲ್ಪ ಕ್ಷೇಮಾಭಿವೃದ್ಧಿ ಟೈಲರ್‌ಗಳ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಸತ್ಯ ಫೌಂಡೇಶನ್‌ನ ಸತ್ಯಪ್ಪ ಮಾತನಾಡಿ, ಟೈಲರ್‌ಗಳ ಜೀವನಕ್ಕೆ ಯಾವುದೇ ಭದ್ರತೆ ಇಲ್ಲ. ಕೊರೊನಾ ವೇಳೆ ಆರ್ಥಿಕ ಸಂಕಷ್ಟ ಎದುರಿಸಿದ್ದಾರೆ. ಕಟ್ಟಡ ಕಾರ್ಮಿಕರಿಗೆ ನೀಡುವಂತೆ ಟೈಲರ್‌ಗಳಿಗೂ ತಿಂಗಳಿಗೆ 3 ಸಾವಿರ ರೂ. ಮಾಸಾಶನ ನೀಡಬೇಕು. ಬಹುತೇಕ ಟೈಲರ್‌ಗಳು ಕಡು ಬಡವರಾಗಿದ್ದು, ಇವರಿಗೆ ಸ್ವಂತ ನಿವೇಶನ ಇಲ್ಲ. ಹೀಗಾಗಿ ಟೈಲರ್‌ಗಳಿಗೆ ನಿವೇಶನ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.



ಡಿಎಸ್‌ಎಸ್ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ಯಾವುದೇ ಸಮುದಾಯವಾಗಲೀ ಕಗ್ಗೊಲೆ ಮಾಡಬಾರದು. ಸಂವಿಧಾನದಲ್ಲಿ ಕೊಲೆ ಮಾಡಲು ಯಾರಿಗೂ ಅವಕಾಶ ಇಲ್ಲ. ಕೋಮುಭಾವನೆ ಬಿಟ್ಟು ಶಾಂತಿಯಿಂದ ಬದುಕಬೇಕು ಹಾಗೂ ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಲೋಕೇಶ್, ನಾಗೇಂದ್ರ, ಸ್ವಾಮಿ, ಪಾಂಡುರಂಗರಾವ್, ಮಹದೇವ್, ಬಾಂಬೆ ಟೈಲರ್ಸ್ ಚಂದ್ರು, ಮಹದೇವರಾವ್, ನವೀನ್, ಹನಗೋಡು ಚಂದ್ರಣ್ಣ, ಜಯರಾಮ್, ಶಾಂತಮೂರ್ತಿ, ಮಹೇಂದ್ರ, ಸ್ವಾಗತ್ ಟೈಲರ್ಸ್ ಚಂದ್ರು ಮತ್ತಿತರರಿದ್ದರು.

ನಾಗಮೋಹನ್‌ದಾಸ್ ವರದಿ ಅನುಷ್ಠಾನಗೊಳಿಸಲು ಬಿಜೆಪಿ ವಿಫಲ

ಮೈಸೂರು ಜಿಲ್ಲಾ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಅಧ್ಯಕ್ಷ ತಾಯೂರು ಪ್ರಕಾಶ್ ಆರೋಪ

ತಿ.ನರಸೀಪುರ, ಜು.9(ಎಸ್‌ಕೆ)– ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಅನುಷ್ಠಾನಗೊಳಿಸಲು ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಮೈಸೂರು ಜಿಲ್ಲಾ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಅಧ್ಯಕ್ಷ ತಾಯೂರು ಪ್ರಕಾಶ್ ಆರೋಪಿಸಿದರು.

ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಸಮ್ಮಿಶ್ರ ಸರ್ಕಾರ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿತ್ತು. ಸಮಿತಿ ವರದಿ ನೀಡಿ 2 ವರ್ಷ 15 ದಿನ ಕಳೆದರೂ, ಆನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ವರದಿ ಜಾರಿಗೊಳಿಸಲು ವಿಫಲಗೊಂಡಿದೆ ಎಂದು ದೂರಿದರು.



ನಾಗಮೋಹನ್ ದಾಸ್ ಸಮಿತಿ ರಚಿಸಿದ ನಂತರ ಮತ್ತೊಂದು ಉಪ ಸಮಿತಿ ರಚಿಸುವ ಅವಶ್ಯಕತೆ ಇಲ್ಲ. ಕಾನೂನಿನಲ್ಲಿ ಅದಕ್ಕೆ ಅವಕಾಶವೂ ಇಲ್ಲ. ಒಂದು ಸಮಿತಿ ರಚಿಸಬೇಕಾದರೆ ಅಧಿವೇಶನದಲ್ಲಿ ಚರ್ಚೆಯಾಗಿ ವಿರೋಧ ಪಕ್ಷದವರ ಒಪ್ಪಿಗೆ ಪಡೆಯಬೇಕಾಗುತ್ತದೆ. ನಂತರ ಸಮಿತಿಯು ವರದಿ ನೀಡಿದ ನಂತರ ಅದನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ. ಸಮಿತಿ ಕೊಟ್ಟ ವರದಿಯಲ್ಲಿ ತಪ್ಪಿದ್ದರೆ ಕಮಿಟಿ ವಜಾ ಮಾಡಿ ನಂತರ ಮತ್ತೊಂದು ಸಬ್ ಕಮಿಟಿ ರಚಿಸಬೇಕಾಗುತ್ತದೆ. ಆದರೆ ಸರ್ಕಾರವು ಕಮಿಟಿ ವಜಾ ಮಾಡದೇ ಮತ್ತೆ ಸುಭಾಷ್ ಅಡಿ ನೇತೃತ್ವದಲ್ಲಿ ಮತ್ತೊಂದು ಸಬ್ ಕಮಿಟಿ ಮಾಡಲು ಹೊರಟಿರುವುದು ಸಂವಿಧಾನ ವಿರೋಧಿ ಕೆಲಸ ಎಂದರು.

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ತಮ್ಮ ನೇತೃತ್ವದ ಸಮಿತಿಯಡಿ ರಾಜ್ಯಾದ್ಯಂತ 143 ಸಭೆಗಳನ್ನು ಮಾಡಿ 250 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಪ.ಜಾತಿ, ಪ.ವರ್ಗಗಳ ಅಡಿ ಬರುವ 152 ಜಾತಿಗೆ ಆಗಿರುವ ಅನ್ಯಾಯ, ಸಂವಿಧಾನದಲ್ಲಿ ಸಿಗಬೇಕಾದ ಸೌಲಭ್ಯಗಳ ಬಗ್ಗೆ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಸಮಿತಿ ವರದಿ ಸಲ್ಲಿಸಿದ 15 ದಿನದೊಳಗೆ ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದ್ದ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಸರ್ಕಾರದ ಅವಧಿ ಮುಗಿಯುತ್ತಾ ಬಂದರೂ ವರದಿ ಜಾರಿಗೊಳಿಸದೇ ಹಿಂದುಳಿದವರಿಗೆ ದ್ರೋಹ ಬಗೆದಿದ್ದಾರೆ ಎಂದು ಆರೋಪಿಸಿದರು.

ವಾಲ್ಮೀಕಿ ನಾಯಕ ಸಂಘದ ತಾಲೂಕು ಅಧ್ಯಕ್ಷ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಹೆಮ್ಮಿಗೆ ಸೋಮಣ್ಣ ಮಾತನಾಡಿ, ಕರ್ನಾಟಕ ಸ್ವಾಭಿಮಾನಿ ಎಸ್‌ಸಿ ಎಸ್ಟಿ ಸಂಘಟನೆಗಳ ಒಕ್ಕೂಟ ಹಾಗೂ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಆಶ್ರಯದಲ್ಲಿ ಮೈಸೂರಿನಲ್ಲಿ ಸೋಮವಾರ ನಡೆಯುವ ಜಿಲ್ಲಾ ಮಟ್ಟದ ಬೃಹತ್ ಪ್ರತಿಭಟನೆಗೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಮುಖಂಡರು ಭಾಗವಹಿಸಬೇಕು. ತಾಲೂಕಿನ ಪ್ರತಿಯೊಂದು ಗ್ರಾಮದಿಂದಲೂ ಪ.ಜಾತಿ ಮತ್ತು ಪಪಂ ಸಮುದಾಯದ ಮುಖಂಡರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದು, ಸ್ವಾಮೀಜಿಗಳು ನಡೆಸುತ್ತಿರುವ ಸತ್ಯಾಗ್ರಹ ಬೆಂಬಲಿಸಿ ನಮ್ಮ ಸಂಘ ಸಂಪೂರ್ಣ ಬೆಂಬಲ ನೀಡಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಗ್ರಾಪಂ ಸದಸ್ಯ ಚಿಕ್ಕಹೊನ್ನಯ್ಯ, ಹೆಚ್.ಸಿ.ಸೋಮಣ್ಣ, ಯಡದೊರೆ ದೇವರಾಜು, ರಾಜಣ್ಣ, ನಾಗೇಶ್ ಹಾಜರಿದ್ದರು.

ಪದ್ಮ ಚಿತ್ರಮಂದಿರ	(ದೂ: 2521923)
ಪಕ್ಕ ಕಮರ್ಷಿಯಲ್ (ತೆ) ಶುಗರ್‌ಲೆಸ್(ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖುದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಗಿರಕಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಮ್ಮ ಹುಡುಗರು (ಕ)	4 ಪ್ರದರ್ಶನಗಳು
ಸಂಗಂ	
ಭೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಗಿರ್ಕಿ (ಕ) ಖುದಾಫೀಸ್(ಹಿ)	2 ಪ್ರದರ್ಶನಗಳು
ತಿಬ್ಬಾದೇವಿ	
ಯಾನೈ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಥೋರ್ ಲವ್ ಅಂಡ್ ಥಂಡರ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು

ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಸಲಗ ಹಾವಳಿ

ಹನಗೋಡು, ಜು.9(ಮಹೇಶ್)– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಗ್ರಾಮಗಳಲ್ಲಿ ಸಲಗದ ಹಾವಳಿ ಮುಂದುವರೆದಿದ್ದು, ಶನಿವಾರ ಮುಂಜಾನೆ ಹುಣಸೂರು ತಾಲೂಕಿನ ನೇರಳಕುಪ್ಪೆಯಲ್ಲಿ ರೈತರ ಜಮೀನಿನಲ್ಲಿ ಬೆಳೆ ತಿಂದು–ತುಳಿದು ನಾಶಗೊಳಿಸಿದೆ.



ಅಲ್ಲದೇ ಗ್ರಾಮದ ತಿಮ್ಮಶೆಟ್ಟಿ ಮುಖ್ಯರಸ್ತೆ ಬದಿಯಲ್ಲಿರುವ ತಿಮ್ಮಶೆಟ್ಟರ ಮನೆಯ ಗೋಡೆ ಹಾಗೂ ಮೇಲ್ಛಾವಣಿ ಶೀಟ್ ಕೆಡವಿದೆ. ಬಳಿಕ ಕೊಟ್ಟಿಗೆಗೆ ನುಗ್ಗಿದ ಸಲಗ ಆಡುಗಳು, ಹಸುವಿನ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. ಈ ವೇಳೆ ಮನೆಯವರ ಕೂಗಾಟದಿಂದ ಸಲಗವು ಅಲ್ಲಿಂದ ಓಡಿ ಹೋಗಿದೆ. ಬಳಿಕ ವೆಂಕಟೇಶ್ ಅವರಿಗೆ ಸೇರಿದ ಶುಂಠಿ ಬೆಳೆ ಹಾಗೂ ನೀರಾವರಿ ಪರಿಕರವನ್ನು ಹಾನಿಗೊಳಿಸಿದೆ. ಪಕ್ಕದ ತೋಟಗಳಿಗೂ ನುಗ್ಗಿ ಮಾವು, ತೆಂಗಿನ ಫಸಲನ್ನು ನಾಶ ಮಾಡಿದೆ. ಅಲ್ಲದೆ ನಾಗೇಗೌಡರ ಜಮೀನಿನಲ್ಲಿ ಶುಂಠಿ, ಜೋಳದ ಫಸಲನ್ನು ತುಳಿದು ನಾಶಪಡಿಸಿದೆ.

ವೀರನಹೊಸಹಳ್ಳಿ ವಲಯದಿಂದ ಚಂದನಗಿರಿವರೆಗೆ ರೈಲ್ವೆ ಕಂಬಿ ತಡೆಗೋಡೆ ನಿರ್ಮಿಸಲಾಗಿದೆ. ಇದೀಗ ಹುಣಸೂರು ವಲಯದ ನೇರಳಕುಪ್ಪೆ–ಕಾಳಬೂಚನಹಳ್ಳಿ ಭಾಗದಿಂದ ಕಾಡಾನೆಗಳು ಟ್ರಂಚ್(ಆನೆಕಂದಕ)ದಾಟಿ ಹೊರಬರಲಾರಂಭಿಸಿದ್ದು, ರೈತರ ಫಸಲು ಕಾಡಾನೆಗಳ ಪಾಲಾಗುತ್ತಿದೆ. ತಕ್ಷಣವೇ ಇಲ್ಲೂ ಕೂಡ ರೈಲ್ವೆ ಕಂಬಿ ತಡೆಗೋಡೆ ನಿರ್ಮಿಸಬೇಕು. ಇಲ್ಲವೇ ಆನೆ ಕಾಯಲು ಹೆಚ್ಚಿನ ಸಿಬ್ಬಂದಿ ನೇಮಿಸಬೇಕೆಂದು ತಾಪಂ ಮಾಜಿ ಸದಸ್ಯ ಕೆ.ಗಣಪತಿ ಅರಣ್ಯ ಇಲಾಖೆ ಅಧಿಕಾರಿಗಳನ್ನು ಆಗ್ರಹಿಸಿದರು.

ಮಲ್ಲೇಗೌಡ ನಿಧನ



ನಂಜನಗೂಡು, ಜು.9– ತಾಲೂಕಿನ ಕೌಲಂದೆ ಹೋಬಳಿ ನೇರಳೆ ಗ್ರಾಮದ ಯಜಮಾನರಾದ ಮಲ್ಲೇಗೌಡರು ಶನಿವಾರ ಸಂಜೆ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು.

ದಿವಂಗತರು ಪತ್ನಿ ಚಿನ್ನಮ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಭಾನುವಾರ (ಜು.10) ಬೆಳಗ್ಗೆ 11.30ಕ್ಕೆ ನೇರಳೆ ಗ್ರಾಮದಲ್ಲಿರುವ ಜಮೀನಿನಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.